ಸೋಮವಾರ, ಜನವರಿ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 6 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಎಸ್‌.ಟಿಗೆ 'ಮೊಗವೀರ'ರ ಸೇರಿಸಲು ಶಿಫಾರಸು 4

ಸ್ಥಳ ಮಹಜರು ಅನುಮತಿ: ಯೋಚಿಸಿ ನಿರ್ಧಾರ–ಹೊರಟ್ಟಿ 2B

ಕೆಪಿಎಸ್‌ಸಿ ಆಯ್ಕೆ ಪಟ್ಟಿ ಅತಂತ್ರ 2A

ಸಿ.ಎಂ ಆಪ್ತ ಸಚಿವರು ಶೀಘ್ರ ದೆಹಲಿಗೆ ಪ್ರಯಾಣ? 9

ಮುಜರಾಯಿ ಆಸ್ತಿಗಳ ಇಂಡೀಕರಣ ಮಾಡಲಾದ ವಿವರ

ವರ್ಷ	2008	2009	2010	2011	2012	2013	2014	2015	2016	2017	2018	2019	2020	2021	2022	2023	2024	ಒಟ್ಟು
ಒಟ್ಟು ಸರ್ವೆ ನಂಬರ್	659	08	05	05	14	38	07	07	06	10	02	10	142	10	644	3544	2,474	7,485
ವಿಸ್ತೀರ್ಣ (ಎಕರೆ ಮತ್ತು ಗುಂಟೆ)	2,369.13	06.06	02.36	06.05	68.07	149.07	05.06	172.06	28.34	27.20	15.04	10.20	276.06	29.04	691.14	6,052.35	5,446.5	15,413.17

19 ತಿಂಗಳಲ್ಲಿ ಜಮೀನುಗಳ ಖಾತೆ ಭದ್ರ • ವ್ಯಕ್ತಿಗಳು, ಟ್ರಸ್ಟ್‌ಗಳ ಹೆಸರಿಗೆ ಕೊಕ್

ದೇಗುಲಗಳಿಗೆ ಸೇರಿತು 11,499 ಎಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮುಜರಾಯಿ ದೇವಸ್ಥಾನಗಳ ಜಮೀನುಗಳ ಖಾತೆಗಳನ್ನು ದೇವಾಲಯಗಳ ಹೆಸರಿಗೇ ಇಂಡೀಕರಿಸುವ ಪ್ರಕ್ರಿಯೆ ಬಿರುಸು ಪಡೆದಿದೆ. 19 ತಿಂಗಳಲ್ಲಿ 11,499 ಎಕರೆ ವಿಸ್ತೀರ್ಣದ ಜಮೀನುಗಳ ಖಾತೆಗಳನ್ನು ದೇವಾಲಯಗಳ ಹೆಸರಿಗೆ ಇಂಡೀಕರಿಸಲಾಗಿದೆ.

2023ರ ಮೇ ತಿಂಗಳಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರುವ ಹೊತ್ತಿನಲ್ಲಿ, ಇಲಾಖೆಯ ಅಧೀನದ ದೇವಸ್ಥಾನಗಳಿಗೆ ಸಂಬಂಧಿಸಿದ 3,914 ಎಕರೆ ಆಸ್ತಿಗಳ ದಾಖಲೆಗಳನ್ನು ಮಾತ್ರ ಸಂಬಂಧಿಸಿದ ದೇವಾಲಯಗಳ ಹೆಸರಿಗೆ ಇಂಡೀಕರಣ ಮಾಡಲಾಗಿತ್ತು. ಒಟ್ಟು 15,413 ಎಕರೆ 17 ಗುಂಟೆ ಜಮೀನುಗಳ ದಾಖಲೆಗಳನ್ನು ದೇವಾಲಯಗಳ ಹೆಸರಿಗೆ ಇಂಡೀಕರಣ ಮಾಡಿದಂತಾಗಿದೆ.

ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ 34,564 ದೇವಾಲಯಗಳಿವೆ. ಇವುಗಳಿಗೆ ಸೇರಿದ ಆಸ್ತಿಗಳ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಲಿಲ್ಲ. ಪಹಣಿ, ಮ್ಯುಟೇಷನ್ ದಾಖಲೆಗಳಲ್ಲಿ ದೇವಾಲಯಗಳ ಹೆಸರನ್ನು ಸ್ಪಷ್ಟವಾಗಿ ದಾಖಲಿಸುತ್ತಿರಲಿಲ್ಲ. ಹಲವು ಪ್ರಕರಣಗಳಲ್ಲಿ ವ್ಯಕ್ತಿಗಳು, ಅನಧಿಕೃತ ಟ್ರಸ್ಟ್‌ಗಳ ಹೆಸರಿನಲ್ಲೇ ಈ ದೇವಾಲಯಗಳ ಆಸ್ತಿಗಳ ದಾಖಲೆಗಳಿದ್ದವು.

4ನೇ ಪುಟ ನೋಡಿ

ಇನ್ನೂ ಎರಡು ವರ್ಷ ಬೇಕಿದೆ: ರಾಮಲಿಂಗಾರೆಡ್ಡಿ

'ನಾನು ಮುಜರಾಯಿ ಸಚಿವನಾದ ಬಳಿಕ ದೇವಸ್ಥಾನಗಳ ಆಸ್ತಿಗಳ ದಾಖಲೆ ಮಾಹಿತಿ ಪರಿಶೀಲಿಸಿದ್ದೆ. ನಿರ್ವಹಣೆ ಸಮರ್ಪಕವಾಗಿಲ್ಲ ಎಂಬುದು ಗಮನಕ್ಕೆ ಬರುತ್ತಿದ್ದಂತೆಯೇ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ, ಪಹಣಿ ಇಂಡೀಕರಣ ಪ್ರಕ್ರಿಯೆ ಆರಂಭಿಸಲು ಸೂಚಿಸಿದ್ದೆ. ಪರಿಣಾಮ ಎರಡು ವರ್ಷಗಳಲ್ಲಿ 11,499 ಎಕರೆ ವಿಸ್ತೀರ್ಣದ ಆಸ್ತಿಗಳ ದಾಖಲೆಗಳನ್ನು ಸರಿಪಡಿಸಲಾಗಿದೆ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಪ್ರತಿ ತಿಂಗಳೂ ಮುಜರಾಯಿ ಆಸ್ತಿಗಳ ಭೂಮಾಪನ, ದಾಖಲೆ ಪರಿಶೀಲನೆ, ತಿದ್ದುಪಡಿ, ಇಂಡೀಕರಣಕ್ಕೆ ಗುರಿ ನಿಗದಿಪಡಿಸಲಾಗಿದೆ. ಎಲ್ಲ ದೇವಾಲಯಗಳ ಆಸ್ತಿಗಳ ದಾಖಲೆಗಳನ್ನು ಸರಿಪಡಿಸಿ, ದೇವಸ್ಥಾನಗಳ ಹೆಸರಿಗೆ ಸರಿಯಾದ ಕ್ರಮದಲ್ಲಿ ದಾಖಲಿಸಲು ಇನ್ನೂ ಎರಡು ವರ್ಷ ಬೇಕಾಗುತ್ತದೆ' ಎಂದರು.

ಅಂಕಿ ಅಂಶಗಳು

1.86 ಲಕ್ಷ
ರಾಜ್ಯದಲ್ಲಿರುವ ಒಟ್ಟು ದೇವಸ್ಥಾನಗಳು

34,564
ಮುಜರಾಯಿಗೆ ಸೇರಿದ ದೇವಸ್ಥಾನಗಳು

205
'ಎ' ವರ್ಗದ ದೇವಸ್ಥಾನಗಳು

193
'ಬಿ' ವರ್ಗದ ದೇವಸ್ಥಾನಗಳು

34,166
'ಸಿ' ವರ್ಗದ ದೇವಸ್ಥಾನಗಳು

ಚಿನಕುರುಳಿ

ಪ್ರಕಾಶ್ ಶೆಟ್ಟಿ

ನಂದಿತು 'ದ್ವೀಪ'ದ ದೀಪ...

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹಿರಿಯ ಸಾಹಿತಿ, ಜಿಲ್ಲೆಯ ಸಾಗರದ ನಿವಾಸಿ ನಾ.ಡಿಸೋಜಾ (87) ವಯೋಸಹಜ ಅನಾರೋಗ್ಯದಿಂದ ಭಾನುವಾರ ರಾತ್ರಿ 7.50ಕ್ಕೆ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ ಫಿಲೋಮಿನಾ, ಪುತ್ರಿ ಶೋಭಾ, ಪುತ್ರರಾದ ನವೀನ್ ಹಾಗೂ ಸಂತೋಷ್ ಇದ್ದಾರೆ. 'ಮೃತರ ಪಾರ್ಥಿವ ಶರೀರವನ್ನು ಸೋಮವಾರ ಮಧ್ಯಾಹ್ನದ ನಂತರ ಸಾಗರದ ನೆಹರೂ ನಗರದ 2ನೇ ಕ್ರಾಸ್‌ನಲ್ಲಿರುವ ಸ್ವಗೃಹದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಮಂಗಳವಾರ ಸಂಜೆ 4ಕ್ಕೆ ಸಾಗರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ಪುತ್ರ ನವೀನ್ ಡಿಸೋಜಾ ತಿಳಿಸಿದ್ದಾರೆ.

ಅಭಿವೃದ್ಧಿ, ಮುಳುಗಡೆ ಹಾದಿಯಲ್ಲಿ ಸಹ್ಯಾದ್ರಿಯ ಒಡಲ ಪಲ್ಲಟ, ಮಲೆನಾಡಿನ ಜನರ ಬೇಗುದಿಯನ್ನು ಬರಹದಲ್ಲಿ ಕಟ್ಟಿಕೊಟ್ಟು ನಾಡಿನ ಮುಂದಿಟ್ಟಿದ್ದ ನಾ.ಡಿಸೋಜಾ (ನಾರ್ಬರ್ಟ್ ಡಿಸೋಜಾ) ಮೂಲತಃ ಉತ್ತರ ಕನ್ನಡ ಜಿಲ್ಲೆ ಮುರುಡೇಶ್ವರದಿಂದ ಸಾಗರಕ್ಕೆ ಶಿಕ್ಷಕ ವೃತ್ತಿ ಮಾಡಲು ಬಂದಿದ್ದ ಫಿಲಿಪ್ ಡಿಸೋಜಾ ಹಾಗೂ ರೂಪಿನಾ ಬಾಯಿ ದಂಪತಿ ಪುತ್ರ. 1937ರ ಜೂನ್ 6ರಂದು ಸಾಗರದಲ್ಲಿ ಜನಿಸಿದ ಅವರು, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಶಿಕ್ಷಣ ಪಡೆದಿದ್ದರು.



06.06.1937 - 05.01.2025

7ನೇ ಪುಟ ನೋಡಿ

ಸಾಣೇಹಳ್ಳಿ ಶ್ರೀಗೆ 'ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕೊಡಮಾಡುವ 'ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ'ಗೆ ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ₹5 ಲಕ್ಷ ನಗದು, ಸ್ಮರಣಿಕೆ ಮತ್ತು ಫಲಕ ಒಳಗೊಂಡಿದೆ.

4ನೇ ಪುಟ ನೋಡಿ

'ಜಾತಿಗಣತಿ: ಸಂಪುಟ ಸಭೆಯಲ್ಲಿ ಮಂಡನೆ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಜಾತಿಗಣತಿ ಕುರಿತು ಎಚ್‌.ಕಾಂತರಾಜ ಆಯೋಗದ ವರದಿ ಜಾರಿಗೆ ಬಹಳ ವರ್ಷಗಳಿಂದ ಒತ್ತಾಯ ಇದೆ. ಸರ್ಕಾರ ವರದಿಯನ್ನು ಈಗಾಗಲೇ ಸ್ವೀಕರಿಸಿಯಾಗಿದೆ. ಸಚಿವ ಸಂಪುಟದ ಮುಂದಿನ ಸಭೆಯಲ್ಲಿ ವರದಿಯನ್ನು ಮಂಡಿಸಿ ಚರ್ಚೆ ನಡೆಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕುರುಬ ಸಮಾಜ ಹಾಗೂ ಸಿದ್ದರಾಮಯ್ಯ ಅಭಿಮಾನಿ ಬಳಗಗಳು ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕನಕದಾಸರ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ನಾವು ಜಾತಿ ಜನಗಣತಿ ಪರ ಇದ್ದೇವೆ. ಜಾತಿ ಆಧಾರದ ಮೇಲೇ ಬಡವರನ್ನು, ಶೋಷಿತರನ್ನು ಗುರುತಿಸುವ ಕೆಲಸವಾಗುತ್ತದೆ. ಅದರ ಆಧಾರದ ಮೇಲೇ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಸಮಾಜದಲ್ಲಿ ಸಮಾನತೆ ತರಲು ಇದೆಲ್ಲ ಅವಶ್ಯ. ಹೀಗಾಗಿ ಕಾಂತರಾಜ ಆಯೋಗದ ವರದಿ ಜಾರಿಗೆ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಲಿದೆ' ಎಂದು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ, ದಲಿತ ಸಮುದಾಯಗಳ ಪರ ಇದ್ದಾರೆ. ನಾವೂ ಅವರೊಂದಿಗೆ ಇದ್ದೇವೆ. ಅನ್ನ ನೀಡಿದವರು ಅಧಿಕಾರದಲ್ಲಿದ್ದರೆ ನಾವೂ ನೆಮ್ಮದಿಯಾಗಿರಲು ಸಾಧ್ಯ. ಶೋಷಿತ ಸಮುದಾಯಗಳು ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂದು ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

'ಆಶಾ' ಮುಷ್ಕರ: ಸಿಬ್ಬಂದಿಗೆ ರಜೆ ನೀಡದಿರಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಶಾ' ಕಾರ್ಯಕರ್ತೆಯರು ಇದೇ 7ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗಿರುವುದರಿಂದ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ವ್ಯತ್ಯಯವಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆಯು ತನ್ನ ಅಧಿಕಾರಿಗಳಿಗೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಆಶಾ ಕಾರ್ಯಕರ್ತೆಯರು ಕಾನೂನು ಬಾಹಿರವಾದ ಹೋರಾಟದಲ್ಲಿ ಭಾಗವಹಿಸದಂತೆ ಜಿಲ್ಲಾಡಳಿತ ಮನವೊಲಿಸಬೇಕು. 7ರಿಂದ ಕರ್ತವ್ಯಕ್ಕೆ ಗೈರಾಗುವ ಆಶಾ ಕಾರ್ಯಕರ್ತೆಯರ ಮಾಹಿತಿಯನ್ನು ಪಡೆಯಬೇಕು. ಸೇವೆ ಒದಗಿಸಲು ತೊಡಕಾದ ಸ್ಥಳಗಳಲ್ಲಿ ಇಲಾಖೆಯಿಂದ ಈಗಾಗಲೇ ನೀಡಿರುವ ಮಾನದಂಡದಂತೆ ಆಶಾ ಕಾರ್ಯಕರ್ತೆಯರ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಎಂದು ತಿಳಿಸಲಾಗಿದೆ.

ಸಮುದಾಯ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಅಂಗನವಾಡಿ ಕಾರ್ಯಕರ್ತರ ಸಹಕಾರ ಪಡೆದು, ಆರೋಗ್ಯ ಸೇವೆಯಲ್ಲಿ ತೊಡಕಾಗದಂತೆ ಕ್ರಮವಹಿಸಬೇಕು. ಇಲಾಖೆಯ ಎಲ್ಲ ಅಧಿಕಾರಿ, ಸಿಬ್ಬಂದಿಗೆ ವೈದ್ಯಕೀಯ ತುರ್ತು ಹೊರತುಪಡಿಸಿ ಯಾವುದೇ ರಜೆ ನೀಡಬಾರದು ಎಂದು ಸೂಚಿಸಲಾಗಿದೆ.

6 ನಕ್ಸಲರು ಶೀಘ್ರ ಮುಖ್ಯವಾಹಿನಿಗೆ

ಚಿಕ್ಕಮಗಳೂರು: ಕಾಡಿನಲ್ಲಿ ಉಳಿದಿರುವ ನಕ್ಸಲರನ್ನು ಮರಳಿ ಮುಖ್ಯವಾಹಿನಿಗೆ ತರುವ ಪ್ರಕ್ರಿಯೆ ಆರಂಭವಾಗಿದ್ದು, ಮುಂಡಗಾರು ಲತಾ ಸೇರಿ ಆರು ಜನ ಶೀಘ್ರವೇ ಮುಖ್ಯವಾಹಿನಿಗೆ ಬರಲಿದ್ದಾರೆ. 2B



ಕುಮಾರಕೃಪಾ ರಸ್ತೆಯಲ್ಲಿ ನಡೆದ ಚಿತ್ರಸಂತೆಯಲ್ಲಿ ಇರಿಸಲಾಗಿದ್ದ ಕಲಾಕೃತಿಗಳನ್ನು ಕಲಾಪ್ರೇಮಿಗಳು ಕುತೂಹಲದಿಂದ ವೀಕ್ಷಿಸಿದರು (ಎಡಚಿತ್ರ) ಚಿತ್ರಸಂತೆ ವೀಕ್ಷಣೆಗೆ ಸೇರಿದ್ದ ಕಲಾಪ್ರೇಮಿಗಳ ಸಮೂಹ ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

22ನೇ ಚಿತ್ರಸಂತೆಗೆ ಹರಿದುಬಂದ ಜನಸಾಗರ • ಚಿತ್ತಾಕರ್ಷಕ ಕಲಾಕೃತಿಗಳ ಪ್ರದರ್ಶನ, ಮಾರಾಟ

ಕಲಾ ಅನಾವರಣ; ಆಸಕ್ತರಿಗೆ ರಸದೌತಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯ ಉದ್ದಕ್ಕೂ ಇಕ್ಕೆಲಗಳಲ್ಲಿ ಕಣ್ಮನ ಸೆಳೆಯುವ ಕಲಾಕೃತಿಗಳು, ನಡುನಡುವೆ ಸ್ಥಳದಲ್ಲಿಯೇ ವ್ಯಕ್ತಿಯ ಭಾವಚಿತ್ರ ಹಾಗೂ ವ್ಯಂಗ್ಯಚಿತ್ರ ರಚಿಸುವ ಕಲಾವಿದರು. ಮಕ್ಕಳು ಮತ್ತು ಉದಯೋನ್ಮುಖ ಕಲಾವಿದರಿಗೆ ಚಿತ್ರ ಬರೆಯಲು ಅಗತ್ಯ ಸಾಮಗ್ರಿಗಳ ಮಾರಾಟ...

ಈ ದೃಶ್ಯ ಕಂಡುಬಂದದ್ದು ಕುಮಾರಕೃಪಾ ರಸ್ತೆಯಲ್ಲಿ. ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 22ನೇ ಚಿತ್ರಸಂತೆಯಲ್ಲಿ ಕಲಾಲೋಕವೇ ಅನಾವರಣಗೊಂಡಿತ್ತು. ಈ ಚಿತ್ರಸಂತೆಯು ಕಲಾವಿದರ ಪ್ರತಿಭೆಗೆ ವೇದಿಕೆ ಕಲ್ಪಿಸುವುದರ ಜತೆಗೆ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೂ ಅವಕಾಶ ಒದಗಿಸಿತ್ತು. ಚಿತ್ರಸಂತೆಯು ಕಲಾವಿದರು ಮತ್ತು ಕಲಾಸಕ್ತರ ನಡುವೆ ಬಾಂಧವ್ಯ ಬೆಸೆಯುವ ಸೇತುವೆಯಾಯಿತು. ವರ್ಣಮಯ ಕಲಾಕೃತಿಗಳು ಕಲಾರಸಿಕರ ಸಂಭ್ರಮವನ್ನೂ ಇಮ್ಮಡಿ ಗೊಳಿಸಿದವು.

> ಚಿತ್ರಸಂತೆಗೆ ಹಲವು ವರ್ಷಗಳಿಂದ ಬರುತ್ತಿದ್ದೇನೆ. ಹೆಚ್ಚಾಗಿ ಉತ್ಸವಗಳ ಕಲಾಕೃತಿ ರಚಿಸುತ್ತಿದ್ದು, ಕಲಾಸಕ್ತರಿಂದ ಉತ್ತಮ ಸ್ಪಂದನ ವ್ಯಕ್ತವಾಗುತ್ತಿದೆ
> **ಮೀನಾಕ್ಷಿ ಸದಲಗಿ,** ಕಲಾವಿದೆ

ಈ ಬಾರಿಯ ಚಿತ್ರಸಂತೆಯನ್ನು ಹೆಣ್ಣುಮಕ್ಕಳಿಗೆ ಸಮರ್ಪಣೆ ಮಾಡಲಾಗಿತ್ತು. ಪರಿಷತ್ತಿನ ಪ್ರವೇಶ ದ್ವಾರದಲ್ಲಿಯೇ ಬಾಲಕಿಯ ಬೃಹದಾಕಾರದ ಕಲಾಕೃತಿ ನಿರ್ಮಿಸಲಾಗಿತ್ತು. ಇದು ನೆರೆದಿದ್ದ ಕಲಾಪ್ರೇಮಿಗಳ ಗಮನಸೆಳೆಯಿತು. ಪರಿಷತ್ತಿನ ಆವರಣದಲ್ಲಿ ಕಲಾಕೃತಿಗಳ ಜತೆಗೆ ಕರಕುಶಲ ವಸ್ತುಗಳು ಹಾಗೂ ಕಲಾಕೃತಿ ರಚನೆಗೆ ಅಗತ್ಯವಿರುವ ಬಣ್ಣ ಮತ್ತು ಅಗತ್ಯ ವಸ್ತುಗಳನ್ನೂ ಮಾರಾಟಕ್ಕೆ ಇರಿಸಲಾಗಿತ್ತು.

ಹಲವು ಬಗೆಯ ಕಲಾಕೃತಿ: ಜಲವರ್ಣ, ಆ್ಯಕ್ರಿಲಿಕ್, ಮಧುಬನಿ, ತೈಲವರ್ಣ, ಡಿಜಿಟಲ್ ಪೇಂಟಿಂಗ್, ತಂಜಾವೂರು ಶೈಲಿ, ರಾಜಸ್ಥಾನಿ ಶೈಲಿ, ಕಾಫಿ ಪೇಂಟಿಂಗ್, ಮಂಡಲ ಕಲೆ, ಕಲಾಂಕಾರಿ ಕಲೆ ಸೇರಿ ನಾನಾ ಪ್ರಕಾರದ ಕಲಾಕೃತಿಗಳು ಗಮನಸೆಳೆದವು. ಉಬ್ಬು ಚಿತ್ರಗಳು ಕೂಡ ಪ್ರದರ್ಶನದಲ್ಲಿ ಇದ್ದವು.

ರಸ್ತೆಯ ಉದ್ದಕ್ಕೂ ವ್ಯಕ್ತಿಯ ಭಾವಚಿತ್ರ ಹಾಗೂ ವ್ಯಂಗ್ಯ ಚಿತ್ರಗಳನ್ನು ಬಿಡಿಸುವವರು ಕಾಣಸಿಗುತ್ತಿದ್ದರು. ಪುಟ್ಟ ಮಕ್ಕಳು ಭಾವಚಿತ್ರ ಬಿಡಿಸಿಕೊಂಡು ಸಂಭ್ರಮಿಸಿದರೆ, ಯುವಕ ಯುವತಿಯರು ಹಚ್ಚೆ ಹಾಕಿಸಿಕೊಂಡು ಖುಷಿಪಟ್ಟರು.

1,500 ಕಲಾವಿದರು ಭಾಗಿ

ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಿದರು. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಂಡಿದ್ದರು. ವೃತ್ತಿನಿರತ ಕಲಾವಿದರ ಜತೆಗೆ ಹವ್ಯಾಸಿ ಕಲಾವಿದರು ಹಾಗೂ ಕಲಾ ವಿದ್ಯಾರ್ಥಿಗಳೂ ಭಾಗವಹಿಸಿ, ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದರು.

ಶಿವಾನಂದ ಸರ್ಕಲ್‌ನಿಂದ ವಿಂಡ್ಸನ್ ಮ್ಯಾನರ್‌ವರೆಗೆ ಕುಮಾರಕೃಪಾ ರಸ್ತೆಯಲ್ಲಿ, ಕ್ರೆಸೆಂಟ್ ರಸ್ತೆಯ ಆಯ್ದ ಸ್ಥಳದಲ್ಲಿ, ಗಾಂಧಿಭವನ ರಸ್ತೆಯಲ್ಲಿ ಕಲಾಕೃತಿಗಳ ಪ್ರದರ್ಶನ ನಡೆಯಿತು. ಚಿತ್ರಸಂತೆ ಪ್ರಯುಕ್ತ ಚಿತ್ರಕಲಾ ಪರಿಷತ್ತಿನ 13 ಗ್ಯಾಲರಿಗಳಲ್ಲಿ ಪ್ರದರ್ಶನ ಪ್ರಾರಂಭವಾಗಿದ್ದು, ಈ ಗ್ಯಾಲರಿಗಳಲ್ಲಿ ಇದೇ 31ರವರೆಗೂ ಪ್ರದರ್ಶನ ನಡೆಯಲಿದೆ.

₹15 ಲಕ್ಷದವರೆಗಿನ ಕಲಾಕೃತಿ

ಚಿತ್ರಸಂತೆಯಲ್ಲಿ ₹ 1 ಸಾವಿರದಿಂದ ₹15 ಲಕ್ಷದವರೆಗಿನ ಕಲಾಕೃತಿಗಳಿದ್ದವು. ಕೆಲವರು ದುಬಾರಿ ಬೆಲೆ ಕೇಳಿ ಅಚ್ಚರಿಪಟ್ಟರೂ, ಕಲಾವಿದರ ಪ್ರತಿಭೆ ಮತ್ತು ಶ್ರಮಕ್ಕೆ ತಲೆದೂಗಿದರು. ಹೈದರಾಬಾದ್ ಕಲಾವಿದ ಪರಶುರಾಮ್ ಅವರು ತೈಲವರ್ಣ ಬಳಸಿ ಜಲ್ಲಿಕಟ್ಟು ಕ್ರೀಡೆಯನ್ನು ಚಿತ್ರಿಸಿದ್ದು, ಇದಕ್ಕೆ ₹ 15 ಲಕ್ಷ ನಿಗದಿಪಡಿಸಿದ್ದರು. ಇದು ಎಂಟು ಅಡಿ ಉದ್ದ ಹಾಗೂ ಆರು ಅಡಿ ಅಗಲವಿದ್ದು, ಇದಕ್ಕೆ ತೇಗದ ಮರದ ಚೌಕಟ್ಟು ಬಳಸಲಾಗಿದೆ.

ತಮಿಳುನಾಡಿನ ಕೊಯಮತ್ತೂರು ಕಲಾವಿದ ಜೀವನ್ ವಿ. ಶಕ್ತಿವೇಲು ಅವರು ರಚಿಸಿದ ‘ಚಿತಿರೈ ತಿರುವಿಝಾ’ ಉತ್ಸವದ ಕಲಾಕೃತಿ ಗಮನ ಸೆಳೆಯಿತು. ಇದಕ್ಕೆ ₹ 7 ಲಕ್ಷ ನಿಗದಿಪಡಿಸಲಾಗಿತ್ತು. ಕ್ಯಾನ್ವಾಸ್ ಮೇಲೆ ಚಿತ್ರಿಸಿದ ಈ ಕಲಾಕೃತಿ, 8x6 ಅಡಿಯಿದೆ. ‘ಇದಕ್ಕೆ ಆರು ಇಂಚು ಅಗಲದ ಹಲಗೆಯನ್ನು ಬಳಸಲಾಗಿದ್ದು, ಚಿತ್ರಿಸಲು ಒಂದು ವರ್ಷ ಬೇಕಾಯಿತು’ ಎಂದು ಜೀವನ್ ವಿ. ಶಕ್ತಿವೇಲು ತಿಳಿಸಿದರು.

ಕೊಯಮತ್ತೂರಿನ ಕಲಾವಿದ ಸತೀಶ್ ಎಂಬುವವರು ಕಲಾಕೃತಿಯೊಂದರಲ್ಲಿ ಗಾಂಧೀಜಿ ಸೇರಿ ಜಗತ್ತಿನ 101 ಪ್ರಸಿದ್ಧ ವ್ಯಕ್ತಿಗಳನ್ನು ತಂದಿದ್ದಾರೆ. 3x7 ಅಡಿ ಅಳತೆಯ ಈ ಕಲಾಕೃತಿಗೆ ₹ 4 ಲಕ್ಷ ಗೊತ್ತುಪಡಿಸಲಾಗಿದ್ದು, ಈ ಚಿತ್ರ ಬರೆಯಲು ಅವರು ಆರು ತಿಂಗಳು ತೆಗೆದುಕೊಂಡಿದ್ದಾರೆ. ಮೈಸೂರಿನ ವಿಂಟೇಜ್ ಹಾರ್ವೆಸ್ಟ್ ತಂಡವು 5x7 ಅಡಿ ಅಳತೆಯ ಮರದ ಕಲಾಕೃತಿಯನ್ನು ನಿರ್ಮಿಸಿದೆ. ಬಾಲಕಿಯೊಬ್ಬಳು ಮಂದಿರ ವೀಕ್ಷಿಸುತ್ತಿರುವ ಈ ಕಲಾಕೃತಿ ₹4 ಲಕ್ಷ ಬೆಲೆ ಹೊಂದಿದೆ.

ಮನೆಗೊಂದು ಕಲಾಕೃತಿ ಇರಬೇಕು: ಮುಖ್ಯಮಂತ್ರಿ

ಬೆಂಗಳೂರು: ‘ಕಲಾಕೃತಿಗಳನ್ನು ಖರೀದಿಸುವ ಮೂಲಕ ಕಲೆ, ಕಲಾವಿದರನ್ನು ಪ್ರೋತ್ಸಾಹಿಸಬೇಕು. ಪ್ರತಿ ಮನೆಯಲ್ಲಿ ಕನಿಷ್ಠ ಒಂದಾದರೂ ಕಲಾಕೃತಿ ಇರುವಂತಾಗಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 22ನೇ ಚಿತ್ರಸಂತೆ ಉದ್ಘಾಟಿಸಿ, ಮಾತನಾಡಿದರು.

‘ಚಿತ್ರಸಂತೆಯಲ್ಲಿ 22 ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿರುವುದು ಶ್ಲಾಘನೀಯ. ಜಗತ್ತಿನ ಯಾವ ಭಾಗದಲ್ಲಿಯೂ ಈ ರೀತಿ ಚಿತ್ರಸಂತೆ ನಡೆಯುವುದನ್ನು ನಾನು ನೋಡಿಲ್ಲ. ಅನೇಕ ಚಿತ್ರಕಲಾವಿದರಿಗೆ ಚಿತ್ರಸಂತೆ ವೇದಿಕೆ ಕಲ್ಪಿಸಿಕೊಡುತ್ತಿದ್ದು, ಕಲಾಪ್ರೇಮಿಗಳಿಗೂ ಒಂದೇ ಸ್ಥಳದಲ್ಲಿ ವೈವಿಧ್ಯಮಯ ಕಲಾಕೃತಿಗಳು ದೊರೆಯಲಿವೆ’ ಎಂದರು.

‘ಈ ಬಾರಿಯ ಚಿತ್ರಸಂತೆಯನ್ನು ಹೆಣ್ಣುಮಕ್ಕಳಿಗೆ ಸಮರ್ಪಣೆ ಮಾಡಿರುವುದು ವಿಶೇಷ. ಗಂಡು ಮಗುವಿಗೆ ಶಿಕ್ಷಣ ನೀಡಿದರೆ ಒಬ್ಬ ವ್ಯಕ್ತಿಗೆ ಶಿಕ್ಷಣ ನೀಡಿದಂತಾಗುತ್ತದೆ. ಒಬ್ಬ ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ ಕುಟುಂಬವೇ ಕಲಿತಂತಾಗುತ್ತದೆ’ ಎಂದರು.

₹ 5 ಕೋಟಿ ವಹಿವಾಟು

‘ಈ ಬಾರಿಯ ಚಿತ್ರಸಂತೆಯಲ್ಲಿ ಅಂದಾಜು ₹ 5 ಕೋಟಿ ವಹಿವಾಟು ನಡೆದಿದೆ. ಕಳೆದ ಬಾರಿಗಿಂತ ಶೇ 20 ರಷ್ಟು ವಹಿವಾಟು ಹೆಚ್ಚಾಗಿದೆ. 4 ಲಕ್ಷ ಜನರು ಭೇಟಿ ನೀಡಿದ್ದರು’ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದರು.

‘ಒಂದು ಚಿತ್ರ ಸಾವಿರ ಪದಗಳಿಗಿಂತಲೂ ಹೆಚ್ಚು ಪ್ರಭಾವಶಾಲಿ. ಚಿತ್ರದ ಮೂಲಕ ಜನಜೀವನ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸಬಹುದಾಗಿದೆ. ಚಿತ್ರಕಲಾ ಪರಿಷತ್ತು ಉತ್ತಮ ಕೆಲಸ ಮಾಡುತ್ತಿದೆ’ ಎಂದು ಶ್ಲಾಘಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ ಸುಧಾಕರ್ ಅವರು ‘ಕಲಾ ಪ್ರದರ್ಶನ’ಕ್ಕೆ ಚಾಲನೆ ನೀಡಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಂಸದ ಪಿ.ಸಿ. ಮೋಹನ್, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಉಪಾಧ್ಯಕ್ಷ ಟಿ. ಪ್ರಭಾಕರ್ ಉಪಸ್ಥಿತರಿದ್ದರು.

ಚಿತ್ರಸಂತೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರಿಗೆ ಬಿ.ಎಲ್‌. ಶಂಕರ್ ಅವರು ಕಲಾಕೃತಿ ನೀಡಿ ಗೌರವಿಸಿದರು. ಶಾಸಕ ಎ.ಎಸ್‌. ಪೊನ್ನಣ್ಣ, 'ಗ್ಯಾರಂಟಿ' ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಬೈರತಿ ಸುರೇಶ್, ಟಿ. ಪ್ರಭಾಕರ್, ಎಂ.ಸಿ ಸುಧಾಕರ್ ಹಾಗೂ ಪಿ.ಸಿ. ಮೋಹನ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS
Business Offers
Finance
NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

PERSONAL
Change of Name
CHANGE OF NAME
I, Chikka Lakshmamma W/o Devaraju, residing at # 41, Near Nanjundeshwara Temple, Kapila Nagar, Hegganahalli,Vishwaneedam Post, Bengaluru-560091, declare that my name is wrongly mentioned in my daughter's school & college certificates as Lakshmi instead of CHIKKA LAKSHMAMMA Vide affadiavit dt:23.12.2024, before Notary B. Prasanna, Bengaluru.

CHANGE OF NAME
I, Ankitha Pathiki and Ankitha Ramkumar Pathiki D/o Ramkumar Pathiki, residing at D001 Mantri Terrace, Bilekahalli, Bangalore -560076 declare that above names pertain to me only, Vide affidavit dated 31/12/2024. Sworn before Notary Aravind Patil, Jayanagar, Bangalore. Henceforth I shall be called Ankitha Pathiki only.

RENTAL PROPERTIES
Accommodation Available
Commercial
AVAILABLE GROUND Floor 1600 sqft, 1st Floor 1500 Sqft, 200 To 800 Sqft For Rent in Koramangala Call 9845167755

JOB OPPORTUNITIES
General
WANTED OFFICE ASSISTANT & HELPER/ PACKER (Male) Bommanahalli (Bangalore) Ph:9980140661/ 08025631755 starsilks@gmail.com

WANTED FACTORY HELPERS for a Laundry in Bannergatta Road, Bangalore Salary 15,000 + Food + accommodation Timings 7am to 7pm Contact: 8050666007

Marketing & Sales
JOBS FOR WOMEN (Reliance) Age above 30 Years, Any Degree, Salary 18000 to 25000 Incentives Bonus, PF, ESI Ph: 7899408159

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗಳನ್ನು **ಶ್ರೀಮತಿ ನೀಲು ಮಾರ್ಕೋಸ್,** (Aka ಶ್ರೀಮತಿ ನೀಲು ಕುರುವಿಲ್ಲ), ಶ್ರೀ ಜೋಯಿ ಕುರುವಿಲ್ಲ ಅವರ ಪತ್ನಿ ಮತ್ತು ಶ್ರೀ ಸಿ.ಟಿ. ಮಾರ್ಕೋಸ್ ಅವರ ಪುತ್ರಿ, 80/9, ಕೇಲಚಂದ್ರ ಲೇನ್, ಪ್ರೈಡ್ ರಿಗಾಲಿಯ ಅಪಾರ್ಟ್‌ಮೆಂಟ್ ಹತ್ತಿರ, ದೊಡ್ಡಮ್ಮ ಲೇಔಟ್, ಹುಳಿಮಾವು, ಬೆಂಗಳೂರು-560076. ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿಯವರು ಹೇಳುತ್ತಿರುವುದೇನೆಂದರೆ ಷೆಡ್ಯೂಲ್ ಆಸ್ತಿಯನ್ನು ತಮ್ಮ ಸಹೋದರ ಸಂಬಂಧಿ ಶ್ರೀ ಟಿಟ್ಟೆನ್ ಥಾಮಸ್ ಅವರು ತನ್ನ ಪರವಾಗಿ ಮಾಡಿದ ಉಡು ಗೊರೆಯನ್ನು ಸ್ವೀಕರಿಸುವ ಮೂಲಕ ಷೆಡ್ಯೂಲ್ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಹೇಳುತ್ತಿದ್ದಾರೆ. ಸದರಿ ಆಸ್ತಿಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಗಿಫ್ಟ್ ಡೀಡ್ ದಿನಾಂಕ 13-7-2004ರಂದು ಡಾಕ್ಯುಮೆಂಟ್ ನಂ.9661/2004-05 ಎಂದು ನೋಂದಾಯಿತವಾಗಿದ್ದು, ಬುಕ್-1 ಮತ್ತು C. D. ನಂ.BASD79ರಲ್ಲಿ ಶೇಖರವಾಗಿದೆ. ಉದ್ದೇಶಿತ ಖರೀದಿಯನ್ನು ವಿರೋಧಿಸುವ ಅಥವಾ ಇದರಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳನ್ನು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಬೆಂಬಲಿಸುವ ಸಾಕ್ಷ್ಯಾಧಾರ ದಾಖಲೆಗಳೊಂದಿಗೆ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಆನಂತರ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇರುವುದಿಲ್ಲವೆಂಬ ರೀತಿಯಲ್ಲಿ ಈ ಕೆಳಗಿನ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮುಂದುವರೆಯುವರು

: ಷೆಡ್ಯೂಲ್ ಆಸ್ತಿ:

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂ.80/5 ರಲ್ಲಿನ 00 ಎಕರೆ 16 ಗುಂಟೆ ಆಸ್ತಿ ಅಂದರೆ ಎಲ್ಲಾ ತುಂಡು ಮತ್ತು ತುಣುಕು ಸೇರಿ ಒಟ್ಟಾರೆ 17,424 ಚದರ ಅಡಿಗಳ ಆಸ್ತಿ. ಸದರಿ ಆಸ್ತಿಯು ದಿ ಡೆಪ್ಯೂಟಿ ಕಮೀಷನರ್, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರ ದಿನಾಂಕ 01-03-2005ರ ಆದೇಶ ನಂ.BDIS:ALN:SR(S):667/2004-05 ಇದರ ಅನ್ವಯ ಕೃಷಿಯೇತರ ವಸತಿ ಉದ್ದೇಶಗಳಿಗಾಗಿ ಪರಿವರ್ತಿಸಲಾಗಿರುವ ಆಸ್ತಿ ಮತ್ತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅರಕೆರೆಯ ವಾರ್ಡ್ ನಂ.193, ಹುಳಿಮಾವು, ಬೆಂಗಳೂರು ಇವರ ಕಡತಗಳಲ್ಲಿ ಮುನಿಸಿಪಲ್ ನಂ.2045/ಸರ್ವೆ ನಂ.80/5 ಮತ್ತು E PID ನಂ.3750810189 ಎಂದು ನಮೂದಾಗಿರುವ ಆಸ್ತಿ ಮತ್ತು ಇದಕ್ಕೆ ಚಕ್ಕುಬಂದಿ:-

ಪೂರ್ವಕ್ಕೆ : ಸರ್ವೆ ನಂ.83 ರಲ್ಲಿನ ಆಸ್ತಿ;
ಪಶ್ಚಿಮಕ್ಕೆ : ಸರ್ವೆ ನಂ.80/4 ರಲ್ಲಿನ ಶ್ರೀ ಥಾಮಸ್ ಮಾರ್ಕೋಸ್ ಅವರ ಆಸ್ತಿ;
ಉತ್ತರಕ್ಕೆ : ರಸ್ತೆ; ಮತ್ತು
ದಕ್ಷಿಣಕ್ಕೆ : ಕೆಲಚಂದ್ರ ವೆನೀರ್ ಇಂಡಸ್ಟ್ರೀಸ್ ಅವರಿಗೆ ಸೇರಿದ ಸರ್ವೆ ನಂ.81/1 ಮತ್ತು 82/1ರಲ್ಲಿನ ಆಸ್ತಿಗಳು.

ಶ್ರೀ ಬಿ. ಎಸ್. ಶಂಕರನಾರಾಯಣ್
ವಕೀಲರು,
ಕುಸುಮ ಅಡ್ವೊಕೇಟ್ಸ್,
ನಂ.101, ಈಡನ್ ಪಾರ್ಕ್, ನಂ.20, ವಿಠ್ಠಲ್ ಮಲ್ಯ ರಸ್ತೆ, UB ಸಿಟಿ ಎದುರು, ಬೆಂಗಳೂರು-560001.
ಕಛೇರಿ ಫೋನ್: 080 - 22217971.
ಬೆಂಗಳೂರು ದಿನಾಂಕ: 2-1-2025

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗಳನ್ನು **ಮೆಸರ್ಸ್ ಕೆಲಚಂದ್ರ ವೆನೀರ್ ಇಂಡಸ್ಟ್ರೀಸ್,** ನೋಂದಾಯಿತ ಪಾಲುದಾರಿಕೆ ಸಂಸ್ಥೆ, ನೋಂದಾಯಿತ ಕಛೇರಿ: ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076 ಇದು ತನ್ನ ಪಾಲುದಾರರಾದ (1) **ಶ್ರೀ ಥಾಮಸ್ ಮಾರ್ಕೋಸ್,** ಶ್ರೀ C. T. ಮಾರ್ಕೋಸ್ ಅವರ ಪುತ್ರ, (2) **ಶ್ರೀಮತಿ ಅಲ್ಕ ಅನ್ನ ಮಾರ್ಕೋಸ್,** ಶ್ರೀ ಥಾಮಸ್ ಮಾರ್ಕೋಸ್ ಅವರ ಪತ್ನಿ, (3) **ಶ್ರೀಮತಿ ಬೀನಾ ಮಾರ್ಕೋಸ್,** ಶ್ರೀ C. T. ಮಾರ್ಕೋಸ್ ಅವರ ಪತ್ನಿ ಇವರೆಲ್ಲರಿಂದ ಪ್ರತಿನಿಧಿಸಲ್ಪಡುತ್ತದೆ. ಇವರೆಲ್ಲರೂ ಹೇಳುತ್ತಿರುವುದೇನೆಂದರೆ ಸದರಿ ಪಾಲುದಾರಿಕಾ ಸಂಸ್ಥೆಯು ಷೆಡ್ಯೂಲ್ ಆಸ್ತಿಯನ್ನು ದಿನಾಂಕ 19-02-1987 ರ ಸೇಲ್ ಡೀಡ್‌ನಂತೆ ಖರೀದಿಸಿರುವುದಾಗಿ ಹೇಳುತ್ತಿದ್ದಾರೆ. ಸದರಿ ಆಸ್ತಿಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಡಾಕ್ಯುಮೆಂಟ್ ನಂ.7873 /19 86-87 ಎಂದು ನೋಂದಾಯಿತವಾಗಿದ್ದು, ಬುಕ್-1, ಸಂಪುಟ-2553 ಮತ್ತು ಪುಟಗಳು 135 ರಿಂದ 139 ರಲ್ಲಿ ಶೇಖರವಾಗಿರುವ ಆಸ್ತಿಯನ್ನು ಖರೀದಿಸಲು ಉದ್ದೇಶಿಸಿದ್ದಾರೆ. ಉದ್ದೇಶಿತ ಖರೀದಿಯನ್ನು ವಿರೋಧಿಸುವ ಅಥವಾ ಇದರಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳನ್ನು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಬೆಂಬಲಿಸುವ ಸಾಕ್ಷ್ಯಾಧಾರ ದಾಖಲೆಗಳೊಂದಿಗೆ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಆನಂತರ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇರುವುದಿಲ್ಲವೆಂಬ ರೀತಿಯಲ್ಲಿ ಈ ಕೆಳಗಿನ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮುಂದು ವರೆಯುವರು

: ಷೆಡ್ಯೂಲ್ ಆಸ್ತಿ:

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್‌ಗಳು 81/1 ಮತ್ತು 82/1 ರಲ್ಲಿನ ಎಲ್ಲಾ ತುಂಡು ಮತ್ತು ತುಣುಕು ಸೇರಿ ಒಟ್ಟಾರೆ 93,500 ಚದರ ಅಡಿಗಳ ಆಸ್ತಿ. ಸದರಿ ಆಸ್ತಿಯು ದಿ ಸ್ಪೆಷಲ್ ಡೆಪ್ಯೂಟಿ ಕಮೀಷನರ್, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರ ಆದೇಶ ನಂ.BDIS:ALN:SR:93/1975-76 ಇದರ ಅನ್ವಯ ಕೃಷಿಯೇತರ ಕೈಗಾರಿಕಾ ಉದ್ದೇಶಗಳಿಗಾಗಿ ಪರಿವರ್ತಿಸಲಾಗಿರುವ ಆಸ್ತಿ ಮತ್ತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅರಕೆರೆಯ ವಾರ್ಡ್ ನಂ.193, ಹುಳಿಮಾವು, ಬೆಂಗಳೂರು ಇವರ ಕಡತಗಳಲ್ಲಿ ಮುನಿಸಿಪಲ್ ನಂ.807/796/705/81/1, 82/1 ಮತ್ತು E PID ನಂ.6694899346 ಎಂದು ನಮೂದಾಗಿರುವ ಆಸ್ತಿ ಮತ್ತು ಇದಕ್ಕೆ ಚಕ್ಕುಬಂದಿ:-

ಪೂರ್ವಕ್ಕೆ : ಸರ್ವೆ ನಂ.83 ರಲ್ಲಿನ ಆಸ್ತಿ;
ಪಶ್ಚಿಮಕ್ಕೆ : ಬನ್ನೇರುಘಟ್ಟ ಮುಖ್ಯ ರಸ್ತೆ;
ಉತ್ತರಕ್ಕೆ : ಸರ್ವೆ ನಂಬರ್‌ಗಳು 80/3, 80/4, 80/5 ಹಾಗು 83 ರಲ್ಲಿನ ಆಸ್ತಿಗಳು; ಮತ್ತು
ದಕ್ಷಿಣಕ್ಕೆ : ಸರ್ವೆ ನಂಬರ್‌ಗಳು 81/2, 82/ ರಲ್ಲಿನ ಆಸ್ತಿಗಳು;

ಶ್ರೀ ಬಿ. ಎಸ್. ಶಂಕರನಾರಾಯಣ್
ವಕೀಲರು,
ಕುಸುಮ ಅಡ್ವೊಕೇಟ್ಸ್,
ನಂ.101, ಈಡನ್ ಪಾರ್ಕ್, ನಂ.20, ವಿಠ್ಠಲ್ ಮಲ್ಯ ರಸ್ತೆ, UB ಸಿಟಿ ಎದುರು, ಬೆಂಗಳೂರು-560001.
ಕಛೇರಿ ಫೋನ್: 080 - 22217971.
ಬೆಂಗಳೂರು ದಿನಾಂಕ: 2-1-2025

ಚಿರತೆ ದಾಳಿ: ಕರು ಬಲಿ

ಹೆಸರಘಟ್ಟ: ಇಲ್ಲಿನ ವೀರ್ಯ ಘನೀಕೃತ ಕೇಂದ್ರ (ಸೀಮನ್ ಬ್ಯಾಂಕ್) ಬಳಿ ಶನಿವಾರ ಐವರ ಕಂಡಪುರ ಗ್ರಾಮದಲ್ಲಿ ಚಿರತೆಯು ಮಣಕವನ್ನು (ದೊಡ್ಡ ಕರು) ತಿಂದು ಹಾಕಿದೆ.

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗಳನ್ನು **ಶ್ರೀ ಥಾಮಸ್ ಮಾರ್ಕೋಸ್,** ಶ್ರೀ C. T. ಮಾರ್ಕೋಸ್ ಅವರ ಪುತ್ರ, 80/9, ಕೇಲಚಂದ್ರ ಲೇನ್, ಪ್ರೈಡ್ ರಿಗಾಲಿಯ ಅಪಾರ್ಟ್‌ಮೆಂಟ್ ಹತ್ತಿರ, ದೊಡ್ಡಮ್ಮ ಲೇಔಟ್, ಹುಳಿಮಾವು, ಬೆಂಗಳೂರು-560076. ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿಯವರು ಹೇಳುತ್ತಿರುವುದೇನೆಂದರೆ ಷೆಡ್ಯೂಲ್ ಆಸ್ತಿಯನ್ನು ತಮ್ಮ ತಾಯಿಯವರಾದ ಶ್ರೀಮತಿ ಬೀನಾ ಮಾರ್ಕೋಸ್ ತಮ್ಮ ಪರವಾಗಿ ಉಡುಗೊರೆಯಾಗಿ ನೀಡಿರುವ ಆಸ್ತಿಯನ್ನು ಸ್ವಾಧಿನಪಡಿಸಿಕೊಂಡಿರುವುದಾಗಿ ಹೇಳುತ್ತಿದ್ದಾರೆ. ಸದರಿ ಆಸ್ತಿಯು ಬೆಂಗಳೂರಿನ ಜಯನಗರದ (ಜಯನಗರ) ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ದಿನಾಂಕ 07-11-2022ರಂದು ಗಿಫ್ಟ್ ಡೀಡ್‌ನಂತೆ ನೋಂದಾಯಿತವಾಗಿದ್ದು, ಡಾಕ್ಯುಮೆಂಟ್ ನಂ.6309 /2022-23 ಹೊಂದಿದೆ ಹಾಗು ಬುಕ್-1 ಮತ್ತು C.D. ನಂ.JAYD1363ಯಲ್ಲಿ ಶೇಖರವಾಗಿದೆ. ಉದ್ದೇಶಿತ ಖರೀದಿಯನ್ನು ವಿರೋಧಿಸುವ ಅಥವಾ ಇದರಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳನ್ನು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಬೆಂಬಲಿಸುವ ಸಾಕ್ಷ್ಯಾಧಾರ ದಾಖಲೆಗಳೊಂದಿಗೆ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಆನಂತರ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ ಮತ್ತು ನನ್ನ ಕಕ್ಷಿದಾರರು ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇರುವುದಿಲ್ಲವೆಂಬ ರೀತಿಯಲ್ಲಿ ಈ ಕೆಳಗಿನ ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಮುಂದುವರೆಯುವರು

: ಷೆಡ್ಯೂಲ್ ಆಸ್ತಿ:

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂ.80/4 ರಲ್ಲಿನ 00 ಎಕರೆ 17 ಗುಂಟೆ ಆಸ್ತಿ ಅಂದರೆ ಎಲ್ಲಾ ತುಂಡು ಮತ್ತು ತುಣುಕು ಸೇರಿ ಒಟ್ಟಾರೆ 18,513 ಚದರ ಅಡಿಗಳ ಆಸ್ತಿ. ಸದರಿ ಆಸ್ತಿಯು ದಿ ಡೆಪ್ಯೂಟಿ ಕಮೀಷನರ್, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರ ದಿನಾಂಕ 22-10-2009 ರ ಆದೇಶ ನಂ.ALN.SR(S.BE)40/2009-10 ಇದರ ಅನ್ವಯ ಕೃಷಿಯೇತರ ಕೈಗಾರಿಕಾ ಉದ್ದೇಶಗಳಿಗಾಗಿ ಪರಿವರ್ತಿಸಲಾಗಿರುವ ಆಸ್ತಿ ಮತ್ತು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅರಕೆರೆಯ ವಾರ್ಡ್ ನಂ.193, ಹುಳಿಮಾವು, ಬೆಂಗಳೂರು ಇವರ ಕಡತಗಳಲ್ಲಿ ಮುನಿಸಿಪಲ್ ನಂ.2046/ಸರ್ವೆ ನಂ.80/4 ಮತ್ತು E PID ನಂ.5153862165 ಎಂದು ನಮೂದಾಗಿರುವ ಆಸ್ತಿ ಮತ್ತು ಇದಕ್ಕೆ ಚಕ್ಕುಬಂದಿ:-

ಪೂರ್ವಕ್ಕೆ : ಸರ್ವೆ ನಂ.80/5 ರಲ್ಲಿನ ಆಸ್ತಿ;
ಪಶ್ಚಿಮಕ್ಕೆ : ಸರ್ವೆ ನಂ.80/3 ರಲ್ಲಿನ ಆಸ್ತಿ;
ಉತ್ತರಕ್ಕೆ : ರಸ್ತೆ; ಮತ್ತು
ದಕ್ಷಿಣಕ್ಕೆ : ಸರ್ವೆ ನಂ.81/1 ರಲ್ಲಿನ ಆಸ್ತಿ.

ಶ್ರೀ ಬಿ. ಎಸ್. ಶಂಕರನಾರಾಯಣ್
ವಕೀಲರು,
ಕುಸುಮ ಅಡ್ವೊಕೇಟ್ಸ್,
ನಂ.101, ಈಡನ್ ಪಾರ್ಕ್, ನಂ.20, ವಿಠ್ಠಲ್ ಮಲ್ಯ ರಸ್ತೆ, UB ಸಿಟಿ ಎದುರು, ಬೆಂಗಳೂರು-560001.
ಕಛೇರಿ ಫೋನ್: 080 - 22217971.
ಬೆಂಗಳೂರು ದಿನಾಂಕ: 2-1-2025

ನಗರದಲ್ಲಿ ಇಂದು

ಸಿದ್ಧಾರೂಢ ಸ್ವಾಮೀಜಿ ಅವರ 190ನೇ ಜಯಂತಿ, ಗುರುನಾಥಾರೂಢ ಸ್ವಾಮೀಜಿ ಅವರ 115ನೇ ಜಯಂತಿ: ‘ಸಿದ್ಧಾರೂಢ ಜ್ಯೋತಿ ಯಾತ್ರೆಗೆ ಸ್ವಾಗತ, ಆಯೋಜನೆ: ಸಿದ್ಧಾರೂಢ ಮಿಷನ್, ಸ್ಥಳ: ರಾಮೋಹಳ್ಳಿಯ ಬಸ್ ನಿಲ್ದಾಣ, ದೊಡ್ಡ ಆಲದ ಮರ ರಸ್ತೆ, ಕೆಂಗೇರಿ ಹೋಬಳಿ, ಬೆಳಿಗ್ಗೆ 11

ಸಂಸ್ಥಾಪಕರ ದಿನ -2025: ರೇವಾ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತರು: ಡಾ. ದೇವಿಪ್ರಸಾದ್ ಶೆಟ್ಟಿ, ಮಾಲತಿ ಹೊಳ್ಳ, ರೇವಾ ಎಕ್ಸಲೆನ್ಸ್ ಪ್ರಶಸ್ತಿ ಪುರಸ್ಕೃತರು: ವಿಕ್ರಮ್ ಸಂಪತ್, ಉಪಸ್ಥಿತಿ: ಪಿ. ಶ್ಯಾಮ್ ರಾಜು, ಆಯೋಜನೆ ಮತ್ತು ಸ್ಥಳ: ಕುವೆಂಪು ಸಭಾಂಗಣ, ರೇವಾ ವಿಶ್ವವಿದ್ಯಾಲಯ, ರುಕ್ಮಿಣಿ ನಾಲೇಜ್ ಪಾರ್ಕ್, ಸಂಜೆ 6ರಿಂದ

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವ ಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ: ಸಾನ್ನಿಧ್ಯ: ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನೇತೃತ್ವ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ವಿಜಯ ಸಂಕೇಶ್ವರ್, ಅತಿಥಿ: ಎಂ. ಕೃಷ್ಣಪ್ಪ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6ರಿಂದ

‘ಕಾವೇರಿ ರಿವರ್ ಆಫ್ ಲೈಫ್’ ಸಾಕ್ಷ್ಯಚಿತ್ರ ಪ್ರದರ್ಶನ: ಅತಿಥಿಗಳು: ಈಶ್ವರ ಬಿ. ಖಂಡ್ರೆ, ಸುಭಾಷ್ ಮಾಲ್ಖೇಡೆ, ಸ್ಥಳ: ಸ್ವಾಗತ ಶಂಕರನಾಗ್ ಚಿತ್ರಮಂದಿರ, ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 6.30ಕ್ಕೆ

ವಾರ್ಷಿಕೋತ್ಸವ: ‘ಕರ್ನಾಟಕ ಶಾಸ್ತ್ರೀಯ ಸಂಗೀತ’ ಗಾಯನ: ಕೆ. ಗುರುರಾಜ್, ಪಿಟೀಲು: ಗೋವಿಂದ ಮಾಧವ ಬಿ.ಎಸ್., ಮೃದಂಗ: ಅನಿರುದ್ಧ ಗುರುರಾಜ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256



ಬನಶಂಕರಿ ಮೂರನೇ ಹಂತದಿಂದ ಕಾಮಾಕ್ಯ ಕಡೆಗೆ ಸಂಪರ್ಕಿಸುವ ರಸ್ತೆಯ ದುಃಸ್ಥಿತಿ

‘ಬನಶಂಕರಿ: ರಸ್ತೆ ದುರಸ್ತಿಗೊಳಿಸಿ’

ಬನಶಂಕರಿ ಮೂರನೇ ಹಂತದಿಂದ ಕಾಮಾಕ್ಯ ಕಡೆಗೆ ಸಂಪರ್ಕಿಸುವ ಮುಖ್ಯರಸ್ತೆ ಗುಂಡಿಗಳು ಬಿದ್ದು, ಸಂಪೂರ್ಣವಾಗಿ ಹಾಳಾಗಿದೆ. ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಈ ರಸ್ತೆಗೆ ಡಾಂಬರು ಹಾಕದೇ ವರ್ಷಗಳೇ ಕಳೆದಿವೆ. ಇದರಿಂದ ಇಲ್ಲಿ ಸಂಚರಿಸುವವರಿಗೆ ನಿತ್ಯ ದೂಳಿನ ಮಜ್ಜನವಾಗುತ್ತಿದೆ. ಕೂಡಲೇ ಬಿಬಿಎಂಪಿ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಸುಹಾಸ್, ಬನಶಂಕರಿ

‘ಕಾಂಕ್ರೀಟ್ ಸ್ಲ್ಯಾಬ್ ಕುಸಿತ’

ಮಾಗಡಿ ರಸ್ತೆಯ ಕಾಮಾಕ್ಷಿಪಾಳ್ಯ ಸಂಚಾರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕುಸಿದಿದ್ದು, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ರಾತ್ರಿ ಸಮಯದಲ್ಲಿ ಯಾರಾದರೂ ಬಿದ್ದು ಅನಾಹುತ ಮಾಡಿಕೊಳ್ಳುವ ಮುಂಚಿತವಾಗಿ ಈ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ಉಮೇಶ್ ಗೌಡ, ಕಾಮಾಕ್ಷಿಪಾಳ್ಯ

ಕಾಮಾಕ್ಷಿಪಾಳ್ಯ ಸಂಚಾರಿ ಪೊಲೀಸ್ ಠಾಣೆಯ ಮುಂಭಾಗದ ರಸ್ತೆಯಲ್ಲಿ ಕಾಂಕ್ರೀಟ್ ಸ್ಲ್ಯಾಬ್ ಕುಸಿದಿರುವುದು

‘ಅಪಘಾತ ಕೇಂದ್ರವಾದ ತುರಹಳ್ಳಿ ರಸ್ತೆ’

ತುರಹಳ್ಳಿ ರಸ್ತೆಯಲ್ಲಿ ಅಪಘಾತ ಸಂಭವಿಸಿರುವುದು

ಗುಬ್ಬಲಾಳ ಮುಖ್ಯರಸ್ತೆಯಲ್ಲಿ ಶಾಂತಿಸಾಗರ ಹೋಟೆಲ್ ಮತ್ತು ಶಾಪ್‌ವೆಲ್ ಸೂಪರ್ ಮಾರ್ಕೆಟ್ ನಡುವಿನ ತುರಹಳ್ಳಿ ರಸ್ತೆ ಅಪಘಾತ ಕೇಂದ್ರವಾಗಿ ಮಾರ್ಪಟ್ಟಿದೆ. ಉತ್ತರಹಳ್ಳಿ, ಗುಬ್ಬಲಾಳ ರಸ್ತೆಗಳು ತುರಹಳ್ಳಿ ರಸ್ತೆ ತಿರುವಿಗೆ ಬಂದು ಸೇರುತ್ತವೆ. ಈ ಮೂರೂ ರಸ್ತೆಗಳಿಂದ ಬರುವ ವಾಹನಗಳು ಈ ತಿರುವಿನಲ್ಲಿ ವೇಗವಾಗಿ ಬಂದು ಸಂಧಿಸುವುದರಿಂದ ಪ್ರತಿನಿತ್ಯ ಒಂದೆರಡು ಅಪಘಾತಗಳು ಸಂಭವಿಸುತ್ತವೆ. ಈ ರಸ್ತೆಯಲ್ಲಿ ಪಾದಚಾರಿಗಳು ಭಯದಲ್ಲಿ ಓಡಾಡಬೇಕಾಗಿದೆ. ತುರಹಳ್ಳಿ ರಸ್ತೆಯಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ನಿಲುಗಡೆ ಮಾಡಲಾಗುತ್ತದೆ. ಇದರಿಂದ ಸಂಚಾರ ದಟ್ಟಣೆ ಉಂಟಾಗುತ್ತದೆ. ಆದ್ದರಿಂದ ಈ ಮೂರು ರಸ್ತೆಗಳಲ್ಲಿ ರಸ್ತೆ ಉಬ್ಬು ನಿರ್ಮಿಸಬೇಕು. ಮೂರೂ ರಸ್ತೆಗಳು ಕೂಡುವ ಸ್ಥಳದಿಂದ 50 ಮೀಟರ್‌ವರೆಗೆ ವಾಹನ ನಿಲುಗಡೆಗೆ ನಿರ್ಬಂಧ ವಿಧಿಸಬೇಕು.

ಪ್ರಮೀಳಾ, ಗುಬ್ಬಲಾಳ

ಒಎಂಆರ್ ಪರಿಶೀಲನೆ ವಿಚಾರ • ಸದಸ್ಯರು–ಕಾರ್ಯದರ್ಶಿ ಜತೆ ಭಿನ್ನಮತ

ಕೆಪಿಎಸ್‌ಸಿ ಆಯ್ಕೆ ಪಟ್ಟಿ ಅತಂತ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಆಂತರಿಕ ಭಿನ್ನಮತ ಪರಿಣಾಮ ವಾಣಿಜ್ಯ ತೆರಿಗೆಗಳ ಇಲಾಖೆಯ ಪರಿವೀಕ್ಷಕರು (ಸಿಟಿಐ) 245, ಲೆಕ್ಕಪತ್ರ ಇಲಾಖೆಯ ಲೆಕ್ಕ ಸಹಾಯಕರು 242 ಸೇರಿ ವಿವಿಧ ಇಲಾಖೆಗಳ ಒಟ್ಟು 600ಕ್ಕೂ ಹೆಚ್ಚು ಹುದ್ದೆಗಳ ಆಯ್ಕೆ ಪಟ್ಟಿ ಅತಂತ್ರವಾಗಿದೆ.

ವಿವಿಧ ಇಲಾಖೆಗಳ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ಒಎಂಆರ್ (ಆಪ್ಟಿಕಲ್ ಮಾರ್ಕ್ಸ್ ರೆಕಗ್ನಿಷನ್) ಶೀಟ್ ಪರಿಶೀಲಿಸಿದ ನಂತರವೇ ಆಯ್ಕೆ ಪಟ್ಟಿಗಳಿಗೆ ಅನುಮೋದನೆ ನೀಡಲು ನಿರ್ಧರಿಸಿರುವ ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ನಡೆಗೆ ಆಯೋಗದ ಕಾರ್ಯದರ್ಶಿ ರಮಣದೀಪ್ ಚೌಧರಿ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ. ಹೀಗಾಗಿ, ಪಟ್ಟಿ ಅತಂತ್ರವಾಗಿದೆ.

‘ಇತ್ತೀಚೆಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಎಂಆರ್ ಶೀಟ್ ತಿದ್ದಿರುವ ಅನುಮಾನ ಮೂಡಿದೆ. ಕೇವಲ 10, 15 ಅಂಕಗಳ ಪ್ರಶ್ನೆಗಳನ್ನಷ್ಟೆ ಉತ್ತರಿಸಿದವರು ಹುದ್ದೆ ಗಿಟ್ಟಿಸಿಕೊಂಡಿರುವುದು ಪತ್ತೆ ಆಗಿದೆ. ಹೀಗಾಗಿ, ಇನ್ನು ಮುಂದೆ ಆಯೋಗಕ್ಕೆ ಸಲ್ಲಿಕೆಯಾಗುವ ಆಯ್ಕೆ ಪಟ್ಟಿಗಳಲ್ಲಿರುವ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಪರಿಶೀಲಿಸಿದ ಬಳಿಕ ಅನುಮೋದನೆ ನೀಡಲು ಆಯೋಗದ ಸಭೆಯಲ್ಲಿ ನಿರ್ಣಯಿಸಲಾಗಿದೆ’ ಎಂದು ಕೆಪಿಎಸ್‌ಸಿ ಸದಸ್ಯರೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

‘ಆಯ್ಕೆ ಪಟ್ಟಿಯನ್ನು ಆಯೋಗಕ್ಕೆ ಸಲ್ಲಿಸುವ ಸಂದರ್ಭದಲ್ಲಿಯೇ ಅಭ್ಯರ್ಥಿಗಳ ಹೆಸರು, ನೋಂದಣಿ ಸಂಖ್ಯೆ, ಪರೀಕ್ಷೆ ಬರೆದ ಕೇಂದ್ರದ ವಿವರ ಮತ್ತು ಒಎಂಆರ್ ಶೀಟ್ ನೀಡುವಂತೆ ಕಾರ್ಯದರ್ಶಿಗೆ ಪತ್ರದ ಮೂಲಕ ತಿಳಿಸಲಾಗಿದೆ. ಆದರೆ, ಈಗಾಗಲೇ ಸಲ್ಲಿಸಿರುವ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ವಿವರಗಳನ್ನು ಕಾರ್ಯದರ್ಶಿ ನೀಡಿಲ್ಲ. ಇದೇ ಕಾರಣಕ್ಕೆ ವಾಣಿಜ್ಯ ತೆರಿಗೆ ಪರಿವೀಕ್ಷಕರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಾರ್ಯದರ್ಶಿಗೆ ಹಿಂದಿರುಗಿಸಲಾಗಿದೆ’ ಎಂದೂ ಅವರು ಹೇಳಿದ್ದಾರೆ.

‘ಕೆಪಿಎಸ್‌ಸಿ ಸುಧಾರಣೆಗೆ ರಚಿಸಿದ್ದ ಪಿ.ಸಿ.ಹೋಟಾ ಸಮಿತಿ ನೀಡಿದ್ದ ವರದಿಯಲ್ಲಿ ಆಯ್ಕೆ ಪಟ್ಟಿ ಜೊತೆಗೆ ಅಭ್ಯರ್ಥಿಗಳ ಒಎಂಆರ್ ಶೀಟ್ ನೀಡಬೇಕು ಅಥವಾ ನೀಡಬಾರದು ಎಂಬ ಬಗ್ಗೆ ಯಾವುದೇ ಶಿಫಾರಸು ಮಾಡಿಲ್ಲ. ಹೀಗಾಗಿ, ಒಎಂಆರ್ ಶೀಟ್ ನೀಡಲು ಕಾರ್ಯದರ್ಶಿ ಹಿಂದೇಟು ಹಾಕುತ್ತಿದ್ದಾರೆ. ಪರೀಕ್ಷಾ ಹಂತದಲ್ಲಿ ಅಕ್ರಮಗಳು ನಡೆದಿದೆಯೇ ಎಂದು ಪರಿಶೀಲಿಸುವ ಉದ್ದೇಶದಿಂದ ಒಎಂಆರ್ ಶೀಟ್ ಪರಿಶೀಲಿಸಲು ನಿರ್ಧರಿಸಿದ್ದೇವೆ. ಪಾರದರ್ಶಕತೆ ಕಾಪಾಡಲು ಈ ಕ್ರಮ ಅನಿವಾರ್ಯ’ ಎಂದಿದ್ದಾರೆ.

ಪರೀಕ್ಷಾ ನಿಯಂತ್ರಕರ ವರ್ಗಾವಣೆಗೆ ಪಟ್ಟು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿನ ಎಡವಟ್ಟುಗಳಿಗೆ ಕಾರಣರಾದ ಪರೀಕ್ಷಾ ನಿಯಂತ್ರಕ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಬದಲಾಯಿಸಬೇಕು ಎಂದು ಕೆಪಿಎಸ್‌ಸಿ ಸದಸ್ಯರು ಪಟ್ಟು ಹಿಡಿದಿದ್ದಾರೆ.

ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರನ್ನು ಸಂಪರ್ಕಿಸಲು ಯತ್ನಿಸಿದರೂ, ಅವರು ಲಭ್ಯರಾಗಲಿಲ್ಲ.

ಒಎಂಆರ್ ಶೀಟ್: ಏಕೆ ಅನುಮಾನ?

‘ಇಲಾಖೆಯೊಂದರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿ ನಡೆದ ಉನ್ನತ ತನಿಖೆಯಲ್ಲಿ ಅಭ್ಯರ್ಥಿಗಳ ಒಎಂಆರ್ ಶೀಟ್ ತಿದ್ದುಪಡಿ ಆಗಿರುವುದು ಸಾಬೀತಾಗಿದೆ. ಇನ್ನು ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಚೇರಿಗಳಲ್ಲಿನ ಸಹಕಾರ ಸಂಘಗಳ ನಿರೀಕ್ಷಕರ 47 ಹುದ್ದೆಗಳ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಯಲ್ಲಿ ಭದ್ರಾವತಿಯ ಪರೀಕ್ಷಾ ಕೇಂದ್ರವೊಂದರ 13 (ಎರಡು ಕೇಂದ್ರಗಳಿಂದ ತಲಾ ಐವರು) ಅಭ್ಯರ್ಥಿಗಳು ಇರುವುದು ಅನುಮಾನಕ್ಕೆ ಕಾರಣವಾಗಿದೆ. ಈ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ಪರಿಶೀಲಿಸಿದ ಬಳಿಕವೇ ಪಟ್ಟಿಗೆ ಅನುಮೋದನೆ ನೀಡಲು ನಿರ್ಣಯಿಸಲಾಗಿದೆ’ ಎಂದು ಕೆಪಿಎಸ್‌ಸಿ ಸದಸ್ಯರೊಬ್ಬರು ತಿಳಿಸಿದ್ದಾರೆ.

‘ಮುಖ್ಯಮಂತ್ರಿಗೆ ತಪ್ಪು ಮಾಹಿತಿ’: ‘ಹೊಸ ವರ್ಷದ ಶುಭಾಶಯ ತಿಳಿಸಲು ಜ. 1ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಯೋಗದ ಸದಸ್ಯರು ಭೇಟಿ ಮಾಡಿದ್ದೆವು. ಈ ವೇಳೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಇದ್ದರು. ಕೆಪಿಎಸ್‌ಸಿ ಕಾರ್ಯವೈಖರಿ ಕುರಿತು ಮುಖ್ಯಮಂತ್ರಿ ವಿಚಾರಿಸಿದಾಗ, ‘ಆಯ್ಕೆ ಪಟ್ಟಿಗೆ ಅನುಮೋದನೆ ನೀಡದಿರುವುದರಿಂದ ನೇಮಕಾತಿ ಪ್ರಕ್ರಿಯೆ ವಿಳಂಬ ಆಗುತ್ತಿದೆ’ ಎಂದು ಮುಖ್ಯ ಕಾರ್ಯದರ್ಶಿ ಪ್ರಸ್ತಾಪಿಸಿದ್ದಾರೆ. ಈ ವೇಳೆ ಸದಸ್ಯರೊಬ್ಬರು, ‘ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 10, 15 ಅಂಕ ಪಡೆದವರೂ ಪಟ್ಟಿಯಲ್ಲಿದ್ದರೆ ಕಣ್ಣುಮುಚ್ಚಿಕೊಂಡು ಅನುಮೋದನೆ ನೀಡಬೇಕೆ’ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ, ಜಂಟಿ ಪರೀಕ್ಷಾ ನಿಯಂತ್ರಕರೊಬ್ಬರನ್ನು ಹೆಚ್ಚುವರಿಯಾಗಿ ನೀಡಲಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ. ಹುದ್ದೆಗೆ ಅಕ್ಟೋಬರ್ 23ರಂದು ವರ್ಗಾವಣೆಯಾಗಿದ್ದ ಲೋಖಂಡೆ ಸ್ನೇಹಲ್ ಸುಧಾಕರ್ ಹುದ್ದೆ ವಹಿಸಿಕೊಂಡಿಲ್ಲ’ ಎಂದು ಸದಸ್ಯರೊಬ್ಬರು ತಿಳಿಸಿದರು.

ಆಯೋಗದ ಅನುಮೋದನೆಗೆ ಸಲ್ಲಿಕೆಯಾಗಿರುವ ಆಯ್ಕೆ ಪಟ್ಟಿ

ಹುದ್ದೆ	ಸಂಖ್ಯೆ	ಸಲ್ಲಿಸಿದ ದಿನ
ಸಹಕಾರ ಸಂಘಗಳ ನಿರೀಕ್ಷಕರು	47	ಡಿ.2
ಲೆಕ್ಕ ಸಹಾಯಕರು	242	ಡಿ.2
ವಾಣಿಜ್ಯ ತೆರಿಗೆ ಪರಿವೀಕ್ಷಕರು	15 (ಹೈಕ)	ಡಿ.5
ಕಿರಿಯ ಲೆಕ್ಕ ಸಹಾಯಕರು	67	ಡಿ.13
ವಾಣಿಜ್ಯ ತೆರಿಗೆ ಪರಿವೀಕ್ಷಕರು	230	ಡಿ.21

ಆಯ್ಕೆಯಾದ ಅಭ್ಯರ್ಥಿಗಳ ಒಎಂಆರ್ ಶೀಟ್ ಅನ್ನು ಆಯೋಗಕ್ಕೆ ನೀಡುವ ಕುರಿತು ಸದಸ್ಯರ ಜೊತೆ ಚರ್ಚೆ ಮಾಡುತ್ತೇನೆ. ಆದಷ್ಟು ಬೇಗ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಲು ಕ್ರಮ ವಹಿಸುತ್ತೇನೆ

ರಮಣದೀಪ್ ಚೌಧರಿ, ಕೆಪಿಎಸ್‌ಸಿ ಕಾರ್ಯದರ್ಶಿ

ದಾವಣಗೆರೆಯಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಯುವಜನೋತ್ಸವ ಅಂಗವಾಗಿ ಆಯೋಜಿಸಿದ್ದ ಕಲಾ ತಂಡಗಳ ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳ ಕಲಾವಿದರು ಗಮನ ಸೆಳೆದರು –ಪ್ರಜಾವಾಣಿ ಚಿತ್ರ : ಸತೀಶ್ ಬಡಿಗೇರ

‘ಲಂಚ ಮುಟ್ಟದ ಏಕೈಕ ಹರಿಶ್ಚಂದ್ರ ಎಚ್‌ಡಿಕೆ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಯಾವ ಲಂಚದ ಹಣವನ್ನೂ ಮುಟ್ಟದ ಸತ್ಯಹರಿಶ್ಚಂದ್ರ ಇದ್ದರೆ ಅದು ನಮ್ಮ ಕುಮಾರಸ್ವಾಮಿ ಮಾತ್ರ’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭಾನುವಾರ ವ್ಯಂಗ್ಯವಾಡಿದರು.

ಕೆರಗೋಡು ಗ್ರಾಮದಲ್ಲಿ ಮಾತನಾಡಿದ ಅವರು, ‘ಕೇಂದ್ರ ಸಚಿವ ಕುಮಾರಸ್ವಾಮಿ ಮಾಡುವುದೆಲ್ಲವೂ ಗಂಭೀರ ಆರೋಪವೇ. ಆದರೆ, ಅವರು ಬಾಯಿ ಚಪಲಕ್ಕೆ ಮಾತನಾಡುತ್ತಾರಷ್ಟೆ’ ಎಂದು ದೂರಿದರು.

‘ಒಬ್ಬ ಮಾಜಿ ಮುಖ್ಯಮಂತ್ರಿ ಅಥವಾ ಕೇಂದ್ರ ಸಚಿವ ಮಾತನಾಡುತ್ತಾರೆಂದರೆ, ಅದಕ್ಕೆ ಉತ್ತರಿಸಲು ನೂರು ಬಾರಿ ಯೋಚನೆ ಮಾಡುವಂತಿರಬೇಕು. ಆದರೆ, ಇವರು ಮಾತಿನ ಶೂರತ್ವ ತೋರುತ್ತಿದ್ದಾರೆ’ ಎಂದು ಟೀಕಿಸಿದರು.

‘ಸತ್ಯ ಹರಿಶ್ಚಂದ್ರ ಹೋದ ಮೇಲೆ ಲಂಚ ಮುಟ್ಟದೆ ಇರುವವರು, ಬೇರೆಯವರಿಂದ ಹಣ ತೆಗೆದುಕೊಳ್ಳದೇ ಇರುವವರು, ಯಾವುದೇ ಸಹಾಯ ಪಡೆಯದೇ ಇರುವವರು ಈ ಭೂಮಿ ಮೇಲಿದ್ದರೆ ಅವರು ಕುಮಾರಸ್ವಾಮಿ ಒಬ್ಬರೆ ಎನ್ನುವುದನ್ನು ನಾವು–ನೀವೆಲ್ಲ ಒಪ್ಪಿಕೊಳ್ಳಬೇಕಿದೆ’ ಎಂದರು.

ಕೊನೆ ಗಳಿಗೆಯಲ್ಲಿ ಕನ್ನಡದಲ್ಲಿ ಕಥೆ ರಚನೆಗೆ ಅವಕಾಶ

ದಾವಣಗೆರೆ: ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ‘ಕಥೆ’ ಮತ್ತು ‘ಕವನ’ ರಚನೆ ಸ್ಪರ್ಧೆಯಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಮಾತ್ರ ಅವಕಾಶ ಕಲ್ಪಿಸಿದ್ದಕ್ಕಾಗಿ ಸ್ಪರ್ಧಾಳುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಅಪಸ್ವರಕ್ಕೆ ಮಣಿದ ಆಯೋಜಕರು ಕೊನೆಯ ಕ್ಷಣದಲ್ಲಿ ಕನ್ನಡದಲ್ಲಿ ಕಥೆ, ಕವನ ರಚನೆಗೂ ಅವಕಾಶ ಮಾಡಿಕೊಟ್ಟರು.

ಇಲ್ಲಿನ ಬಾಪೂಜಿ ಎಂಬಿಎ ಕಾಲೇಜು ಆವರಣದಲ್ಲಿ ಭಾನುವಾರ ಆರಂಭವಾದ ಉತ್ಸವದಲ್ಲಿ ಮಧ್ಯಾಹ್ನ ಕವನ ರಚನೆ ಸ್ಪರ್ಧೆ ನಡೆಯಿತು. ಕಥಾ ಸ್ಪರ್ಧೆಗೆ 20 ಹಾಗೂ ಕವನ ರಚನೆ ಸ್ಪರ್ಧೆಗೆ 22 ಸ್ಪರ್ಧಾಳುಗಳು ಪಾಲ್ಗೊಂಡಿದ್ದರು.

‘ಭವಿಷ್ಯದ ಭಾರತವನ್ನು ಮಹಾಶಕ್ತಿಯಾಗಿ ಕಾಣಲು ನನ್ನ ದೃಷ್ಟಿಕೋನ’ ಎಂಬ ವಿಷಯದ ಮೇಲೆ ಕಥೆ ಬರೆಯುವಂತೆ ಸೂಚಿಸಲಾಗಿತ್ತು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆದ ಕಥೆ ಮತ್ತು ಕವನವನ್ನು ಮಾತ್ರ ಆಯ್ಕೆ ಮಾಡಲಾಗುವುದು ಎಂಬ ಆಯೋಜಕರ ಷರತ್ತು ಸ್ಪರ್ಧಾಳುಗಳನ್ನು ಕೆರಳಿಸಿತು.

ಸ್ಪರ್ಧೆಯಲ್ಲಿ ಪಾಲ್ಗೊಂಡವರು ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕನ್ನಡದಲ್ಲಿ ಮಾತ್ರವೇ ಕಥೆ–ಕವನ ಬರೆಯುವುದಾಗಿ ಪಟ್ಟು ಹಿಡಿದರು. ‘ಸ್ಪರ್ಧೆಯಲ್ಲಿ ಗೆದ್ದವರು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುತ್ತಿರುವುದರಿಂದ ಕನ್ನಡ ಪರಿಗಣಿಸುವುದಿಲ್ಲ’ ಎಂಬುದನ್ನು ಈ ಮೊದಲೇ ತಿಳಿಸಲಾಗಿತ್ತು ಎಂದು ಆಯೋಜಕರು ಸಮರ್ಥನೆ ನೀಡಿದರು. ಸ್ಪರ್ಧಾಳುಗಳ ಒತ್ತಡಕ್ಕೆ ಮಣಿದು ಕನ್ನಡದಲ್ಲಿ ಕಥೆ–ಕವನ ರಚನೆಗೆ ಅವಕಾಶ ಮಾಡಿಕೊಡಲಾಯಿತು.

ಕಾಂಗ್ರೆಸ್ ಸರ್ಕಾರದಲ್ಲಿ ಶೇ 60ರಷ್ಟು ಭ್ರಷ್ಟಾಚಾರ: ಎಚ್‌ಡಿಕೆ ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಲಂಚದ ಪ್ರಮಾಣವು ಶೇ 60ರಷ್ಟು ತಲುಪಿದ್ದು, ಪಕ್ಷದ ಕಾರ್ಯಕರ್ತರೇ ಇದನ್ನು ಒಪ್ಪಿಕೊಂಡಿದ್ದಾರೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಭಾನುವಾರ ಇಲ್ಲಿ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಅವರು, ‘ಬಡವರಿಗೆ ಮನೆ ಹಂಚಿಕೆಯಲ್ಲೂ ಲಂಚ ಹೊಡೆಯಲಾಗುತ್ತಿದೆ. ಮೊದಲು ಪಿಡಿಒ ಲಂಚ ಪಡೆಯುತ್ತಿದ್ದರು. ಈಗ ವಿಧಾನಸೌಧದಲ್ಲಿ ಸಚಿವರೇ ರಾಜಾರೋಷವಾಗಿ ಲಂಚ ಪಡೆಯುತ್ತಿದ್ದಾರೆ. ಸತ್ಯಮೇವ ಜಯತೇ ಎಂದರೆ ಇದೇನಾ? ಇವರ ಸತ್ಯಮೇವ ಜಯತೆ ಬರೀ ಜಾಹೀರಾತಿಗೆ ಸೀಮಿತವಾಗಿದೆ’ ಎಂದು ದೂರಿದರು.

‘ರಾಜ್ಯದ ಗುತ್ತಿಗೆದಾರರ ಪರಿಸ್ಥಿತಿ ಶೋಚನೀಯವಾಗಿದೆ. ಇವತ್ತಿನ ಪರಿಸ್ಥಿತಿ ನೋಡಿದರೆ, ಹಿಂದಿನ ಬಿಜೆಪಿ ಸರ್ಕಾರವೇ ಚೆನ್ನಾಗಿತ್ತು ಎಂದು ಕಾಂಗ್ರೆಸ್ ಪರವಾಗಿರುವ ಗುತ್ತಿಗೆದಾರರೇ ಹೇಳುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಬೆಲೆ ತರಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಅತ್ತೆಯದನ್ನು ಅಳಿಯ ದಾನ ಮಾಡಿದ ಎನ್ನುವ ಮಾತಿನಂತೆ ಅವರಿಂದ ಕಿತ್ತು ಮತ್ತೊಬ್ಬರಿಗೆ ಕೊಡುವುದಕ್ಕೆ ಇವರೇ ಆಗಬೇಕಾ? ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಏರಿಕೆಯಿಂದ ಜನಸಾಮಾನ್ಯರಿಗೆ ಹೊರೆಯಾಗಲಿದೆ. ಯಾವುದೇ ಮಂತ್ರಿ– ಶಾಸಕರ ಮಕ್ಕಳು ಸರ್ಕಾರಿ ಬಸ್‌ನಲ್ಲಿ ಓಡಾಡುವುದಿಲ್ಲ. ಓಡಾಡುವವರೆಲ್ಲಾ ಜನಸಾಮಾನ್ಯರು. ದಿನಕ್ಕೆ ₹10 ಹೆಚ್ಚಿಗೆ ಖರ್ಚಾದರೂ ಅದು ಅವರಿಗೆ ಹೊರೆಯಾಗಲಿದೆ’ ಎಂದರು.

‘ಬಸ್ ದರ ಪ್ರಶ್ನಿಸಿದರೆ, ಕೆಜಿಗೆ ₹500 ಆದರೂ ಮಾಂಸ ಖರೀದಿಸಿ ತಿನ್ನುವುದಿಲ್ಲವಾ ಎಂದು ಸಚಿವರೊಬ್ಬರು ಹಾರಿಕೆಯ ಮಾತನಾಡುತ್ತಾರೆ. ಬಡವರು ಮಾಂಸ ತಿನ್ನುವುದರ ಮೇಲೆ ಇವರಿಗೇಕೆ ಕಣ್ಣು? ಬಡ ಮಧ್ಯಮ ವರ್ಗದವರು ವಾರಕ್ಕೆ ಒಮ್ಮೆ ಮಾಂಸ ಖರೀದಿ ಮಾಡಲು ಎಷ್ಟು ಕಷ್ಟಪಡುತ್ತಾರೆ ಎನ್ನುವುದು ಇವರಿಗೆ ಗೊತ್ತಾ? ಎಂದರು.

ಆರೋಪ ಸಾಬೀತುಪಡಿಸಿ ಸಿ.ಎಂ ಸಿದ್ದರಾಮಯ್ಯ ಸವಾಲು

ಪ್ರಜಾವಾಣಿ ವಾರ್ತೆ

ದಾವಣಗೆರೆ: ವಿರೋಧ ಪಕ್ಷಗಳು ಆಧಾರ ರಹಿತ ಆರೋಪಗಳನ್ನು ಮಾಡದೆ, ಸೂಕ್ತ ದಾಖಲೆಗಳನ್ನು ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿರುವುದನ್ನು ಆಧಾರ ಸಹಿತ ಸಾಬೀತುಪಡಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲೆಸೆದರು.

‘ರಾಜ್ಯ ಸರ್ಕಾರದಲ್ಲಿ ಶೇ 60 ಭ್ರಷ್ಟಾಚಾರ ನಡೆಯುತ್ತಿದೆ’ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪಕ್ಕೆ ನಗರದಲ್ಲಿ ಭಾನುವಾರ ತಿರುಗೇಟು ನೀಡಿದರು.

‘ಡೀಸೆಲ್ ಮತ್ತು ವಾಹನಗಳ ಬೆಲೆ ಏರಿಕೆ ಹಾಗೂ ಹಣ ದುಬ್ಬರ ಸರಿದೂಗಿಸುವ ನಿಟ್ಟಿನಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡಲಾಗಿದೆ. ಸಾರಿಗೆ ನಿಗಮಗಳು ಸಂಕಷ್ಟದಲ್ಲಿದ್ದು, ನೌಕರರ ವೇತನ ಪಾವತಿ ಮಾಡುವ ಕಾಳಜಿ ಕೂಡ ಇದರಲ್ಲಿದೆ. ಬಿಜೆಪಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಆಡಳಿತಾವಧಿಯಲ್ಲೂ ಬಸ್ ಪ್ರಯಾಣ ದರ ಏರಿಕೆ ಮಾಡಲಾಗಿತ್ತು. ಕೇಂದ್ರ ಸರ್ಕಾರ ರೈಲು ಪ್ರಯಾಣ ದರ ಹೆಚ್ಚಳ ಮಾಡಿಲ್ಲವೆ’ ಎಂದು ಅವರು ಪ್ರಶ್ನಿಸಿದರು.

‘ಕೆಪಿಸಿಸಿ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಯ ಬದಲಾವಣೆ ಕುರಿತ ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳಲಿದೆ. ಬಿ.ನಾಗೇಂದ್ರ ಅವರ ರಾಜೀನಾಮೆಯಿಂದ ಖಾಲಿಯಾಗಿರುವ ಸಚಿವ ಸ್ಥಾನವನ್ನು ತುಂಬುವ ಬಗ್ಗೆ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಲಾಗುವುದು. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ ಸರ್ಕಾರ ಸಿದ್ಧವಿದೆ. ಆದರೆ, ಈ ವಿಚಾರ ನ್ಯಾಯಾಲಯದ ಮುಂದಿದೆ. ಅಲ್ಲಿ ಇತ್ಯರ್ಥವಾದ ಬಳಿಕ ಚುನಾವಣೆ ನಡೆಯಲಿದೆ’ ಎಂದು ಹೇಳಿದರು.

‘ಮಾರ್ಚ್‌ನಲ್ಲಿ ರಾಜ್ಯ ಬಜೆಟ್’: ಮಾರ್ಚ್‌ನಲ್ಲಿ ರಾಜ್ಯ ಬಜೆಟ್ ಮಂಡಿಸಲಿದ್ದೇನೆ, ಇದಕ್ಕೂ ಮುನ್ನ ಕೆಲವು ಪೂರ್ವಭಾವಿ ಸಭೆಗಳು ನಡೆಯಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಾಗಮಂಗಲ: ಠಾಣೆಗೆ ಕರೆದೊಯ್ಯುವಾಗ ರಂಪಾಟ

ಪೊಲೀಸ್–ಆರೋಪಿ ಬೀದಿಜಗಳ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಪಟ್ಟಣದ ಟಿ.ಬಿ.ವೃತ್ತದ ಬಳಿಯ ನ್ಯಾಯಾಲಯದ ಮುಂಭಾಗದ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ಮಜ್ಜನಕೊಪ್ಪಲು ಗ್ರಾಮದ ಪೂಜಾರಿ ಕೃಷ್ಣ ಹಾಗೂ ಗ್ರಾಮಾಂತರ ಠಾಣೆಯ ಎಎಸ್‌ಐ ರಾಜು ಬೀದಿಜಗಳ ಆಡಿಕೊಂಡಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ.

ಪೂಜಾರಿ ಕೃಷ್ಣ ಅವರ ತಾಯಿ ಮರಿಯಮ್ಮ ನೀಡಿದ್ದ ದೂರಿನ ಮೇರೆಗೆ ವಿಚಾರಣೆ ನಡೆಸಲು ಠಾಣೆಗೆ ಕರೆದೊಯ್ಯಲು ಎಎಸ್‌ಐ ಬಂದಿದ್ದರು. ಈ ವೇಳೆ, ಇಬ್ಬರ ನಡುವೆಯೂ ಜಗಳ ನಡೆದಿದೆ.

ಆರೋಪಿ ಪೂಜಾರಿ ಕೃಷ್ಣ ಎಎಸ್‌ಐ ರಾಜು ಇಬ್ಬರೂ ಕೊರಳಪಟ್ಟಿ ಹಿಡಿದು ಎಳೆದಾಡಿ ಬೀದಿಯಲ್ಲೇ ಬಿದ್ದು ಜಗಳ ಆಡಿದರು

ಮಗ ಕಿರುಕುಳ ನೀಡುತ್ತಿದ್ದಾನೆ ಎಂದು ಮರಿಯಮ್ಮ ದೂರು ನೀಡಿದ್ದರು. ಆರೋಪಿಯು ಠಾಣೆಗೆ ಬರಲು ಒಪ್ಪದಿದ್ದಾಗ ಬಲವಂತವಾಗಿ ಆಟೊರಿಕ್ಷಾ ಹತ್ತಿಸಲು ಎಎಸ್‌ಐ ಮುಂದಾದಾಗ ಇಬ್ಬರ ನಡುವೆಯೂ ವಾಗ್ವಾದ ನಡೆದಿದೆ. ಬಳಿಕ ಇಬ್ಬರೂ ಕೊರಳಪಟ್ಟಿ ಹಿಡಿದು ಎಳೆದಾಡಿ ಬೀದಿಯಲ್ಲೇ ಬಿದ್ದು ಜಗಳವಾಡಿದ್ದಾರೆ.

ಆರೋಪಿಯು, ‘ದೂರು ಬಂದಿದ್ದರೆ ಎಫ್‌ಐಆರ್ ಹಾಕಿ, ನಾನು ಠಾಣೆಗೆ ಬರುವುದಿಲ್ಲ’ ಎಂದು ಎಎಸ್‌ಐಗೆ ಬೈದಿದ್ದಾನೆ, ಇದರಿಂದ ಜಗಳ ನಡೆದಿದೆ ಎನ್ನಲಾಗುತ್ತಿದೆ. ಕೆಲ ಹೊತ್ತಿನ ಬಳಿಕ, ಸಾರ್ವಜನಿಕರು ಜಗಳ ಬಿಡಿಸಿದ್ದಾರೆ. ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಪೂಜಾರಿ ಕೃಷ್ಣನ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ಈಚೆಗೆ, ಪಾಂಡವಪುರ ಠಾಣೆ ಬಳಿ ವ್ಯಕ್ತಿಯೊಬ್ಬ ಪೊಲೀಸ್ ಕಾನ್‌ಸ್ಟೆಬಲ್ ಜೊತೆ ಜಗಳವಾಡಿದ್ದ.

ಆತ್ಮಗೌರವಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಲು ಸರ್ಕಾರ ಒಪ್ಪಿಗೆ

6 ನಕ್ಸಲರು ಶೀಘ್ರ ಮುಖ್ಯವಾಹಿನಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಾಡಿನಲ್ಲಿ ಉಳಿದಿರುವ ನಕ್ಸಲರನ್ನು ಮರಳಿ ಮುಖ್ಯವಾಹಿನಿಗೆ ತರುವ ಪ್ರಕ್ರಿಯೆ ಆರಂಭವಾಗಿದ್ದು, ಮುಂಡಗಾರು ಲತಾ ಸೇರಿ ಆರು ಜನ ಶೀಘ್ರವೇ ಮುಖ್ಯವಾಹಿನಿಗೆ ಬರಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಗುಪ್ತಚರ ಇಲಾಖೆ ಅಧಿಕಾರಿಗಳ ಜತೆ ನಕ್ಸಲ್ ಶರಣಾಗತಿ ಸಮಿತಿ, ಶಾಂತಿಗಾಗಿ ನಾಗರಿಕ ವೇದಿಕೆ ಸದಸ್ಯರು ಮೇಲಿಂದ ಮೇಲೆ ಸಭೆ ನಡೆಸುತ್ತಿದ್ದಾರೆ. ಒಂದೆರಡು ದಿನಗಳಲ್ಲೇ ನಕ್ಸಲರು ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆ ಘನತೆಯುತವಾಗಿ ನಡೆಯಬೇಕು. ಅವರ ಆತ್ಮಗೌರವಕ್ಕೆ ಧಕ್ಕೆಯಾಗ ಬಾರದು. ಹೋರಾಟದ ಮಾರ್ಗ ಬದಲಿಸಿ ಪ್ರಜಾತಾಂತ್ರಿಕ ಚಟುವಟಿಕೆ ಯಲ್ಲಿ ತೊಡಗಿಕೊಳ್ಳಲು ತಡೆಯಾಗ ಬಾರದು ಎಂಬ ಮನವಿಯನ್ನು ಸರ್ಕಾರವೂ ಒಪ್ಪಿದೆ.

ಮುಖ್ಯವಾಹಿನಿಗೆ ಬಂದ ಬಳಿಕ ಜೈಲಿನಲ್ಲಿ ಕೊಳೆಯುವ ಸ್ಥಿತಿ ಇರಬಾರದು. ಸಂಬಂಧ ಇಲ್ಲದಿದ್ದರೂ ಹಲವು ಪ್ರಕರಣ ಗಳಲ್ಲಿ ಅವರ ಹೆಸರು ಸೇರ್ಪಡೆ ಯಾಗಿದ್ದು, ಅವುಗಳಿಂದ ಮುಕ್ತಿ ಸಿಗಬೇಕು. ಮುಖ್ಯವಾಹಿನಿಗೆ ಬಂದ ಬಳಿಕ ಬೇಗನೆ ಜಾಮೀನಿನ ಮೇಲೆ ಹೊರಗೆ ಬರಲು ಸಹಕರಿಸಬೇಕು ಎಂಬ ಮನವಿಗೂ ಸರ್ಕಾರ ಸ್ಪಂದಿಸಿದೆ. ಕಾನೂನು ಸೇವಾ ಪ್ರಾಧಿಕಾರದಿಂದ ನೆರವು ಕೊಡಿಸುವ ಭರವಸೆಯನ್ನೂ ನೀಡಿದೆ.

ಮುಖ್ಯವಾಹಿನಿಗೆ ಬರುವವರು ಯಾರು

- ಮುಂಡಗಾರು ಲತಾ
- ಸುಂದರಿ ಕುತ್ಲೂರು
- ವನಜಾಕ್ಷಿ ಬಾಳೆಹೊಳೆ
- ಮಾರೆಪ್ಪ ಅರೋಲಿ
- ಕೆ.ವಸಂತ
- ಟಿ.ಎನ್.ಜೀಶ್

ಈ ಹಿಂದೆ ಮುಖ್ಯ ವಾಹಿನಿಗೆ ಬಂದವರು

ಹಾಗಲಗಂಜಿ ವೆಂಕಟೇಶ್, ಮಲ್ಲಿಕಾ(ಕವಿತಾ), ಕೋಮಲಾ, ಹೊರ್ಲೆ ಜಯ, ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ನಿಲಗುಳಿ ಪದ್ಮನಾಭ್, ಭಾರತಿ(ರೇಣುಕಾ), ರಿಜ್ವಾನಾ ಬೇಗಂ(ಕಾವೇರಿ), ಕನ್ಯಕುಮಾರಿ, ಶಿವು, ಚನ್ನಮ್ಮ(ಸುಮಾ), ಪರಶುರಾಮ್.

ಎಲ್ಲಾ ಮೊಕದ್ದಮೆಗಳನ್ನು ವಿಶೇಷ ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಲು ಸಹಕಾರ ನೀಡಲಾಗುವುದು. ಪ್ರವರ್ಗ –ಎ ವರ್ಗಕ್ಕೆ ಸೇರಿದವರಿಗೆ ₹7.50 ಲಕ್ಷ, ಪ್ರವರ್ಗ –ಬಿ ಗೆ ₹4 ಲಕ್ಷ ಆರ್ಥಿಕ ನೆರವನ್ನು ಮೂರು ಹಂತಗಳಲ್ಲಿ ನೀಡಲಾಗುವುದು. ಕೌಶಲ ತರಬೇತಿ ನೀಡಲಾಗುವುದು. ಕೇರಳ, ಕರ್ನಾಟಕ, ತಮಿಳುನಾಡು ಸೇರಿ ಎಲ್ಲಾ ಸರ್ಕಾರಗಳೂ ನಕ್ಸಲರ ಬಗ್ಗೆ ಅನುಕಂಪದಿಂದಲೇ ವರ್ತಿಸುತ್ತವೆ ಎಂಬ ಭರವಸೆಯನ್ನು ಸರ್ಕಾರ ನೀಡಿದೆ ಎಂದೂ ಮೂಲಗಳು ಖಚಿತಪಡಿಸಿವೆ.

ಈ ಕುರಿತು ಶಾಂತಿಗಾಗಿ ನಾಗರಿಕ ವೇದಿಕೆಯ ಕೆ.ಎಲ್. ಅಶೋಕ್ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ,'ಮುಖ್ಯ ವಾಹಿನಿಗೆ ಬರಲು ಬಯಸುತ್ತಿರುವ ನಕ್ಸಲರ ಬೇಡಿಕೆಗಳು ಸರಿಯಾಗಿವೆ. ಸರ್ಕಾರ ಅವುಗಳನ್ನು ಪರಿಗಣಿಸಬೇಕು' ಎಂದು ಪ್ರತಿಕ್ರಿಯಿಸಿದರು.

ನಕ್ಸಲರ ಬೇಡಿಕೆಗಳೇನು?

- ಭೂಮಿ ಇಲ್ಲದ ಕುಟುಂಬಗಳಿಗೆ ಐದು ಎಕರೆ ಕೃಷಿ ಭೂಮಿ ನೀಡಬೇಕು, ಶಾಶ್ವತ ಹಕ್ಕುಪತ್ರ ನೀಡಬೇಕು.
- ಎಲ್ಲಾ ಆದಿವಾಸಿ ಕುಟುಂಬಗಳಿಗೆ ಭೂಮಿ ಮತ್ತು ವಸತಿ ನೀಡಬೇಕು.
- ಕೃಷಿ ಯೋಗ್ಯ ಪಾಳುಭೂಮಿಯನ್ನು ಭೂಹೀನರಿಗೆ ಹಂಚಬೇಕು.
- ಆಹಾರದ ಬೆಳೆ, ಮುಖ್ಯವಾಗಿ ಭತ್ತ ಬೆಳೆಯುವ ರೈತರ ಸಮಸ್ಯೆಗಳನ್ನು ಪರಿಹರಿಸಬೇಕು. ಅವರಿಗೆ ಸಂಪೂರ್ಣ ಬೆಂಬಲವಾಗಿ ನಿಲ್ಲಬೇಕು.
- ಕಸ್ತೂರಿ ರಂಗನ್ ವರದಿ ರದ್ದುಗೊಳಿಸಬೇಕು.
- ಹೈಟೆಕ್ ಟೂರಿಸಂ ನಿಲ್ಲಿಸಿ ಪರಿಸರ ರಕ್ಷಿಸಬೇಕು.
- ಆದಿವಾಸಿಗಳಿಗೆ ಕಾಡಿನ ಮೇಲೆ ಎಲ್ಲ ರೀತಿಯ ಅಧಿಕಾರ ಇರಬೇಕು.
- ಕುದುರೆಮುಖ ರಾಷ್ಟ್ರೀಯ ಉದ್ಯಾನವನ ರದ್ದಾಬೇಕು.
- ನಿರುದ್ಯೋಗಿಗಳಿಗೆ ಅರ್ಹತೆಗೆ ತಕ್ಕಂತೆ ಉದ್ಯೋಗ ಕೊಡಬೇಕು.
- ಸಾಂಸ್ಕೃತಿಕ ಬದಲಾವಣೆಗಳಿಂದ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.
- ಹವಾಮಾನ ಬದಲಾವಣೆಯಿಂದ ಕೃಷಿ ಬೆಳೆ, ಮನುಷ್ಯನ ಬದುಕು ಮತ್ತು ಪ್ರಕೃತಿಯ ಮೇಲೆ ಬೀರುತ್ತಿರುವ ಪರಿಣಾಮದ ಬಗ್ಗೆ ವೈಜ್ಞಾನಿಕ ಕಾರಣ ಕಂಡುಕೊಳ್ಳಬೇಕು.
- ಮೂರು ರಾಜ್ಯಗಳಲ್ಲಿ (ಕರ್ನಾಟಕ, ತಮಿಳುನಾಡು, ಕೇರಳ) ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು.
- ರೈತರ ಒತ್ತುವರಿ ಭೂಮಿ ತೆರವುಗೊಳಿಸುವುದನ್ನು ತಕ್ಷಣವೇ ನಿಲ್ಲಿಸಬೇಕು.

ಎಂಟು ನಕ್ಸಲರ ಪೈಕಿ ಒಬ್ಬರಷ್ಟೇ ಬಾಕಿ

ಕೇರಳ, ತಮಿಳುನಾಡು ಮತ್ತು ಕರ್ನಾಟಕ ಭಾಗದಲ್ಲಿ ಎಂಟು ನಕ್ಸಲರಿದ್ದರು. ವಿಕ್ರಂಗೌಡ ಎನ್‌ಕೌಂಟರ್ ಬಳಿಕ ಏಳು ಮಂದಿ ಉಳಿದಂತಾಗಿತ್ತು. ಈ ಪೈಕಿ ಜಯಣ್ಣ ಅಲಿಯಾಸ್ ಜಾನ್ ಮಾತ್ರ ಸಂಪರ್ಕಕ್ಕೆ ಸಿಕ್ಕಿಲ್ಲ. ವಿಕ್ರಂಗೌಡ ಎನ್‌ಕೌಂಟರ್‌ಗೂ ಮುನ್ನವೇ ಈ ತಂಡದಿಂದ ಬೇರ್ಪಟ್ಟಿದ್ದರು. ಅವರನ್ನೂ ಹುಡುಕುವ ಪ್ರಯತ್ನ ನಡೆದಿದೆ ಎನ್ನಲಾಗಿದೆ.

ಸಿ.ಟಿ.ರವಿ, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಜಟಾಪಟಿ ಪ್ರಕರಣ

ಸ್ಥಳ ಮಹಜರು ಅನುಮತಿ ಯೋಚಿಸಿ ನಿರ್ಧಾರ–ಹೊರಟ್ಟಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಿ.ಟಿ.ರವಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ನಡುವಿನ ವಾಗ್ವಾದ ಪ್ರಕಣದ ಕುರಿತು ಸಿಐಡಿ ಅಧಿಕಾರಿಗಳು ಏನು ತಪಾಸಣೆ ಮಾಡುತ್ತಾರೆ? ಎಲ್ಲಿ ಸ್ಥಳ ಮಹಜರು ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ನಂತರವಷ್ಟೇ ಅನುಮತಿ ನೀಡುವ ಕುರಿತು ನಿರ್ಧರಿಸಲಾಗುವುದು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಇಲ್ಲಿ ಶನಿವಾರ ರಾತ್ರಿ ಮಾಧ್ಯಮ ದವರೊಂದಿಗೆ ಮಾತನಾಡಿದ ಅವರು, 'ಘಟನೆ ಸದನದಲ್ಲಿ ನಡೆದಿದೆ. ಅದು ಈಗ ಬಂದ್ ಆಗಿದೆ. ಅಲ್ಲೇನು ಹೊಡದಾಟ, ಬಡಿದಾಟ ನಡೆದಿಲ್ಲ. ಸ್ಥಳ ಮಹಜರು ಏನು ಮಾಡುತ್ತಾರೆ, ಎಲ್ಲಿ ಮಾಡುತ್ತಾರೆ ಎಂದು ಹೇಳಬೇಕು. ಅಲ್ಲೇನು ಕುರ್ಚಿ



ಅಥವಾ ಟೇಬಲ್ ಸ್ಥಳ ಮಹಜರು ಮಾಡುತ್ತಾರೋ ಅಥವಾ ಸದನಕ್ಕೆ ಕರೆದುಕೊಂಡು ಬಂದು ಮಾಡುತ್ತಾರೋ ಎಂಬುದನ್ನು ತಿಳಿಸ ಬೇಕು. ಈಗಲೇ ಅನುಮತಿ ಕೊಡಬೇಕೋ ಅಥವಾ ಕೊಡಬಾರದೋ ಎಂದು ಹೇಳಲಾಗದು, ಪರಿಶೀಲಿಸುತ್ತೇನೆ' ಎಂದರು.

'ಸದ್ಯಕ್ಕೆ ಸಿಐಡಿ ಅಧಿಕಾರಿಗಳಿಗೆ ಸದನದಲ್ಲಿ ಸ್ಥಳ ಮಹಜರಿಗೆ ಅನುಮತಿ ಕೊಡುವುದಿಲ್ಲ' ಎಂದು ತಿಳಿಸಿದರು.

ವಿಡಿಯೊ ಸಾಕ್ಷ್ಯ ಕೊಡಿ ಎಂದು ಸಿಐಡಿ ಪತ್ರ ಬರೆದ ವಿಚಾರಕ್ಕೆ ಪ್ರತಿ-ಕ್ರಿಯಿಸಿದ ಅವರು, 'ಮೊದಲು ರವಿ ವಿಡಿಯೊ ಸಾಕ್ಷ್ಯ ಕೊಟ್ಟಿದ್ದರು. ಈಗ ಲಕ್ಷ್ಮೀ ಅವರೂ ಕೊಟ್ಟಿದ್ದಾರೆ. ಹೀಗಾಗಿ ಎರಡು ಕಡೆಯಿಂದ ಸಾಕ್ಷ್ಯ ಬಂದಿವೆ. ನಮ್ಮ ಕಾರ್ಯದರ್ಶಿ ಜತೆಗೆ, ನಮ್ಮದೇ ಆಗಿರುವ ತಂಡಕ್ಕೆ ವಿಡಿಯೊ ಕೊಟ್ಟಿದ್ದೇನೆ. ಅವರು ನೀಡುವ ವರದಿ ಆಧರಿಸಿ, ಎಫ್‌ಎಸ್‌ಎಲ್‌ಗೆ ಕಳುಹಿಸುತ್ತೇವೆ. ಎಫ್‌ಎಸ್‌ಎಲ್‌ನಿಂದ ವರದಿ ಬಂದ ಬಳಿಕ, ಸತ್ಯಾಂಶ ನೋಡಿಕೊಂಡು ತೀರ್ಮಾನ ಮಾಡುತ್ತೇವೆ' ಎಂದರು.

'ಸಿ.ಟಿ.ರವಿ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳಕರ ನಡುವೆ ಸಂಧಾನ ಮಾಡುತ್ತೀರಾ' ಎಂಬ ಪ್ರಶ್ನೆಗೆ, 'ಈ ಸಂಬಂಧ ಇಬ್ಬರಿಗೂ ಪತ್ರ ಬರೆಯಲು ನಿರ್ಧರಿಸಿದ್ದೇನೆ. ಆದರೆ, ಈಗ ಸಂಧಾನ ಆಗುವ ರೀತಿ ಕಾಣಿಸುತ್ತಿಲ್ಲ. ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿದೆ. ಆದರೂ, ಇಬ್ಬರಿಗೂ ಕರೆ ಮಾಡಿ ಸಂಧಾನಕ್ಕೆ ಪ್ರಯತ್ನಿಸುತ್ತೇನೆ' ಎಂದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಕ್ಷೇತ್ರದಲ್ಲಿ ಭಾನುವಾರ ಸುಬ್ರಹ್ಮಣ್ಯಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಗ್ಯಾರಂಟಿಗಳಿಂದ ಅಭಿವೃದ್ಧಿ ಕುಂಠಿತ: ಹಿಟ್ನಾಳ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ನೀಡಿರು

ರಾಘವೇಂದ್ರ ಹಿಟ್ನಾಳ

ವುದರಿಂದ ಅಭಿವೃದ್ಧಿ ಕುಂಠಿತವಾಗಿದೆ' ಎಂದು ಕೊಪ್ಪಳದ ಕಾಂಗ್ರೆಸ್ ಶಾಸಕ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ರಾಘವೇಂದ್ರ ಹಿಟ್ನಾಳ ಹೇಳಿದರು.

ತಾಲ್ಲೂಕಿನ ಕುಣಿಕೇರಿಯಲ್ಲಿ ಭಾನುವಾರ ಅಂಚೆ ಕಚೇರಿಯ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸುವ ಕಾರ್ಯಕ್ರಮದಲ್ಲಿ ಮಾತನಾಡಿ 'ನಿಮ್ಮ ಗ್ರಾಮದ ಅಭಿವೃದ್ಧಿಗೆ ಅನೇಕ ಯೋಜನೆ ರೂಪಿಸಲಾಗಿದ್ದರೂ ಸರ್ಕಾರ ಗ್ಯಾರಂಟಿ ಯೋಜನೆಗೆ ₹54 ಸಾವಿರ ಕೋಟಿ ನೀಡಿರುವ ಕಾರಣ ಅಭಿವೃದ್ಧಿ ಸ್ವಲ್ಪ ಕುಂಠಿತವಾಗಿದೆ. ಗ್ಯಾರಂಟಿ ಲಾಭ ನೇರವಾಗಿ ಜನರಿಗೆ ತಲುಪುತ್ತಿದೆ. ಅಭಿವೃದ್ಧಿ ಕೆಲಸಗಳು ನಡೆದಿವೆಯಾದರೂ ತಡವಾಗುತ್ತಿವೆ' ಎಂದರು.

ಜಾತ್ರೆ ಉದ್ಘಾಟನೆಗೆ ಪಂ.ವೆಂಕಟೇಶ ಕುಮಾರ್

ಕೊಪ್ಪಳ: ಇಲ್ಲಿನ ಗವಿಸಿದ್ಧೇಶ್ವರ ಮಠದ ಜಾತ್ರೆಯ ಮಹಾರಥೋತ್ಸವ ಜ. 15ರಂದು ಸಂಜೆ 5.30ಕ್ಕೆ ನಡೆಯಲಿದ್ದು, ಹೆಸರಾಂತ ಹಿಂದೂಸ್ತಾನಿ ಗಾಯಕ ಧಾರವಾಡದ ಪಂಡಿತ್ ಎಂ. ವೆಂಕಟೇಶ ಕುಮಾರ್ ಅವರು ಜಾತ್ರೆಗೆ ಚಾಲನೆ ನೀಡಲಿದ್ದಾರೆ.

ತುಮಕೂರಿನ ಸಿದ್ದಗಂಗಾಮಠದ ಸಿದ್ಧಲಿಂಗ ಸ್ವಾಮೀಜಿ, ವಿಜಯಪುರದ ಅಭಿನವ ಸಿದ್ಧಾರೂಢ ಸ್ವಾಮೀಜಿ ಮತ್ತು ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಜಾತ್ರೆಯ ಮೊದಲ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಭಾನುವಾರ ಅಭಿನವ ಗವಿ ಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

16ರಂದು ನಡೆಯುವ ಭಕ್ತ ಹಿತಚಿಂತನಾ ಸಭೆಗೆ ಪರಿಸರ ಕಾರ್ಯಕರ್ತ ಜಾಧವ್ ಪಾಯೆಂಗ್ ಮತ್ತು 17ರಂದು ನಡೆಯುವ ಸಮಾರೋಪ ಸಮಾರಂಭಕ್ಕೆ ಹೈಕೋರ್ಟ್‌ನ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ ಪಾಲ್ಗೊಳ್ಳುವರು.

ಸ್ವಚ್ಛತಾ ಅಭಿಯಾನ ಸಪ್ತಾಹ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ವೀ. ಹೆಗ್ಗಡೆ ಅವರ ಮಾರ್ಗ-ದರ್ಶನದಲ್ಲಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಜ.7ರಿಂದ 13ರವರೆಗೆ ರಾಜ್ಯದೆಲ್ಲೆಡೆ ದೇವಸ್ಥಾನ, ಬಸದಿ, ಮಸೀದಿ, ಚರ್ಚ್ ಮುಂತಾದ ಧಾರ್ಮಿಕ ಸ್ಥಳಗಳ ಸ್ವಚ್ಛತಾ ಅಭಿಯಾನ ಸಪ್ತಾಹ ಆಯೋಜಿಸಲಾಗಿದೆ ಎಂದು ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ನಿರ್ವಾಹಕ ನಿರ್ದೇಶಕ ಅನಿಲ್‌ಕುಮಾರ್ ಎಸ್.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ 16,902 ಶ್ರದ್ಧಾ ಕೇಂದ್ರಗಳನ್ನು ಗುರುತಿಸಲಾಗಿದ್ದು, 3,99,437 ಸ್ವಯಂಸೇವಕರು, ಸ್ವಚ್ಛತಾ ಸೇನಾನಿಗಳು, ಶ್ರದ್ಧಾಕೇಂದ್ರಗಳ ಆಡಳಿತ ಮಂಡಳಿ, ನವಜೀವನ ಸಮಿತಿ ಮತ್ತು ಶೌರ್ಯ ವಿಪತ್ತು ನಿರ್ವಹಣಾ ಸದಸ್ಯರು ಅಭಿಯಾನದಲ್ಲಿ ಸ್ವಯಂಪ್ರೇರಣೆಯಿಂದ ಭಾಗವಹಿಸಲಿದ್ದಾರೆ.

9 ವರ್ಷಗಳಿಂದ ವರ್ಷಕ್ಕೆ ಎರಡು ಬಾರಿ (ಮಕರಸಂಕ್ರಾಂತಿ ಮತ್ತು ಸ್ವಾತಂತ್ರ್ಯ ದಿನಾಚರಣೆ) ಸಪ್ತಾಹದ ಮೂಲಕ ಧಾರ್ಮಿಕ ಶ್ರದ್ಧಾಕೇಂದ್ರ ಗಳ ಸ್ವಚ್ಛತಾಕಾರ್ಯ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ವಿಶ್ರಾಂತಿಗೆಂದು ಬೈಲುಕುಪ್ಪೆಯ ಟಿಬೆಟನ್ ಕ್ಯಾಂಪ್‌ಗೆ ಆಗಮನ

ದಲೈಲಾಮಗೆ ಅದ್ದೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ಟಿಬೆಟನ್ ಧರ್ಮಗುರು 14ನೇ ದಲೈಲಾಮ ಅವರು ತಾಲ್ಲೂಕಿನ ಬೈಲುಕುಪ್ಪೆಯಲ್ಲಿರುವ ಟಿಬೆಟನ್ ನಿರಾಶ್ರಿತರ ಶಿಬಿರಕ್ಕೆ ಒಂದು ತಿಂಗಳ ವಿಶ್ರಾಂತಿಗಾಗಿ ಭಾನುವಾರ ಬಂದಿಳಿದರು. ಅವರನ್ನು ಇಲ್ಲಿನ ಟಿಬೆಟನ್ನರು ಸಾಂಪ್ರದಾಯಿಕ ಶೈಲಿಯಲ್ಲಿ ಅದ್ದೂರಿಯಾಗಿ ಸ್ವಾಗತಿಸಿದರು.

ಬೆಂಗಳೂರಿನಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಬೈಲುಕುಪ್ಪೆಯ ನೂತನ 4ನೇ ಕ್ಯಾಂಪ್‌ನಲ್ಲಿ ರುವ ಹೆಲಿಪ್ಯಾಡ್‌ಗೆ ದಲೈಲಾಮಾ ಬಂದಿಳಿದರು. ಝಡ್ ಪ್ಲಸ್ ಭದ್ರತೆ ಹೊಂದಿರುವ ಅವರ ಆಗಮನದ ಕಾರಣ 250ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು. ಹೆಲಿಪ್ಯಾಡ್‌ನಿಂದ ಕಾರಿನಲ್ಲಿ ಲಕ್ಷ್ಮಿಪುರ ಗ್ರಾಮದಲ್ಲಿ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಟಿಬೆಟನ್ ನಿರಾಶ್ರಿತರ ಶಿಬಿರಕ್ಕೆ ಭಾನುವಾರ ಬಂದ ದಲೈಲಾಮ ಅವರನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಸ್ವಾಗತಿಸಲಾಯಿತು

ರುವ ಬೌದ್ಧರ ಪ್ರಾರ್ಥನಾ ಕೇಂದ್ರಕ್ಕೆ (ಮೋನಾಸ್ಟ್ರಿ) ಬಂದರು.

ಧರ್ಮಗುರುವನ್ನು ಕಣ್ತುಂಬಿ ಕೊಳ್ಳಲು, ಮುಂಜಾನೆಯಿಂದಲೇ ರಸ್ತೆ ಬದಿಯಲ್ಲಿ 6 ಕಿ.ಮೀ. ಉದ್ದದವರೆಗೂ ಸಮುದಾಯದವರು ನಿಂತಿದ್ದರು. ಸಾವಿರಾರು ಮಂದಿ ಸಾಂಪ್ರದಾಯಿಕ ದಿರಿಸಿನಲ್ಲಿ ಬಂದು ಧರ್ಮಗುರುವನ್ನು ಭಕ್ತಿ-ಭಾವದಿಂದ ಬರಮಾಡಿಕೊಂಡರು.

ಮೋನಾಸ್ಟ್ರಿ ಬಳಿ ಕಲಾತಂಡದವರು ಸಾಂಪ್ರದಾಯಿಕ ನೃತ್ಯದೊಂದಿಗೆ ಸ್ವಾಗತಿಸಿದರು. ಅಲ್ಲಿನ ನಿರಾಶ್ರಿತರು ಮತ್ತು ಬೌದ್ಧ ಬಿಕ್ಕುಗಳಿಗೆ ದಲೈಲಾಮ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿದರು.

ಜಿಲ್ಲಾಡಳಿತದ ಪರವಾಗಿ ಹುಣಸೂರು ಎಸಿ ವಿಜಯಕುಮಾರ್, ತಹಶೀಲ್ದಾರ್ ನಿಸರ್ಗ ಪ್ರಿಯ, ವಿಎ ನವೀನ್ ರಾವ್ ಸ್ವಾಗತ ಕೋರಿದರು. ಎಸ್ಪಿ ಎನ್. ವಿಷ್ಣುವರ್ಧನ್, ಎಎಸ್ಪಿ ನಾಗೇಶ್, ಡಿವೈಎಸ್‌ಪಿ ಗೋಪಾಲಕೃಷ್ಣ, ಸಿಪಿಐ ದೀಪಕ್, ಬೈಲುಕುಪ್ಪೆ ಠಾಣಾಧಿಕಾರಿ ಅಜಯ್ ಕುಮಾರ್, ಸ್ಥಳೀಯ ಸೆಟ್ಲ್‌ಮೆಂಟ್ ಅಧಿಕಾರಿಗಳಾದ ಗ್ಯಾಲಕ್, ಚಿಮ್ಮಿ ದೋರ್ಜಿ, ಟಿಡಿಎಲ್ ಸೊಸೈಟಿ ಅಧ್ಯಕ್ಷ ಜೋಡೆನ್ ಪಾಲ್ಗೊಂಡಿದ್ದರು.

ದರ ನಿಗದಿ ಸಮಿತಿಯಿಂದ ವರದಿ ಸಲ್ಲಿಕೆ • ದರ ಪರಿಷ್ಕರಣೆ ಕುರಿತು ವಾರದಲ್ಲಿ ನಿರ್ಧಾರ ಸಾಧ್ಯತೆ

ಮೆಟ್ರೊ ಪ್ರಯಾಣದರ ಏರಿಕೆ ಶೀಘ್ರ?

• ಬಾಲಕೃಷ್ಣ ಪಿ.ಎಚ್.

ಸಾಂದರ್ಭಿಕ ಚಿತ್ರ

ಬೆಂಗಳೂರು: ಸಾರಿಗೆ ನಿಗಮಗಳ ಬಸ್‌ಗಳ ಟಿಕೆಟ್ ದರ ಏರಿಕೆಯಾದ ಬೆನ್ನಲ್ಲೇ 'ನಮ್ಮ ಮೆಟ್ರೊ' ಪ್ರಯಾಣ ದರವೂ ಏರಿಕೆಯಾಗಲಿದೆ ಎಂಬ ಚರ್ಚೆ ಆರಂಭವಾಗಿದೆ. ಇದಕ್ಕೆ ಪೂರಕ ಎಂಬಂತೆ 'ನಮ್ಮ ಮೆಟ್ರೊ' ದರ ಪರಿಷ್ಕರಣೆಗಾಗಿ ರಚಿಸಿದ್ದ ದರ ನಿಗದಿ ಸಮಿತಿಯು ವರದಿ ಸಲ್ಲಿಸಿದೆ.

ಸದ್ಯ ಮೆಟ್ರೊ ಪ್ರಯಾಣದ ಕನಿಷ್ಠ ದರ ₹ 10 ಹಾಗೂ ಗರಿಷ್ಠ ದರ ₹ 60 ಇದೆ. ಒಂದು ವಾರದ ಒಳಗೆ ನಡೆಯಲಿರುವ ಬಿಎಂಆರ್‌ಸಿಎಲ್ ಮಂಡಳಿಯ ಆಂತರಿಕ ಸಭೆಯಲ್ಲಿ ದರ ಏರಿಕೆಯ ಬಗ್ಗೆ ಅಂತಿಮ ತೀರ್ಮಾನವಾಗಲಿದೆ.

2011ರಲ್ಲಿ ಮೆಟ್ರೊ ಸಂಚಾರ ಆರಂಭವಾಗಿದ್ದು, 2017ರಲ್ಲಿ ದರ ಪರಿಷ್ಕರಣೆ ಮಾಡಲಾಗಿತ್ತು. ಮೆಟ್ರೊ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ, 2002ರ ಸೆಕ್ಷನ್ 33 ಮತ್ತು 34ರ ಅಡಿಯಲ್ಲಿ ಕೇಂದ್ರ ಸರ್ಕಾರ ರಚಿಸಿದ ಬಿಎಂಆರ್‌ಸಿಎಲ್‌ನ ಮೊದಲ ದರ ನಿಗದಿ ಸಮಿತಿ ಇದಾಗಿದೆ.

ಮೂವರು ಸದಸ್ಯರಿದ್ದ ಈ ಸಮಿತಿಯು ಸಾರ್ವಜನಿಕರಿಂದ 2,000ಕ್ಕೂ ಅಧಿಕ ಸಲಹೆಗಳನ್ನು ಸ್ವೀಕರಿಸಿತ್ತು. ಸಂಘ ಸಂಸ್ಥೆಗಳೊಂದಿಗೆ, ತಜ್ಞರೊಂದಿಗೆ ಚರ್ಚೆ ನಡೆಸಿತ್ತು. ಮೂಲ ಸೌಕರ್ಯ ಒದಗಿಸುವ ವೆಚ್ಚ, ಇಂಧನ ವೆಚ್ಚ, ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನದ ವೆಚ್ಚ, ಮೆಟ್ರೊ ನಿರ್ವಹಣೆ ವೆಚ್ಚಗಳನ್ನೆಲ್ಲ ಪರಿಗಣಿಸಿದ ಬಳಿಕ ವರದಿ ಸಲ್ಲಿಸಿದೆ.

'ದರ ಏರಿಕೆಯಾಗುವುದು ನಿಜ. ಎಷ್ಟು ಪ್ರಮಾಣ ಮತ್ತು ಯಾವಾಗ ಎಂಬುದು ಮಂಡಳಿಯಲ್ಲಿ ತೀರ್ಮಾನವಾಗಲಿದೆ. ಒಂದು ತಿಂಗಳ ಒಳಗೆ ಇಲ್ಲವೇ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗುವ ವೇಳೆ ಪರಿಷ್ಕೃತ ದರ ಜಾರಿಯಾಗುವ ಸಾಧ್ಯತೆಗಳಿವೆ. ಫೆಬ್ರುವರಿ ಅಂತ್ಯ ಇಲ್ಲವೇ ಮಾರ್ಚ್ ಆರಂಭದಲ್ಲಿ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಶುರುವಾಗಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ರೈಲ್ವೆ ಸಚಿವಾಲಯದ ಕಾರ್ಯದರ್ಶಿ ನೇತೃತ್ವದಲ್ಲಿ ಮಂಡಳಿ ಸಭೆ ನಡೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯದರ್ಶಿಗಳು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಶೇ 15–20 ದರ ನಿಗದಿ?: ದರ ನಿಗದಿ ಸಮಿತಿಯು ಶೇ 40ರಷ್ಟು ಶಿಫಾರಸು ಮಾಡಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಆದರೆ, ಅದುವೇ ಅಂತಿಮವಾಗಿರುವುದಿಲ್ಲ. ಮಂಡಳಿಯ ತೀರ್ಮಾನ ಅಂತಿಮವಾಗಿರುತ್ತದೆ. ಪ್ರಯಾಣಿಕರ ಹಿತಾಸಕ್ತಿಯನ್ನೂ ನೋಡಿಕೊಂಡು, ಬಿಎಂಆರ್‌ಸಿಎಲ್‌ಗೂ ನಷ್ಟವಾಗದಂತೆ ದರ ನಿಗದಿಯಾಗಲಿದೆ. ಶೇ 15ರಿಂದ ಶೇ 20ರಷ್ಟು ದರ ಹೆಚ್ಚಳ ಮಾಡುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಸಭೆಯ ಬಳಿಕ ಮಾಹಿತಿ

'ದರ ನಿಗದಿ ಸಮಿತಿಯು ವರದಿ ಸಲ್ಲಿಸಿದೆ. ಮಂಡಳಿ ಸಭೆ ನಡೆಯುವವರೆಗೆ ದರ ಹೆಚ್ಚಳ ಆಗುತ್ತಾ? ಆಗುವುದಿದ್ದರೆ ಎಷ್ಟು? ಯಾವಾಗಿನಿಂದ ಎಂದೆಲ್ಲ ಈಗಲೇ ಹೇಳಲು ಸಾಧ್ಯವಿಲ್ಲ. ಸಭೆ ನಡೆದ ಬಳಿಕ ಅಧಿಕೃತವಾಗಿ ಮಾಹಿತಿ ನೀಡಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಸ್. ಮಹೇಶ್ವರ ರಾವ್ ಪ್ರತಿಕ್ರಿಯಿಸಿದ್ದಾರೆ.

'ನಿರ್ವಹಣೆ ವೆಚ್ಚ ಕಡಿಮೆ ಮಾಡಿ'

ನಮ್ಮ ಮೆಟ್ರೊದಲ್ಲಿ ಹಲವು ಅನಗತ್ಯ ವೆಚ್ಚಗಳಿವೆ. ಅದಕ್ಕೆಲ್ಲ ಕಡಿವಾಣ ಹಾಕಿದರೆ, ನಿರ್ವಹಣೆಯ ಹೆಸರಲ್ಲಿ ಮಾಡುತ್ತಿರುವ ವೆಚ್ಚದಲ್ಲಿ ಪ್ರತಿ ತಿಂಗಳು ₹2 ಕೋಟಿ ಕಡಿಮೆ ಮಾಡಬಹುದು. ಆಗ ಮೆಟ್ರೊ ಪ್ರಯಾಣ ದರವನ್ನು ಏರಿಸಬೇಕಿಲ್ಲ. ಏರಿಕೆ ಮಾಡಲೇಬೇಕಿದ್ದರೆ ₹5ರಿಂದ ₹10ರ ಒಳಗೆ ಏರಿಸಬಹುದು ಎಂದು ಮೆಟ್ರೊ ಎಂಪ್ಲಾಯಿಸ್ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ತಿಳಿಸಿದರು.

ವಾಯುವಜ್ರ ಮತ್ತಷ್ಟು ದುಬಾರಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಂಗಳೂರು ನಗರದ ವಿವಿಧ ಭಾಗಗಳಿಗೆ ಬಿಎಂಟಿಸಿ ಸಂಚರಿಸುತ್ತಿದ್ದ ಹವಾನಿಯಂತ್ರಿತ ವಾಯುವಜ್ರ ವೋಲ್ವೊ ಬಸ್ ದರ ದುಬಾರಿಯಾಗಿದೆ.

ಶೇ 5ರಷ್ಟು ಜಿಎಸ್‌ಟಿ ಸೇರಿ ಪ್ರಯಾಣ ದರದಲ್ಲಿ ಶೇ 6.25 ರಷ್ಟು ಏರಿಕೆಯಾಗಿದೆ. ವಿಮಾನ ನಿಲ್ದಾಣದಿಂದ ದೂರದ ಪ್ರದೇಶಗಳ ಟಿಕೆಟ್ ದರ ₹400ರ ಗಡಿದಾಟಿದೆ. ನಿತ್ಯ ಸಾವಿರಾರು ಪ್ರಯಾಣಿಕರೊಂದಿಗೆ ವಿಮಾನ ನಿಲ್ದಾಣ ಮತ್ತು ವಿಮಾನಯಾನ ಸಂಸ್ಥೆಯ ಸಿಬ್ಬಂದಿ ನಿತ್ಯ ವಾಯುವಜ್ರ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು.

ವೈಟ್‌ಫೀಲ್ಡ್ ಟಿಟಿಎಂಸಿ ಮಾರ್ಗದಲ್ಲಿ ಅತೀ ಹೆಚ್ಚು ಬಸ್ ಓಡುತ್ತಿರುವ ಕಾರಣ ಈ ಮಾರ್ಗದ ಬಸ್ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಕ್ಯಾಬ್, ಟ್ಯಾಕ್ಸಿ ಸೇವೆಗಳಿಂತಲೂ ವಾಯುವಜ್ರ ಬಸ್‌ನಲ್ಲಿ ಸಂಚರಿಸುವುದು ದುಬಾರಿಯಾಗಿದೆ. ಇದರಿಂದ ನಿತ್ಯ ಪ್ರಯಾಣಿಕರಿಗೆ ಅನನುಕೂಲವಾಗಲಿದೆ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ವಾಯುವಜ್ರ ಬಸ್ ಮೂಲಕ ದೇವನಹಳ್ಳಿಯ ವಿಮಾನ ನಿಲ್ದಾಣ ತಲುಪಲು ಕೇಂದ್ರ ಸರ್ಕಾರಕ್ಕೆ ಶೇ 5ರಷ್ಟು ಜಿಎಸ್‌ಟಿ ಕಟ್ಟಬೇಕು. ನಂತರ ಸಾದಹಳ್ಳಿ ಸಮೀಪದ ಟೋಲ್ ಶುಲ್ಕವನ್ನೂ ಸೇರಿಸಿ ಪ್ರಯಾಣಿಕರಿಂದ ಟಿಕೆಟ್ ಹಣದಿಂದಲೇ ಸಂಗ್ರಹಿಸುತ್ತಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಮಾನ ನಿಲ್ದಾಣದಿಂದ ವಾಯುವಜ್ರ ಬಸ್ ದರ (₹)

ಬಸ್ ರೂಟ್ ಸಂಖ್ಯೆ	ತಲುಪುವ ಸ್ಥಳ	ಹಿಂದಿನ ದರ	ಪರಿಷ್ಕೃತ ದರ
ಕೆಐಎ-4	ಎಚ್‌ಎಎಲ್ ಜೀವನ್ ಬಿಮಾ ನಗರ	285	310
ಕೆಐಎ-4ಎ	ವೈಟ್‌ಫೀಲ್ಡ್	305	330
ಕೆಐಎ-15	ವೈಟ್‌ಫೀಲ್ಡ್ ಟಿಟಿಎಂಸಿ	300	300
ಕೆಐಎ-6	ಕಾಡುಗೋಡಿ	305	330
ಕೆಐಎ-5	ಬನಶಂಕರಿ ಕದಿರೇನಹಳ್ಳಿ	295	320
ಕೆಐಎ-5ಡಿ	ಬ್ರಿಗೇಡ್ ಮೆಡೋಸ್ ಕನಕಪುರ ರಸ್ತೆ	335	360
ಕೆಐಎ-7	ಎಚ್‌ಎಸ್‌ಆರ್ ಕೆಇಬಿ	285	310
ಕೆಐಎ-7ಎ	ಎಚ್‌ಎಸ್‌ಆರ್ ಬಿಡಿಎ	275	300
ಕೆಐಎ-8	ಎಲೆಕ್ಟ್ರಾನಿಕ್ ಸಿಟಿ	365	390
ಕೆಐಎ-8ಎ	ಕುವೆಂಪು ನಗರ	335	360
ಕೆಐಎ-8ಸಿ	ಚಂದಾಪುರ	385	410
ಕೆಐಎ-8ಡಿ	ಸರ್ಜಾಪುರ	375	400
ಕೆಐಎ-8ಇ	ಇ-ಸಿಟಿ ವಿಪ್ರೋ ಗೇಟ್	380	380
ಕೆಐಎ-9	ಮೆಜೆಸ್ಟಿಕ್	265	290
ಕೆಐಎ-10	ಮೈಸೂರು ರಸ್ತೆ ನಿಲ್ದಾಣ	275	300
ಕೆಐಎ-14	ರಾಯಲ್ ಮೀನಾಕ್ಷಿ ಮಾಲ್	315	340
ಕೆಐಎ-17	ಬಿಇಎಂಎಸ್ 5ನೇ ಹಂತ	295	320

ಬಸ್ ಟಿಕೆಟ್‌ದರ ಹೆಚ್ಚಳಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು

ಬೆಂಗಳೂರು: ಬಸ್ ಪ್ರಯಾಣ ದರ ಏರಿಕೆಯನ್ನು ವಿರೋಧಿಸಿ ಕರ್ನಾಟಕ ರಾಷ್ಟ್ರ ರಕ್ಷಣಾ ಸಮಿತಿ (ಕೆಆರ್‌ಎಸ್) ಪಕ್ಷದಿಂದ ನಗರದ ಮೆಜೆಸ್ಟಿಕ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ರಘು ಜಾಣಗೆರೆ, 'ರಾಜ್ಯ ಸರ್ಕಾರವು ದರ ಏರಿಕೆ ಮಾಡಿ ಜನರಿಗೆ ಬರೆ ಹಾಕುತ್ತಿದೆ' ಎಂದು ಆಪಾದಿಸಿದರು.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಲ್.ಜೀವನ್ ಅವರು, 'ಜನರು ಬೀದಿಗಿಳಿದು ಸರ್ಕಾರವನ್ನು ಪ್ರಶ್ನಿಸದಿದ್ದರೆ ಜನರ ಸುಲಿಗೆ ನಿರಂತರವಾಗಿ ನಡೆಯಲಿದೆ' ಎಂದೂ ಎಚ್ಚರಿಸಿದರು.

ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು ಚಾಮರಾಜಪೇಟೆ ಪೊಲೀಸ್ ಮೈದಾನಕ್ಕೆ ಕರೆದೊಯ್ದರು. ನಂತರ ಬಿಡುಗಡೆ ಮಾಡಿದರು.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ರಘು ನಂದನ್, ರಾಜ್ಯ ಯುವ ಘಟಕದ ಅಧ್ಯಕ್ಷೆ ಜನನಿ ವತ್ಸಲಾ ಹಾಗೂ ನಿರ್ಮಲಾ, ನಾಗೇಂದ್ರ, ಅಮಿತ್, ರಾಮರೆಡ್ಡಿ, ಶ್ರೀನಿವಾಸ್ ಭಾಗವಹಿಸಿದ್ದರು.

ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರಯಾಣ ದರ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಯಿತು.

ಎಸ್‌ಯುಸಿಐ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಕಾರ್ಯದರ್ಶಿ ಜ್ಞಾನಮೂರ್ತಿ ಮಾತನಾಡಿ, 'ಬಡ ಜನರು ಬಳಸುವ ಬಸ್ ಸೌಲಭ್ಯದ ದರ ಹೆಚ್ಚಿಸಿರುವುದು ಬಡವರ ಮೇಲೆ ಬರೆ ಎಳೆದಂತೆ ಆಗಿದೆ. ಹೊಸ ವರ್ಷದ ಉಡುಗೊರೆಯಾಗಿ ಸರ್ಕಾರ ದರ ಏರಿಕೆಯ ಪೆಟ್ಟು ನೀಡಿದೆ. ಸಾರಿಗೆಯಂತಹ ಮೂಲಸೌಲಭ್ಯ ದುಬಾರಿಗೊಳಿಸುವುದು ಸರಿಯಾದ ನಿರ್ಧಾರ ಅಲ್ಲ' ಎಂದು ಹೇಳಿದರು.

'ಹಿಂದಿನ ಎಲ್ಲಾ ಸರ್ಕಾರಗಳೂ ಸೇರಿದಂತೆ ಕಾಂಗ್ರೆಸ್ ಸರ್ಕಾರ ಜನ ವಿರೋಧಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ' ಎಂದು ತಿಳಿಸಿದರು. ವಿನಯ್ ಸಾರಥಿ, ಎಂ.ಎನ್. ಶ್ರೀರಾಮ್ ಪಾಲ್ಗೊಂಡಿದ್ದರು.

'ಸಂವಿಧಾನ ದಿನಾಚರಣೆ'ಯಲ್ಲಿ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಆಕ್ರೋಶ

'ಮತ ಬ್ಯಾಂಕ್'ಗೆ ಕಾಂಗ್ರೆಸ್‌ನಿಂದ ದಲಿತರ ಓಲೈಕೆ'

ಪ್ರಜಾವಾಣಿ ವಾರ್ತೆ

ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ ಆಯೋಜಿಸಿದ 'ಸಂವಿಧಾನ ದಿನಾಚರಣೆ' ಅಂಗವಾಗಿ ವಿಧಾನಸೌಧದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ನಡೆದ ಮೆರವಣಿಗೆಯಲ್ಲಿ ಮಹಿಳೆಯರು ಅಂಬೇಡ್ಕರ್ ಪ್ರತಿಕೃತಿ ಮತ್ತು ಸಂವಿಧಾನದ ಪ್ರಸ್ತಾವನೆ ಇದ್ದ ಫಲಕಗಳನ್ನು ತಲೆಮೇಲೆ ಹೊತ್ತು ಸಾಗಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ತನ್ನ ಅಧಿಕಾರಾವಧಿಯ ಉದ್ದಕ್ಕೂ ಸಂವಿಧಾನ ಮತ್ತು ಅಂಬೇಡ್ಕರ್ ಅವರಿಗೆ ಅವಮಾನ ಮಾಡುತ್ತಲೇ ಬಂದ ಕಾಂಗ್ರೆಸ್, ಈಗ ಅವರ ಚಿತ್ರ ಹಿಡಿದುಕೊಂಡು ಮೆರವಣಿಗೆ ಮಾಡುತ್ತಿದೆ. ದಲಿತರು ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿಯು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಆಯೋಜಿಸಿದ್ದ, 'ಸಂವಿಧಾನ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಮತ ಬ್ಯಾಂಕ್‌ಗಾಗಿ ಯಾವುದೋ ಒಂದು ಸಮುದಾಯವನ್ನು ಯಥೇಚ್ಛವಾಗಿ ಓಲೈಸುವುದು ಸಂವಿಧಾನದ ಸಮಾನತೆಯ ಮೌಲ್ಯಕ್ಕೆ ಧಕ್ಕೆಯಲ್ಲವೇ' ಎಂದು ಪ್ರಶ್ನಿಸಿದರು.

'ಕೇಂದ್ರದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಇದನ್ನೇ ಮಾಡಿತು. ರಾಜ್ಯದ ಈಗಿನ ಕಾಂಗ್ರೆಸ್ ಸರ್ಕಾರ ಸಹ ಇದನ್ನೇ ಮಾಡುತ್ತಿದೆ. ಗ್ಯಾರಂಟಿಗಳ ಆಮಿಷವೊಡ್ಡಿ ಅಧಿಕಾರಕ್ಕೆ ಬಂದು, ಈಗ ಬೆಲೆ ಏರಿಕೆ ಮಾಡುತ್ತಿದೆ. ಬಸ್ ದರ ಏರಿಕೆ ವಿರುದ್ಧ ಬಿಜೆಪಿ ಹೋರಾಡಲು ಮುಂದಾದಾಗ, ಪ್ರತಿಭಟನೆಯ ಹಕ್ಕನ್ನು ಕಿತ್ತುಕೊಂಡಿತು. ಇದು ಸಂವಿಧಾನಕ್ಕೆ ಮಾಡಿದ ಅಪಚಾರವಲ್ಲವೇ?' ಎಂದರು.

ಪಲ್ಲಕ್ಕಿ ಮೆರವಣಿಗೆ- ಪ್ರತಿಮೆಗೆ ಮಾಲಾರ್ಪಣೆ

ಸಂವಿಧಾನ ದಿನಾಚರಣೆಯ ಭಾಗವಾಗಿ ಸಮಿತಿಯ ಸದಸ್ಯರು ಮತ್ತು ಕಾರ್ಯಕರ್ತರು ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ನಂತರ ವಿಧಾನಸೌಧದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದರು. ಅಂಬೇಡ್ಕರ್ ಅವರ ಭಾವಿಚಿತ್ರವಿದ್ದ ಮೋಟರು ಪಲ್ಲಕ್ಕಿ, ಡೊಳ್ಳಿನ ಕುಣಿತ ಮತ್ತು ಜನಪದ ನೃತ್ಯಗಳು ಮೆರವಣಿಗೆಯ ಮೆರುಗನ್ನು ಹೆಚ್ಚಿಸಿದವು.

ಮೆರವಣಿಗೆಯಲ್ಲಿ ಭಾಗಿಯಾಗಿದ್ದ ನೂರಾರು ಜನರು, 'ಜೈ ಭೀಮ್. ಜೈ ಜೈ ಭೀಮ್' ಎಂದು ಘೋಷಣೆ ಕೂಗಿದರು.

ಅಮಿತ್ ಶಾ ಅವರು ಸಂಸತ್ತಿನಲ್ಲಿ ಬಾಯಿತಪ್ಪಿ ಆಡಿದ ಮಾತನ್ನೇ ಕಾಂಗ್ರೆಸ್ ದೊಡ್ಡದು ಮಾಡುತ್ತಿದೆ. ಅದಕ್ಕೆ ಬೆಂಕಿ ಹಚ್ಚಿ, ಪ್ರತಿಭಟನೆಗೆ ಕುಮ್ಮಕ್ಕು ನೀಡಿದೆ

ಎನ್.ಮಹೇಶ್
ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ

ವಿಧಾನಸಭೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಬಿಜೆಪಿ ಯಾವತ್ತಿಗೂ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿಲ್ಲ. ಆದರೆ ಈಗ ಅಮಿತ್ ಶಾ ಅವರ ಹೇಳಿಕೆಯನ್ನು ತಿರುಚಿ, ದಲಿತರನ್ನು ಅವರ ವಿರುದ್ಧ ಎತ್ತಿಕಟ್ಟುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಕಾಂಗ್ರೆಸ್‌ನ ಷಡ್ಯಂತ್ರಕ್ಕೆ ಬಲಿಯಾಗಿರುವ ದಲಿತರು ಅಮಿತ್ ಶಾ ವಿರುದ್ಧ ಬೀದಿಗೆ ಇಳಿದಿದ್ದಾರೆ. ಸತ್ಯವನ್ನು ಜನರು ಅರ್ಥಮಾಡಿಕೊಳ್ಳಬೇಕು' ಎಂದರು.

ಸಮಿತಿಯ ಅಧ್ಯಕ್ಷ ವೈ.ಸಂಪಂಗಿ, 'ದಲಿತರು ಈಗಲೂ ಹಿಂದುಳಿದಿದ್ದಾರೆ. ಅವರ ಸಬಲೀಕರಣಕ್ಕೆ ದುಡಿಯದೆ, ಅಂಬೇಡ್ಕರ್ ಅವರ ಚಿತ್ರವನ್ನು ಹೊತ್ತು ತಿರುಗಿದರೆ ಏನೂ ಆಗುವುದಿಲ್ಲ' ಎಂದರು.

13 ಪ್ರಕರಣ ದಾಖಲಾಗಿದ್ದ ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ರೌಡಿ ಹಾಗೂ ಡ್ರಗ್ಸ್ ಪೆಡ್ಲರ್ ಸೈಯದ್ ಚಾಂದ್ ಪಾಷಾ ಅಲಿಯಾಸ್ ಚಂದುಬಾ ಎಂಬಾತನನ್ನು ಚಾಮರಾಜಪೇಟೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಆರೋಪಿ ವಿರುದ್ಧ ಮಾದಕ ವಸ್ತುಗಳ ಅಕ್ರಮ ಸಾಗಣೆ ತಡೆ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

'2015ರಿಂದಲೂ ಆರೋಪಿ ಸಹಚರರ ಜತೆಗೆ ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದ ಮಾದಕ ವಸ್ತುಗಳನ್ನು ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ. ಈತನ ವಿರುದ್ಧ 13 ಪ್ರಕರಣಗಳು ದಾಖಲಾಗಿದ್ದವು. ಜಾಮೀನು ಪಡೆದು ಬಿಡುಗಡೆಯಾದ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಅಲ್ಲದೇ, ನಗರದ ಪಶ್ಚಿಮ ಹಾಗೂ ದಕ್ಷಿಣ ಭಾಗದ ವ್ಯಾಪ್ತಿಯಲ್ಲಿ ಮತ್ತೆ ಗಾಂಜಾ ಮಾರಾಟ ಮಾಡುತ್ತಿದ್ದ. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ಆರೋಪಿಯನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಮರದ ಕಂಬ ಬಿದ್ದು ವಿದ್ಯಾರ್ಥಿನಿ ಮೃತಪಟ್ಟಿದ್ದ ಪ್ರಕರಣ

ಎಂಜಿನಿಯರ್ ವಿಚಾರಣೆ: ಮಾಲೀಕ ನಾಪತ್ತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ಸೆಂಟ್ರಿಂಗ್‌ಗೆ ಅಳವಡಿಸಲಾಗಿದ್ದ ಮರದ ಕಂಬಗಳು ಬಿದ್ದು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ತೇಜಸ್ವಿನಿ(15) ಮೃತಪಟ್ಟ ಪ್ರಕರಣದ ತನಿಖೆ ನಡೆಸುತ್ತಿರುವ ವಿ.ವಿ ಪುರ ಠಾಣೆ ಪೊಲೀಸರು, ಎಂಜಿನಿಯರ್ ಚಂದ್ರಶೇಖರ್ ಅವರನ್ನು ಭಾನುವಾರ ರಾತ್ರಿ ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಕಟ್ಟಡದ ಮಾಲೀಕ, ಗುತ್ತಿಗೆದಾರ ಹಾಗೂ ಕಾರ್ಮಿಕರು ತಲೆಮರೆಸಿಕೊಂಡಿದ್ದಾರೆ.

ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣದ ಸಮೀಪ ನಿರ್ಮಾಣ ಹಂತದ ಕಟ್ಟಡಕ್ಕೆ ಅಳವಡಿಸಿದ್ದ ಮರದ ಕಂಬಗಳು ಬಿದ್ದು ತೇಜಸ್ವಿನಿ ಮೃತಪಟ್ಟಿದ್ದಳು. ದುರ್ಘಟನೆಗೆ ಕಾರಣವಾದ ನಿರ್ಮಾಣ ಹಂತದ ಕಟ್ಟಡ ಮಾಲೀಕ, ಗುತ್ತಿಗೆದಾರ, ಎಂಜಿನಿಯರ್, ಬಿಬಿಎಂಪಿ ಅಧಿಕಾರಿಗಳು ಹಾಗೂ ಇತರರ ವಿರುದ್ಧ ವಿ.ವಿ.ಪುರ ಠಾಣೆ ಪೊಲೀಸರು ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 106(1)ರ (ನಿರ್ಲಕ್ಷ್ಯ ಆರೋಪ) ಅಡಿ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಚಂದ್ರಶೇಖರ್ ಅವರನ್ನು ವಶಕ್ಕೆ ಪಡೆದುಕೊಂಡು ಘಟನೆ ಸಂಬಂಧ ವಿಚಾರಣೆ ನಡೆಸಲಾಗಿದೆ. ಬಳಿಕ ಮತ್ತೊಮ್ಮೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೋಟಿಸ್ ಕೊಟ್ಟು ಕಳುಹಿಸಲಾಗಿದೆ.

ನಾಪತ್ತೆಯಾದವರ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ. ಕಟ್ಟಡ ನಿರ್ಮಾಣ ಮಾಡಲು ಅನುಮತಿ ನೀಡಿದ ಬಿಬಿಎಂಪಿ ಅಧಿಕಾರಿಗಳು ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲಿಸಿಲ್ಲ ಎಂಬುದು ಗೊತ್ತಾಗಿದೆ. ಎಲ್ಲಾ ಆರೋಪಿಗಳನ್ನು ಸದ್ಯದಲ್ಲೇ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಿದ್ಯಾರ್ಥಿನಿಯ ಮೃತದೇಹವನ್ನು ಭಾನುವಾರ ಮಧ್ಯಾಹ್ನ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು. ಇದಕ್ಕೂ ಮೊದಲು ಮೃತದೇಹ ಹಸ್ತಾಂತರ ವಿಳಂಬ ಮಾಡಲಾಗುತ್ತಿದೆ, ಆರೋಪಿಗಳ ಬಂಧನ ಮಾಡಲು ಪೊಲೀಸರು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಕುಟುಂಬಸ್ಥರು ಪ್ರತಿಭಟನೆ ನಡೆಸಿದ್ದರು.

'ಖಾಲಿ ಪೇಪರ್ ಮೇಲೆ ಸಹಿ ಮಾಡುವಂತೆ ಒತ್ತಾಯಿಸುತ್ತಿದ್ದಾರೆ. ಕಟ್ಟಡದ ಮಾಲೀಕರ ಬಳಿ ಬಳಿ ಏನಾದರೂ ಮಾತನಾಡುವಂತೆ ಒತ್ತಾಯಿಸುತ್ತಿದ್ದಾರೆ' ಎಂದು ತೇಜಸ್ವಿನಿ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಜಿ.ನಗರ ನಿವಾಸಿ ಖಾಸಗಿ ಸಂಸ್ಥೆಯಲ್ಲಿ ಕಾರು ಚಾಲಕ ಸುಧಾಕರ್ ಹಾಗೂ ಧನಲಕ್ಷ್ಮಿ ದಂಪತಿಯ ಹಿರಿಯ ಪುತ್ರಿ ತೇಜಸ್ವಿನಿ. ಶನಿವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಶಾಲೆ ಮುಗಿಸಿಕೊಂಡು ಎನ್‌ಎಚ್‌ಎಸ್ ರಸ್ತೆಯ ನ್ಯಾಷನಲ್ ಕಾಲೇಜು ಮೆಟ್ರೊ ನಿಲ್ದಾಣ ಸಮೀಪ ನಡೆದುಕೊಂಡು ಮನೆಗೆ ಹೋಗುತ್ತಿದ್ದಳು. ಅದೇ ಮಾರ್ಗದಲ್ಲಿ ನಿರ್ಮಾಣ ಆಗುತ್ತಿರುವ ಆರು ಅಂತಸ್ತಿನ ಕಟ್ಟಡದಲ್ಲಿ ಸೆಂಟ್ರಿಂಗ್‌ಗೆ ಅಳವಡಿಸುತ್ತಿದ್ದ ಮರದ ಕಂಬಗಳು ವಿದ್ಯಾರ್ಥಿನಿ ತಲೆಮೇಲೆ ಬಿದ್ದು ಮೃತಪಟ್ಟಿದ್ದಳು.

ತಾಯಿ ಕೊಂದು ಮಗ ಆತ್ಮಹತ್ಯೆ

ಆನೇಕಲ್: ಸೂರ್ಯಸಿಟಿ ಸಮೀಪದ ಹಳೆ ಚಂದಾಪುರ ಬಳಿ ಮದ್ಯ ವ್ಯಸನಿ, ಮಾನಸಿಕ ಅಸ್ವಸ್ಥ ಯುವಕನೊಬ್ಬ ಶನಿವಾರ ರಾತ್ರಿ ತನ್ನ ತಾಯಿಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಲಕ್ಷ್ಮೀದೇವಿ (41) ಎಂಬುವವರನ್ನು ಮಗ ರಮೇಶ್ (21) ಮೊಬೈಲ್ ಚಾರ್ಜಿಂಗ್ ವೈರ್‌ನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿದ್ದಾನೆ. ಬಳಿಕ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ 1,825 ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ಪಶ್ಚಿಮ ವಿಭಾಗದ ಸಂಚಾರ ಪೊಲೀಸರು, 1,825 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ವಿವಿಧ ಪ್ರಕರಣಗಳಲ್ಲಿ ಒಟ್ಟು ₹9.30 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬಂದ ಹಾಗೂ ನಿರ್ಬಂಧಿತ ರಸ್ತೆಯಲ್ಲಿ ಸಂಚಾರ ನಡೆಸಿದವರ ವಿರುದ್ಧ 570 ಪ್ರಕರಣ ದಾಖಲಿಸಿಕೊಂಡು, ₹2.82 ಲಕ್ಷ ದಂಡವನ್ನು ಸಂಚಾರ ವಿಭಾಗದ ಪೊಲೀಸರು ಸಂಗ್ರಹಿಸಿದ್ದಾರೆ. ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದ್ದವರ ವಿರುದ್ಧ 34 ಪ್ರಕರಣ ದಾಖಲಿಸಿಕೊಂಡು, ₹20 ಸಾವಿರ ದಂಡ, ಪಾದಚಾರಿ ಮಾರ್ಗದಲ್ಲಿ ವಾಹನ ಚಲಾಯಿಸಿ ನಿಯಮ ಉಲ್ಲಂಘಿಸಿದ್ದ 36 ಮಂದಿಯಿಂದ ₹18 ಸಾವಿರ ದಂಡ ಸಂಗ್ರಹಿಸಿದ್ದಾರೆ.

ಗುರು ರಾಘವೇಂದ್ರ ಬ್ಯಾಂಕ್ ಹಗರಣ; ಸಿ.ಎಂ. ಭೇಟಿಯಾಗಿ ಚರ್ಚೆ

ಎಸ್‌ಐಟಿ ರಚನೆಗೆ ಠೇವಣಿದಾರರ ಮನವಿ

ಪ್ರಜಾವಾಣಿ ವಾರ್ತೆ

ಗುರು ರಾಘವೇಂದ್ರ ಬ್ಯಾಂಕಿನ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಜತೆಗೆ ಸೌಮ್ಯಾ ರೆಡ್ಡಿ, ಶಂಕರ್ ಗುಹಾ ದ್ವಾರಕನಾಥ್ ಹಾಗೂ ಠೇವಣಿದಾರರು ಚರ್ಚಿಸಿದರು

ಬೆಂಗಳೂರು: ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಎಂದು ಬ್ಯಾಂಕಿನ ಠೇವಣಿದಾರರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷೆ ಸೌಮ್ಯಾ ರೆಡ್ಡಿ ಹಾಗೂ ಕೆಪಿಸಿಸಿ ವಕ್ತಾರ ಶಂಕರ್ ಗುಹಾ ದ್ವಾರಕನಾಥ್ ಅವರ ನೇತೃತ್ವದಲ್ಲಿ ಠೇವಣಿದಾರರು ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿ, ಚರ್ಚಿಸಿದರು.

'ಬ್ಯಾಂಕಿನಲ್ಲಿ ಹಗರಣ ನಡೆದು ಐದು ವರ್ಷಗಳಾದರೂ ಠೇವಣಿದಾರರ ಪೂರ್ಣ ಪ್ರಮಾಣದ ಹಣ ಬಂದಿಲ್ಲ. ಅದಕ್ಕಿಂತ ಮುಖ್ಯವಾಗಿ ತನಿಖೆಯು ಸರಿಯಾಗಿ ನಡೆಯುತ್ತಿಲ್ಲ. ಈವರೆಗೂ ಆರೋಪಪಟ್ಟಿ ಸಲ್ಲಿಸಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದ ನಂತರ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು. ಆದರೆ, ಸಿಬಿಐನವರು ಈ ಪ್ರಕರಣದ ತನಿಖೆ ಆರಂಭಿಸದೇ ವಿಳಂಬ ಮಾಡುತ್ತಿದ್ದಾರೆ. ತಪ್ಪು ಮಾಡಿದವರಿಗೆ ಶಿಕ್ಷೆಯೂ ಆಗುತ್ತಿಲ್ಲ. ಠೇವಣಿದಾರರ ದುಡ್ಡು ಎಲ್ಲಿ ಹೋಗಿದೆ ಎಂಬುದು ಯಾರಿಗೂ ಅರಿವಾಗುತ್ತಿಲ್ಲ. ಇದರಿಂದಾಗಿ ಠೇವಣಿದಾರರಿಗೆ ಪೂರ್ಣ ಪ್ರಮಾಣದ ಹಣ ಸಿಗುತ್ತಿಲ್ಲ' ಎಂದು ಮುಖ್ಯಮಂತ್ರಿ ಅವರ ಮುಂದೆ ಅಳಲು ತೋಡಿಕೊಂಡರು.

'ಈ ಪ್ರಕರಣವನ್ನು ಗಣನೆಗೆ ತೆಗೆದುಕೊಳ್ಳುವುದಾಗಿ' ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ನಿಯೋಗದಲ್ಲಿದ್ದ ಮುಖಂಡರು ತಿಳಿಸಿದ್ದಾರೆ.

'ಸಂಸದ ತೇಜಸ್ವಿ ಸೂರ್ಯ ಹಾಗೂ ಶಾಸಕ ರವಿ ಸುಬ್ರಮಣ್ಯ ಅವರು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಮೊದಲಿನಿಂದಲೂ ಒಪ್ಪಿಗೆ ನೀಡಿರಲಿಲ್ಲ. ಕೇಂದ್ರ ಸರ್ಕಾರದಿಂದ ಸಿಬಿಐ ಮೇಲೆ ಒತ್ತಡ ಹೇರಿ, ಈ ಪ್ರಕರಣದ ತನಿಖೆ ಮಾಡದಂತೆ ನೋಡಿಕೊಂಡಿದ್ದಾರೆ' ಎಂದು ಶಂಕರ್ ಗುಹಾ ದ್ವಾರಕನಾಥ್ ದೂರಿದರು.

ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ

ಹಾವನೂರು ಬಡಾವಣೆಯ ಭೂಮಿಕ ಸೇವಾ ಫೌಂಡೇಶನ್‌ನಲ್ಲಿ ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನ ಆಚರಿಸಲಾಯಿತು

ಪೀಣ್ಯ ದಾಸರಹಳ್ಳಿ: ಹಾವನೂರು ಬಡಾವಣೆಯ ಭೂಮಿಕ ಸೇವಾ ಫೌಂಡೇಶನ್‌ನಲ್ಲಿ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನ ಆಚರಿಸಲಾಯಿತು.

ಗೋವಾದ ಪಣಜಿ ಕ್ಯಾಂಪಲ್ ಸ್ಟೇಡಿಯಂನಲ್ಲಿ ನಡೆದಿದ್ದ 39ನೇ ಟೇಕ್ವಾಂಡೋ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ಬ್ಲಾಕ್‌ಬೆಲ್ಟ್ ವಿಭಾಗದಲ್ಲಿ ಇಂಡ್ಯುವಿಜುವಲ್ ಸ್ಪಾರಿಂಗ್‌ನಲ್ಲಿ (ಫೈಟಿಂಗ್) ಚಿನ್ನದ ಪದಕ ಮತ್ತು ಗುಂಪು ಪ್ಯಾಟರ್ನ್‌ನಲ್ಲಿ ಚಿನ್ನದ ಪದಕ ಹಾಗೂ ಗುಂಪು ಸ್ಪಾರಿಂಗ್‌ನಲ್ಲಿ ಕಂಚಿನ ಪದಕ ಪಡೆದಿದ್ದ ಚಿಕ್ಕಬಾಣಾವರದ ಪೂಜಾಶ್ರೀ ಚಿಕ್ಕಣ್ಣ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ದಾಸರಹಳ್ಳಿ ಕ್ಷೇತ್ರ ಘಟಕ ಕನ್ನಡ ಜಾನಪದ ಪರಿಷತ್ತು ಅಧ್ಯಕ್ಷ ವೈ.ಬಿ. ಎಚ್. ಜಯದೇವ್, ಕನ್ನಡಸೇನೆ ರಾಜ್ಯ ಖಜಾಂಚಿ ರಾಜೇಂದ್ರ ಕಣ್ಣೂರ, ಮಾನವ ಹಕ್ಕುಗಳ ರಕ್ಷಣಾ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಸದಸ್ಯ ಮಹಮ್ಮದ್ ಸಲೀಂ ಅಹಮ್ಮದ್, ಫೌಂಡೇಶನ್ ಸಂಸ್ಥಾಪಕಿ ಲತಾ ಕುಂದರಗಿ, ಗೌರವಾಧ್ಯಕ್ಷ ಗುರುನಾಥ್, ಕಾದಂಬರಿಗಾರ್ತಿ ಮಮತಾ ವಾರನಹಳ್ಳಿ, ವೀರಶೈವ ಮುಖಂಡ ಎಂ.ಎಚ್. ಪಾಟೀಲ್, ಗಾಯಕ ಕೃಷ್ಣಮೂರ್ತಿ ಭಾಗವಹಿಸಿದ್ದರು.

BANGALORE VIHAR KENDRA
No-8, 9th main, Banashankari 2nd Stage, Bangalore-560070

SUB: PRESS NOTIFICATION.

We are a Prestigious Social club invites TENDERS for the following works at the Kendra's premises. The applicants should be have enough experience in Interiors/ Fabrications/ Civil/Electrical works.

Name of the work and brief details.

Up gradation/Alteration in the 2nd Floor such as Installing New puf sheets, Painting of MS sheets, False ceiling work, Electrical wiring (200 points), Fixing VETRIFIED TILES, Painting of walls, Repairs of windows and other civil work.

ESTIMATED TENDER AMOUNT 65 Lacs

Interested applicants are requested to Collect Details Tender Documents & Drawings along with Terms & conditions at Kendra's office on any day (between 12 noon to 4:30 PM) by paying an amount of Rs1000/-.(Contact Person- Balappa Mob- 9880079882)

Please Note – TENDER will be opened on 17-01-2025 at 6-30 PM in Kendra's Premises in presence of Kendra's **Managing Committee.** The Tenderers /their representatives are requested to be present if desired.
completion within 60 days from date of work order.
Accepting/Rejecting all or any tenders solely rests with the Kendra's Managing Committee.

SEALED TENDERS should be submitted to the Kendra's office up to **5pm on or before 15-01-2025.**

Sd/- **SREENIVASAN H K**
Hon. Secretary, Bangalore Vihara Kendra

ಪರಿವರ್ತನೆಯೊಂದಿಗೆ ಬದುಕನ್ನು ಪುಷ್ಟೀಕರಿಸುವುದು!
ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್
ಈಗ ಆಗಿದೆ ನಿಮ್ಮ ವಿಶ್ವಾಸಾರ್ಹ
'ಕಾಸ್ಮೋಸ್ ಕೋ-ಆಪರೇಟಿವ್ ಬ್ಯಾಂಕ್'!

119 ವರ್ಷಗಳ ಪರಂಪರೆ (ಹಳೆಯ ಸಹಕಾರಿ ಬ್ಯಾಂಕ್)

ರೂ.35000 ಕೋಟಿಗೂ ಅಧಿಕ ಬ್ಯುಸಿನೆಸ್ ಸೆಟಪ್

7 ರಾಜ್ಯಗಳಲ್ಲಿ ಕಾರ್ಯನಿರ್ವಹಣೆ

ಕಾರ್ಪೊರೇಟ್ ಕಚೇರಿ, ಪುಣೆ (ಮಹಾರಾಷ್ಟ್ರ)

ಕಾಸ್ಮೋಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.
(ಮಲ್ಟಿಸ್ಟೇಟ್ ಷೆಡ್ಯೂಲ್ಡ್ ಬ್ಯಾಂಕ್)
ಬದುಕನ್ನು ಸಮೃದ್ಧಗೊಳಿಸುವುದು!

ನೋಂದಾಯಿತ ಕಚೇರಿ: ಕಾಸ್ಮೋಸ್ ಟವರ್, ಪ್ಲಾಟ್ ನಂ.6, ಐಸಿಎಸ್ ಕಾಲೋನಿ, ಯೂನಿವರ್ಸಿಟಿ ರಸ್ತೆ, ಗಣೇಶ್ಖಿಂಡ್, ಪುಣೆ-411 007.
ಟೋಲ್ ಫ್ರೀ ನಂ.: 1800 233 0234

ಬೆಂಗಳೂರು ಶಾಖೆಗಳು

ಗಾಂಧಿ ಬಜಾರ್ ಶಾಖೆ : 22421998, 26607778 | ಜಯನಗರ ಶಾಖೆ : 26650020, 26650030, 26650040 | ಬನಶಂಕರಿ ಶಾಖೆ : 26716612, 26713062 | ಕೋರಮಂಗಲ ಶಾಖೆ : 25525279 | ಸದಾಶಿವನಗರ ಶಾಖೆ : 23611508, 23611808 | ಎ.ಡಿ. ಹಳ್ಳಿ ಶಾಖೆ : 23307594, 23357594 | ಬನಶಂಕರಿ 3ನೇ ಹಂತದ ಶಾಖೆ : 26727196, 26729485| ಎಲೆಕ್ಟ್ರಾನಿಕ್ ಸಿಟಿ ಶಾಖೆ : 25734477 | ಇಂದಿರಾನಗರ ಶಾಖೆ : 25214434 | ಯಶವಂತಪುರ ಶಾಖೆ : 23470429 | ರಾಜರಾಜೇಶ್ವರಿ ನಗರ ಶಾಖೆ : 28604311 | ಬಾಣಸವಾಡಿ ಶಾಖೆ : 25452772
ಮೈಸೂರು ಶಾಖೆ : 0821-2565666

https://www.cosmosbank.com | E-mail : customercare@cosmosbank.in | Follow Us On :

ಬೆಂಗಳೂರಿನಲ್ಲಿ ಭಾನುವಾರ ನಡೆದ ‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ’ ಸಮಾರೋಪದಲ್ಲಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಅವರನ್ನು ಗೌರವಿಸಲಾಯಿತು (ಎಡಚಿತ್ರ) ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು – ಪ್ರಜಾವಾಣಿ ಚಿತ್ರಗಳು

ಉದ್ಯಮಶೀಲತೆಗೆ ಉತ್ತೇಜನ • ಫಸ್ಟ್ ಸರ್ಕಲ್ ಏರ್ಪಡಿಸಿದ್ದ 3 ದಿನದ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಭಾಗಿ

ಒಕ್ಕಲಿಗರಿಗೆ ಸ್ಫೂರ್ತಿ ತುಂಬಿದ ‘ಎಕ್ಸ್‌ಪೊ’ಗೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗ ಯುವ ಸಮುದಾಯವನ್ನು ಉದ್ಯಮಿಗಳನ್ನಾಗಿ ಮಾಡಲು ಸ್ಫೂರ್ತಿ ತುಂಬಿದ ‘ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ’ ಕಾರ್ಯಕ್ರಮ ಭಾನುವಾರ ಸಂಭ್ರಮದ ತೆರೆ ಕಂಡಿತು.

ಸಮಾರೋಪದಲ್ಲಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಮಾತನಾಡಿ, ‘ಒಬ್ಬ ಅಧಿಕಾರಿಯನ್ನು ನಾವು ತಯಾರು ಮಾಡಿದರೆ ಅವರು ಒಂದು ಸಂಸ್ಥೆಯಂತೆ ದುಡಿಯುವುದನ್ನು ಕಂಡಿದ್ದೇವೆ. ಅದೇ ರೀತಿ ‘ಉದ್ಯಮಿ ಒಕ್ಕಲಿಗ ಎಕ್ಸ್‌ಪೊ’ ಮೂಲಕ ಉದ್ಯಮಿಗಳು ಪರಸ್ಪರ ಸಹಕರಿಸುವಂತೆ, ಹೊಸ ಉದ್ಯಮಿಗಳನ್ನು ಬೆಳೆಸುವಂತೆ ಮಾಡಿದೆ’ ಎಂದು ಶ್ಲಾಘಿಸಿದರು.

ಪಿನ್‌ನಿಂದ ಹಿಡಿದು ಯಂತ್ರಗಳ ವರೆಗೆ, ಕೋಲ್ಡ್ ಪ್ರೆಸ್ಡ್ ಆಯಿಲ್‌ನಿಂದ ಡೇರಿ ತಂತ್ರಜ್ಞಾನದವರೆಗೆ, ಸಲಹೆಯಿಂದ ಹಿಡಿದು ನಿರ್ಮಾಣದವರೆಗೆ ಎಲ್ಲವನ್ನೂ ಒದಗಿಸುವ ಮಳಿಗೆಗಳಿಗೆ ಫಸ್ಟ್ ಸರ್ಕಲ್ ವೇದಿಕೆ ಒದಗಿಸಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ‘ಕೃಷಿಯು ಪ್ರಸ್ತುತ ಆರ್ಥಿಕವಾಗಿ ಸವಾಲಿನ ಪರಿಸ್ಥಿತಿಯಲ್ಲಿದೆ. ಕೃಷಿ ಉಳಿಸಿಕೊಂಡು ಉದ್ಯಮ ಮಾಡುವ ದಿನಗಳು ನಮ್ಮ ಮುಂದಿವೆ. ನಮ್ಮ ಕೃಷಿಕರು ಮತ್ತು ಉದ್ಯಮಿಗಳು ಕೇವಲ ಉದ್ಯೋಗ ಸೃಷ್ಟಿಕರ್ತರಾಗಿ ಉಳಿಯದೇ ಅಸಂಖ್ಯಾತ ಕುಟುಂಬಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಬೆಂಬಲವಾಗಿದ್ದಾರೆ’ ಎಂದು ಶ್ಲಾಘಿಸಿದರು.

ಫಸ್ಟ್ ಸರ್ಕಲ್ ಮುಖ್ಯ ಮಾರ್ಗದರ್ಶಕ ಜಯರಾಂ ರಾಯಪುರ ಮಾತನಾಡಿ, ‘ಮೂರು ದಿನಗಳ ಉದ್ಯಮಿ ಒಕ್ಕಲಿಗ ಎಕ್ಸ್‌ಪೊದಲ್ಲಿ ರಾಜ್ಯದ ವಿವಿಧ ಭಾಗಗಳಿಂದ 35,000ಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆ. ಮೊದಲ ಎಕ್ಸ್‌ಪೊದಲ್ಲಿ 50 ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದ್ದರು. ಎರಡನೇ ಆವೃತ್ತಿಯಲ್ಲಿ ಸಂಖ್ಯೆ 90ಕ್ಕೆ ಏರಿತು. ಇದೀಗ 3ನೇ ಆವೃತ್ತಿಯಲ್ಲಿ 120ಕ್ಕೂ ಅಧಿಕ ಉದ್ಯಮಿಗಳು ಅವಕಾಶ ಪಡೆದಿದ್ದಾರೆ. ಮುಂದಿನ ವರ್ಷ ಅಗ್ರಿಗೇಟರ್ ವ್ಯವಹಾರಗಳನ್ನು ಮುಂದಿನ ಹಂತಕ್ಕೆ ಏರಿಸುವ ಗುರಿಯನ್ನು ನಾವು ಹೊಂದಿದ್ದೇವೆ’ ಎಂದು ಮಾಹಿತಿ ನೀಡಿದರು.

ಎಫ್‌ಸಿ ಏಂಜಲ್ಸ್ ಲೋಗೊ ಅನಾವರಣಗೊಳಿಸಲಾಯಿತು. ‘ಅಸೆಲ್ ಪಾರ್ಟ್ನರ್ಸ್’ನ ಪ್ರಶಾಂತ್ ಪ್ರಕಾಶ್ ಅವರು ಸ್ಥಳದಲ್ಲಿಯೇ ಎಫ್‌ಸಿ ಏಂಜಲ್ಸ್‌ಗೆ ₹ 1 ಕೋಟಿ ಘೋಷಣೆ ಮಾಡಿದರು.

ಫಸ್ಟ್ ಸರ್ಕಲ್ ಅಧ್ಯಕ್ಷ ನಂದೀಶ್ ರಾಜೇಗೌಡ ಮಾತನಾಡಿ, ‘ಹಳೆ ಮೈಸೂರು ಪ್ರಾಂತ್ಯದ 124 ತಾಲ್ಲೂಕುಗಳ ಪೈಕಿ 62 ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಎಫ್‌ಸಿ ಕಾರ್ಯನಿರ್ವಹಿಸುತ್ತಿದೆ. ಅದಕ್ಕೆ ಸಂಬಂಧಿತ ಎಲ್ಲ ವಿವರಗಳನ್ನು ಪುಸ್ತಕದಲ್ಲಿ ಸಂಗ್ರಹಿಸಿ ಬಿಡುಗಡೆ ಮಾಡಲಾಗಿದೆ’ ಎಂದು ತಿಳಿಸಿದರು.

ಶಾಸಕ ಶರತ್ ಬಚ್ಚೇಗೌಡ, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ರಮೇಶ್ ಗೌಡ ಭಾಗವಹಿಸಿದ್ದರು.

‘ಆಧುನಿಕ ತಂತ್ರಜ್ಞಾನ ಅಳವಡಿಕೆಯಿಂದ ಯಶಸ್ಸು’

ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಎದುರಿಸಲು ತಾಂತ್ರಿಕ ಮತ್ತು ವೈಜ್ಞಾನಿಕ ವಿಧಾನ ಅಳವಡಿಸಿಕೊಂಡು ಯಶಸ್ಸು ಸಾಧಿಸಬೇಕು ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ಉದ್ಯಮಿ ಒಕ್ಕಲಿಗ ಮೂರನೇ ದಿನದ ಕಾರ್ಯಕ್ರಮವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಂತರದಲ್ಲಿ ಆರೋಗ್ಯ ವಲಯಕ್ಕೆ ಸಂಬಂಧಿಸಿ ಸಂಸದ ಡಾ. ಸಿ.ಎನ್. ಮಂಜುನಾಥ ಮಾತನಾಡಿ, ‘ಸಮಾಜದ ಆರೋಗ್ಯ ಕಾಪಾಡುವ ವೈದ್ಯರು ತಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಿ ನಿಯಮಿತ ತಪಾಸಣೆಗೆ ಒಳಗಾಗಬೇಕು’ ಎಂದು ಸಲಹೆ ನೀಡಿದರು.

ಶಾಸಕ ಶರತ್ ಬಚ್ಚೇಗೌಡ ಮಾತನಾಡಿ, ‘ನಾಡಪ್ರಭು ಕೆಂಪೇಗೌಡರು ಕೇವಲ ಕೋಟೆಗಳನ್ನು ಕಟ್ಟಿದ್ದಲ್ಲ, ಅವುಗಳ ಜೊತೆಗೆ ಪೇಟೆಗಳನ್ನು ನಿರ್ಮಿಸಿದ್ದರು. ಕೌಶಲ, ಕಸುಬುಗಳಿಗೆ ಅವಕಾಶ ಮಾಡಿಕೊಟ್ಟಿದ್ದರು. ಅವರೇ ಮೊದಲ ಒಕ್ಕಲಿಗ ಉದ್ಯಮಿ. ನಾವೆಲ್ಲ ಅವರ ವಂಶಸ್ಥರು’ ಎಂದು ಹೇಳಿದರು.

ಕಲಬುರಗಿಯಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿಯ ಕೈಯಲ್ಲಿದ್ದ ಖಡ್ಗ ವಿರೂಪಗೊಳಿಸಲಾಗಿದೆ

ಖಡ್ಗ ವಿರೂಪ ಮಾನಸಿಕ ಅಸ್ವಸ್ಥ ವಶಕ್ಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಸಿಟಿ ಬಸ್ ನಿಲ್ದಾಣ ಮುಂಭಾಗದಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಮೂರ್ತಿಯ ಕೈಯಲ್ಲಿದ್ದ ಖಡ್ಗವನ್ನು ಕಿಡಿಗೇಡಿಗಳು ಭಾನುವಾರ ವಿರೂಪಗೊಳಿಸಿದ್ದು, ಈ ಸಂಬಂಧ ಮಾನಸಿಕ ಅಸ್ವಸ್ಥನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಾಲ್ಕು ವರ್ಷಗಳ ಹಿಂದೆಯೇ ರಾಯಣ್ಣನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು. ಮೂರ್ತಿಯ ಖಡ್ಗವನ್ನು ಮಾನಸಿಕ ಅಸ್ವಸ್ಥ ವಿರೂಪಗೊಳಿಸಿ ಹಾನಿ ಮಾಡಿದ್ದ. ಇದರಿಂದ ಸ್ಥಳದಲ್ಲಿ ನೂರಾರು ಜನರು ಜಮಾಯಿಸಿದ್ದು, ಬಿಗುವಿನ ವಾತಾವರಣ ಉಂಟಾಯಿತು.

ಮೂರ್ತಿ ಪಕ್ಕದ ಅಪ್ಪನ ಕೆರೆಯ ಬದಿಯಲ್ಲಿ ಅರೆ ಬೆತ್ತಲೆಯಾಗಿ ಓಡಾಡುತ್ತಿದ್ದ 25ರ ಆಸುಪಾಸಿನ ಮಾನಸಿಕ ಅಸ್ವಸ್ಥನನ್ನು ಬ್ರಹ್ಮಪುರ ಠಾಣೆಯ ಪೊಲೀಸರು ವಶಕ್ಕೆ ಪಡೆದರು. ಮೂರ್ತಿಯನ್ನು ಬಟ್ಟೆಯಿಂದ ಮುಚ್ಚಲಾಗಿದ್ದು, ಸ್ಥಳದಲ್ಲಿ ಪೊಲೀಸರನ್ನು ನಿಯೋಜನೆ ಮಾಡಲಾಗಿದೆ.

ಟೈರ್‌ಗೆ ಬೆಂಕಿ ಹಚ್ಚಿ ಕುರುಬ ಸಮುದಾಯದ ಮುಖಂಡರು, ರಾಯಣ್ಣನ ಅಭಿಮಾನಿಗಳು ಪ್ರತಿಭಟನೆ ನಡೆಸಿದರು. ಮೂರ್ತಿಯ ಸುತ್ತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಭದ್ರತೆ ಒದಗಿಸಬೇಕು. ವಿರೂಪ ತಡೆಯುವಲ್ಲಿ ವಿಫಲವಾದ ಬೀಟ್‌ನಲ್ಲಿದ್ದ ಪೊಲೀಸರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಎಸ್‌.ಟಿಗೆ ‘ಮೊಗವೀರ’ರ ಸೇರಿಸಲು ಶಿಫಾರಸು

ಬೆಂಗಳೂರಿನಲ್ಲಿ ನಡೆದ ‘ಬೃಹತ್ ಮೊಗವೀರ ಸಮಾವೇಶ’ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ್ಗ–1ರಲ್ಲಿರುವ ಮೊಗವೀರ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಇಲ್ಲಿನ ಅರಮನೆ ಮೈದಾನದಲ್ಲಿ ಭಾನುವಾರ ಬೆಂಗಳೂರಿನ ಮೊಗವೀರ ಸಂಘ ಆಯೋಜಿಸಿದ್ದ ‘ಬೃಹತ್ ಮೊಗವೀರ ಸಮಾವೇಶ– ಸುವರ್ಣ ಪಥ’ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಮೊಗವೀರ ಅಥವಾ ಕೋಲಿ ಸಮಾಜ, ಗೊಲ್ಲರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು ಎಂದು ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿದ್ದೆ. ಕೇಂದ್ರಕ್ಕೆ ಶಿಫಾರಸು ಮಾಡಿದ್ದೆ. ಆದರೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಲಿಲ್ಲ. ನೀವ್ಯಾರೂ ಅದನ್ನು ಪ್ರಶ್ನೆ ಮಾಡಲೇ ಇಲ್ಲ’ ಎಂದು ಹೇಳಿದರು.

‘ನೀವೆಲ್ಲ ಸೇರಿ ಮೊಗವೀರ ಸಮುದಾಯವನ್ನು ಎಸ್‌ಟಿಗೆ ಸೇರಿಸಬೇಕೆಂದು ಈ ಸಮಾವೇಶದಲ್ಲಿ ನಿರ್ಣಯ ತೆಗೆದುಕೊಂಡು, ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ. ನಾನು ಕೇಂದ್ರಕ್ಕೆ ಶಿಫಾರಸು ಮಾಡುತ್ತೇನೆ. ನೀವು ಕೇಂದ್ರದ ಮೇಲೆ ಒತ್ತಡ ತನ್ನಿ’ ಎಂದು ಸಲಹೆ ನೀಡಿದರು.

‘ಮೊಗವೀರರು ಹಿಂದುಳಿದ ಜನಾಂಗಕ್ಕೆ ಸೇರಿದ್ದೀರಿ. ಆದರೂ ಸ್ವಾಭಿಮಾನದಿಂದ ಜೀವನ ನಡೆಸುತ್ತಿದ್ದೀರಿ. ನಮ್ಮ ಸರ್ಕಾರ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಸೇರಿ ಎಲ್ಲ ಜಾತಿ, ಧರ್ಮದ ಬಡವರೊಂದಿಗಿದೆ. ನಿಮ್ಮ ಸಮುದಾಯದ ಬೇಡಿಕೆಗಳು ಏನಿವೆ ಎಂದು ಮುಂಚಿತವಾಗಿ ತಿಳಿಸಿ. ಬಜೆಟ್‌ನಲ್ಲಿ ಆದ್ಯತೆ ಮೇಲೆ ಈಡೇರಿಸಲು ಪ್ರಯತ್ನಿಸುತ್ತೇನೆ’ ಎಂದೂ ಆಶ್ವಾಸನೆ ನೀಡಿದರು.

ಸಮುದಾಯದ ಮುಖಂಡ ಜೆ.ಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿ, ‘ಮಂಗಳೂರು, ಮಲ್ಪೆ, ಗಂಗೊಳ್ಳಿ, ದಕ್ಷಿಣ ಕನ್ನಡದ ಬಂದರುಗಳನ್ನು ದುರಸ್ತಿಗೊಳಿಸಿ. ಮೀನುಗಾರ ಸಮುದಾಯಕ್ಕೊಂದು ಏರ್ ಆಂಬ್ಯುಲೆನ್ಸ್ ವ್ಯವಸ್ಥೆಯಾಗಬೇಕು. ಮೀನುಗಾರರಿಗೆ ಸಂಬಂಧಿಸಿ ಸಮಗ್ರ ನೀತಿಯೊಂದನ್ನು ಜಾರಿಗೊಳಿಸುವಂತೆ’ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು.

ಉಡುಪಿ ಶಾಸಕ ಯಶಪಾಲ್ ಸುವರ್ಣ, ‘ರೈತರು ಕೃಷಿ ಮಾಡುವಂತೆ, ಮೊಗವೀರರು ಮೀನು ಹಿಡಿಯುವ ಕಾಯಕ ಮಾಡುತ್ತಾರೆ. ರೈತರಿಗೆ ಸಿಗುವ ಸಾಲ ಮನ್ನಾ, ಬಡ್ಡಿ ಮನ್ನಾ ರೀತಿಯ ಅನುಕೂಲ, ಸೌಲಭ್ಯಗಳನ್ನು ಮೀನುಗಾರರಿಗೂ ಕಲ್ಪಿಸಬೇಕು’ ಎಂದು ಮನವಿ ಮಾಡಿದರು.

‘ಕೇಂದ್ರ, ರಾಜ್ಯ ಸರ್ಕಾರ ಮೀನುಗಾರ ಸಮುದಾಯಕ್ಕೆ ಅನುದಾನ ನೀಡಬೇಕು. ಸದ್ಯವೇ ಮಂಡಿಸುವ ಬಜೆಟ್‌ನಲ್ಲಿ ಮೀನುಗಾರಿಕೆಗೆ ಹೆಚ್ಚು ಅನುದಾನ ನೀಡಬೇಕು’ ಎಂದು ಸಿ.ಎಂ ಅವರಲ್ಲಿ ಕೋರಿದರು.

‘ಸುವರ್ಣ ಪಥ’ ಕಾರ್ಯಕ್ರಮದ ನೆನಪಿಗಾಗಿ ಹೊರ ತಂದಿರುವ ‘ಕಡಲೊಳಗಿನ ಪುಟಗಳು’– ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಗ್ಯಾರಂಟಿಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ.ರೇವಣ್ಣ ಮಾತನಾಡಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಬೆಂಗಳೂರು ಮೊಗವೀರ ಸಂಘದ ಅಧ್ಯಕ್ಷ ಕೆ.ಗುಣಕರ್, ಸಮುದಾಯದ ಮುಖಂಡರಾದ ಜಯ ಸಿ. ಕೋಟ್ಯಾನ್, ರಾಜು ಮೆಂಡನ್, ಉದಯ್ ಕುಮಾರ್ ಹಟ್ಟಿಯಂಗಡಿ, ಸತೀಶ್ ಎಸ್. ಅಮೀನ್ ಮತ್ತಿತರರು ಉಪಸ್ಥಿತರಿದ್ದರು.

ಬೃಹತ್ ಮೊಗವೀರ ಸಮಾವೇಶದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಖಾಲಿ ದೋಣಿಯಲ್ಲಿದ್ದ ಅಂಜಲ್ ಮೀನನ್ನು ಹಿಡಿದು ಸಭಿಕರತ್ತ ಪ್ರದರ್ಶಿಸಿದರು. ಸಚಿವ ಬೈರತಿ ಸುರೇಶ್, ಜಾದೂಗಾರ ಪ್ರಕಾಶ್ ಹೆಮ್ಮಾಡಿ, ಜೆ. ಶಂಕರ್, ಎಚ್‌.ಎಂ. ರೇವಣ್ಣ ಹಾಜರಿದ್ದರು ಪ್ರಜಾವಾಣಿ ಚಿತ್ರ

ಉದ್ಘಾಟನೆಯಲ್ಲಿ ‘ಅಂಜಲ್ ಮೀನು’

ವೇದಿಕೆ ಮೇಲೆ ಮೊಗವೀರ ದೋಣಿಯ ಪ್ರತಿಕೃತಿ ಇಟ್ಟಿದ್ದರು. ಸಭಿಕರಿಗೆ ಖಾಲಿ ದೋಣಿ ಪ್ರದರ್ಶಿಸಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೋಣಿಗೆ ಪುಷ್ಪಾರ್ಚನೆ ಮಾಡಿದರು. ನಂತರ ಮಂತ್ರದಂಡದಿಂದ ದೋಣಿಯನ್ನು ಸ್ಪರ್ಶಿಸಿದರು. ಖಾಲಿಯಿದ್ದ ದೋಣಿಯಲ್ಲಿ ‘ಅಂಜಲ್ ಮೀನು’ ಪ್ರತ್ಯಕ್ಷ, ಮುಖ್ಯಮಂತ್ರಿ ಅಚ್ಚರಿಗೊಂಡರು. ಮೀನು ಹಿಡಿದು ಸಭಿಕರತ್ತ ಪ್ರದರ್ಶಿಸಿದರು. ಸಭೆಯಲ್ಲಿ ಹರ್ಷೋದ್ಗಾರದ ಹೊನಲು. ‘ಸಮುದಾಯ ಸಂಪದ್ಭರಿತವಾಗಲಿ’ ಎಂಬುದು ಈ ಉದ್ಘಾಟನೆಯ ಕಾರ್ಯಕ್ರಮದ ನಿರೂಪಕರು ವಿವರಿಸಿದರು.

‘ಯತ್ನಾಳ ಬಣ ಎಂಬುದೇ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲಿ ಯತ್ನಾಳ ಬಣ ಎಂಬುದೇ ಇಲ್ಲ. ನಾಲ್ಕೈದು ಜನ ಸೇರಿಕೊಂಡು ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರನ್ನು ಬಯ್ಯುವುದೇ ಅವರ ಕೆಲಸವಾಗಿದೆ. ಅದನ್ನು ಬಣ ಎನ್ನಲಾಗದು’ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಯಡಿಯೂರಪ್ಪ ಅವರು ಕೆಲಸ ಮಾಡಿದ್ದಾರೆ. ಈಗ ವಿಜಯೇಂದ್ರ ಮಾಡುತ್ತಿದ್ದಾರೆ. ಆದರೆ ಬಸನಗೌಡ ಪಾಟೀಲ ಯತ್ನಾಳ ಅವರು ತಾವಷ್ಟೇ ಪಕ್ಷಕ್ಕಾಗಿ ದುಡಿದಿದ್ದೇವೆ ಎಂಬಂತೆ ಹೇಳುತ್ತಿದ್ದಾರೆ’ ಎಂದರು.

‘ಯತ್ನಾಳಗೆ ಪಕ್ಷದ ಹಿತಾಸಕ್ತಿ ಬೇಕಾಗಿಲ್ಲ, ಪಕ್ಷಕ್ಕೆ ಅವರು ಬದ್ಧರಾಗಿಯೂ ಇಲ್ಲ. ಪಕ್ಷ ವಿರೋಧಿ ಚಟುವಟಿಕೆಗಳನ್ನು ಅವರು ನಿಲ್ಲಿಸಬೇಕು’ ಎಂದರು.

ವಿವಾದದ ನಡುವೆ ಸಂಭಾಜಿ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಾಕಷ್ಟು ವಿವಾದ ಮತ್ತು ಗೊಂದಲದ ಮಧ್ಯೆಯೂ ಇಲ್ಲಿನ ಅನಗೋಳದ ಧರ್ಮವೀರ ಸಂಭಾಜಿ ವೃತ್ತದಲ್ಲಿ ಭಾನುವಾರ ರಾತ್ರಿ 21 ಅಡಿ ಎತ್ತರದ ಛತ್ರಪತಿ ಸಂಭಾಜಿ ಮಹಾರಾಜರ ಪ್ರತಿಮೆ ಅನಾವರಣ ಮಾಡಲಾಯಿತು.

ಮಹಾನಗರ ಪಾಲಿಕೆ ಅನುದಾನದಲ್ಲಿ ಈ ವೃತ್ತದಲ್ಲಿ ಸಮುದಾಯ ಭವನ ನಿರ್ಮಿಸಿ ಅದರ ಮೇಲೆ ಪ್ರತಿಮೆ ಪ್ರತಿಷ್ಠಾಪಿಸಲಾಗಿದೆ. ಅದನ್ನು ಅನಾವರಣಗೊಳಿಸುವುದು ಸ್ಥಳೀಯ ಶಾಸಕ ಅಭಯ ಪಾಟೀಲ ಹಾಗೂ ಶ್ರೀರಾಮ ಸೇನೆ ಹಿಂದೂಸ್ತಾನ್ ಸಂಘಟನೆ ಅಧ್ಯಕ್ಷ ರಮಾಕಾಂತ ಕೊಂಡೂಸ್ಕರ್ ಬೆಂಬಲಿಗರಿಗೆ ಪ್ರತಿಷ್ಠೆ ಪ್ರಶ್ನೆಯಾಗಿತ್ತು.

ಅಭಯ ಪಾಟೀಲ ಗುಂಪಿನವರು ತ್ವರಿತವಾಗಿ ಅನಾವರಣಕ್ಕೆ ಒತ್ತಾಯಿಸಿದರೆ, ಕೊಂಡೂಸ್ಕರ್ ಗುಂಪಿನವರು ‘ಕಾಮಗಾರಿ ಮುಗಿದ ಬಳಿಕ ಅನಾವರಣ ಮಾಡಬೇಕು’ ಎಂದು ಪಟ್ಟು ಹಿಡಿದಿದ್ದರು. ಹೀಗಾಗಿ ಪರಸ್ಪರರ ಮಧ್ಯೆ ಜಟಾಪಟಿಗೆ ಕಾರಣವಾಗಿತ್ತು. ಜಿಲ್ಲಾಧಿಕಾರಿ ಮಧ್ಯಸ್ಥಿಕೆ ವಹಿಸಿ ಸಭೆ ನಡೆಸಿದ ನಂತರವೂ ಗೊಂದಲ ಮುಂದುವರಿದಿತ್ತು.

ಇದರ ಮಧ್ಯೆಯೂ ಅಭಯ ಪಾಟೀಲ ನೇತೃತ್ವದಲ್ಲಿ ಪ್ರತಿಮೆ ಅನಾವರಣ ಮಾಡಲಾಯಿತು. ಪ್ರತಿಮೆಗೆ ಪೂಜೆ ಸಲ್ಲಿಸಿದರು. ಪ್ರತಿಮೆ ಅನಾವರಣ ಕಾರ್ಯಕ್ರಮ ತಡೆಯುವ ನಿಟ್ಟಿನಲ್ಲಿ ಕೊಂಡೂಸ್ಕರ್ ಬೆಂಬಲಿಗರು ಸ್ಥಳದಲ್ಲೇ ಬೀಡು ಬಿಟ್ಟಿದ್ದರು. ಮಾತಿನ ಚಕಮಕಿಯೂ ನಡೆಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ತೋಂಟದ ಸಿದ್ಧಲಿಂಗ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಎಂ.ಬಿ. ಪಾಟೀಲ ಆರೋಪ

‘ಲಿಂಗಾಯತರ ವಿರುದ್ಧ ಅಪಪ್ರಚಾರಕ್ಕೆ ಖೊಟ್ಟಿ ವಚನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘12ನೇ ಶತಮಾನದಲ್ಲಿ ಆಡು ಭಾಷೆಯಲ್ಲಿ ರಚನೆಯಾದ ವಚನ ಸಾಹಿತ್ಯದಲ್ಲಿ ಖೊಟ್ಟಿ (ನಕಲಿ) ವಚನಗಳು ಸೇರಿಕೊಂಡಿವೆ. ಇವುಗಳನ್ನು ಇಟ್ಟುಕೊಂಡು ಕೆಲವರು ವೀರಶೈವ ಲಿಂಗಾಯತ ಸಮುದಾಯದ ವಿರುದ್ಧ ಅಪಪ್ರಚಾರ ಹಾಗೂ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಭಾನುವಾರ ದೂರಿದರು.

ಸಿದ್ಧಲಿಂಗೇಶ್ವರ ಜಯಂತ್ಯುತ್ಸವ ಸಮಿತಿ ಆಯೋಜಿಸಿದ್ದ ‘ಸಿದ್ಧಲಿಂಗೇಶ್ವರ ಜಯಂತ್ಯುತ್ಸವ’ದಲ್ಲಿ ರಾಮನಗರ ಜಿಲ್ಲೆಯ ಕನಕಪುರದ ದೇಗುಲಮಠದ ಅಧ್ಯಕ್ಷರಾದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಅವರಿಗೆ ‘ತೋಂಟದ ಸಿದ್ಧಲಿಂಗ ಶ್ರೀ’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮೂಲಕ ನೈಜ ವಚನಗಳ ಶೋಧ ಮತ್ತು ವರ್ಗೀಕರಣ ಕಾರ್ಯವನ್ನು ವೀರಣ್ಣ ರಾಜೂರು, ಅಶೋಕ ದೊಮ್ಮಲೂರು ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಇದಕ್ಕಾಗಿ ಫ.ಗು. ಹಳಕಟ್ಟಿ ವಚನ ಸಂಶೋಧನಾ ಕೇಂದ್ರದ ಕಚೇರಿ ಪ್ರಾರಂಭಿಸಲಾಗಿದೆ’ ಎಂದರು.

‘12ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ಶರಣ ಚಳವಳಿ ನಡೆದು ಸಮಾಜದಲ್ಲಿ ಸಮಾನತೆ ನೆಲೆಸಿತ್ತು. ತದನಂತರ 400 ವರ್ಷ ನಮಗೆ ಹಿನ್ನಡೆ ಆಗಿತ್ತು. 16ನೇ ಶತಮಾನದಲ್ಲಿ ಶರಣ ಚಳವಳಿಗೆ ಮರುಹುಟ್ಟು ನೀಡಿದ ಕೀರ್ತಿ ಸಿದ್ಧಲಿಂಗೇಶ್ವರರಿಗೆ ಸಲ್ಲುತ್ತದೆ. ಅವರನ್ನು ಅಭಿನವ ಬಸವಣ್ಣ ಎಂದು ಕರೆದರೂ ತಪ್ಪಾಗಲಾರದು’ ಎಂದು ಹೇಳಿದರು.

ಸಿದ್ಧಲಿಂಗೇಶ್ವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕನಕಪುರದ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಅವರಿಗೆ ‘ತೋಂಟದ ಸಿದ್ಧಲಿಂಗಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಫಾಲನೇತ್ರ, ವಿ. ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಸಚಿವ ಎಂ. ಬಿ. ಪಾಟೀಲ, ತುಮಕೂರು ಸಿದ್ಧಗಂಗಾ ಮಠದ ಶಿವಸಿದ್ಧೇಶ್ವರ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ, ಶಿವರುದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಬೆಟ್ಟದಹಳ್ಳಿ ಮಠದ ಚಂದ್ರಶೇಖರ ಸ್ವಾಮೀಜಿ, ವಿಭೂತಿಪುರ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಬಿ. ಮಲ್ಲಿಕಾರ್ಜುನ್ ಮತ್ತು ಬಿ.ಎಸ್ ಪುಟ್ಟರಾಜು ಉಪಸ್ಥಿತರಿದ್ದರು– ಪ್ರಜಾವಾಣಿ ಚಿತ್ರ

ವೀರಶೈವ ಲಿಂಗಾಯತರಿಗೆ ಉದ್ಯೋಗ, ಶಿಕ್ಷಣ ಕ್ಷೇತ್ರಗಳಲ್ಲಿ ಮೀಸಲಾತಿ ಸೌಲಭ್ಯ ಸಿಗಬೇಕು.ಇದು ನಮ್ಮ ಸಮುದಾಯದ ಎಲ್ಲ ಪಂಗಡದವರಿಗೂ ದೊರೆಯಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂ.ಬಿ. ಪಾಟೀಲ
ಬೃಹತ್ ಕೈಗಾರಿಕಾ ಸಚಿವ

‘ಸಿದ್ಧಲಿಂಗೇಶ್ವರರ ಚರಿತ್ರೆ ಹಾಳು’

‘ಕೆಲ ತಿಂಗಳ ಹಿಂದೆ ಪ್ರಾರಂಭವಾದ ಟಿ.ವಿ ಧಾರಾವಾಹಿಯಲ್ಲಿ ಎಡೆಯೂರು ಸಿದ್ಧಲಿಂಗೇಶ್ವರರ ಕಥೆಯನ್ನು ಮನಸ್ಸಿಗೆ ತೋಚಿದಂತೆ ಹೇಳಲಾಗುತ್ತಿದೆ. ಸಿದ್ಧಲಿಂಗೇಶ್ವರರಿಗೆ ಸಂಬಂಧವಿಲ್ಲದ ವೈದಿಕ ಪ್ರಕ್ರಿಯೆಗಳನ್ನು ಜೋಡಿಸಿ ಪವಾಡ ಇತ್ಯಾದಿ ಸೃಷ್ಟಿಸಿ ಅವರ ಚರಿತ್ರೆ ಹಾಳು ಮಾಡಲಾಗುತ್ತಿದೆ. ಎಲ್ಲ ಸ್ವಾಮೀಜಿಗಳು ಇದನ್ನು ಖಂಡಿಸಬೇಕು’ ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಕರೆ ನೀಡಿದರು.

ಸುದ್ದಿ 2 ನಿಮಿಷ

ಫೆ.4ಕ್ಕೆ ‘ಕ್ರಾಂತಿವೀರ ಬ್ರಿಗೇಡ್’ ಉದ್ಘಾಟನೆ– ಕೆ.ಎಸ್. ಈಶ್ವರಪ್ಪ

ವಿಜಯಪುರ: ‘ಕ್ರಾಂತಿವೀರ ಬ್ರಿಗೇಡ್’ ಉದ್ಘಾಟನಾ ಸಮಾರಂಭ ಫೆಬ್ರುವರಿ 4ರಂದು ಬಸವನ ಬಾಗೇವಾಡಿಯಲ್ಲಿ ನಡೆಯಲಿದೆ ಎಂದು ಬ್ರಿಗೇಡ್ ಸಂಚಾಲಕರಾದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ತಿಳಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಲ್ಹಾಪುರ–ಕನ್ನೇರಿ ಸಿದ್ಧಗಿರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ತಿಂಥಣಿ ಶಾಖಾ ಮಠದ ಸಿದ್ಧರಾಮಾನಂದಪುರಿ ಸ್ವಾಮೀಜಿ ಬ್ರಿಗೇಡ್ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ತಿಳಿಸಿದರು.

‘1008 ಸಾಧು, ಸಂತರ ಪಾದಪೂಜೆ, 1008 ಸುಮಂಗಲಿಯರಿಂದ ಪೂರ್ಣಕುಂಭ ಸ್ವಾಗತದೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ. ಒಂದು ಲಕ್ಷಕ್ಕೂ ಅಧಿಕ ಜನರು ಪಾಲ್ಗೊಳ್ಳಲಿದ್ದಾರೆ’ ಎಂದರು.

ಬ್ರಿಗೇಡ್ ಉದ್ದೇಶ: ‘ರಾಜ್ಯದಲ್ಲಿ ಹಿಂದುಳಿದ, ದಲಿತ ಸಮುದಾಯಗಳಿಗೆ ಸೇರಿದ ಸಾವಿರಾರು ಸಣ್ಣಪುಟ್ಟ ಮಠ, ಮಾನ್ಯಗಳಿದ್ದು, ಧರ್ಮದ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಆದರೆ, ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅವುಗಳ ಅಭಿವೃದ್ಧಿಗೆ ಆದ್ಯತೆ ನೀಡುವುದು ಬ್ರಿಗೇಡ್‌ನ ಮೊದಲ ಆದ್ಯತೆಯಾಗಿದೆ’ ಎಂದು ಈಶ್ವರಪ್ಪ ತಿಳಿಸಿದರು.

‘ದೇವಸ್ಥಾನಗಳ ಅರ್ಚಕರಿಗೆ ಸರಿಯಾದ ಶಿಕ್ಷಣ ಇಲ್ಲ. ಅವರಿಗೆ ಧರ್ಮದ ಬಗ್ಗೆ ತರಬೇತಿ ಹಾಗೂ ಹಿಂದುಳಿದ, ದಲಿತ ಮತ್ತು ಎಲ್ಲ ವರ್ಗದ ಬಡವರ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸುವ ಉದ್ದೇಶದಿಂದ ಕ್ರಾಂತಿವೀರ ಬ್ರಿಗೇಡ್ ಆರಂಭವಾಗುತ್ತಿದೆ’ ಎಂದರು.

‘ಹಿಂದೂ ಧರ್ಮಕ್ಕೆ ಯಾವುದೇ ಸಮಸ್ಯೆ ಎದುರಾದರೆ ಅಲ್ಲಿ ಕ್ರಾಂತಿವೀರ ಬ್ರಿಗೇಡ್ ಧ್ವನಿ ಎತ್ತಲಿದೆ. ರಾಜಕಾರಣಕ್ಕೂ ಬ್ರಿಗೇಡ್‌ಗೂ ಯಾವುದೇ ಸಂಬಂಧವಿಲ್ಲ’ ಎಂದರು.

ಮೂವರು ಮಹಿಳೆಯರಿಂದ ಸಲ್ಲೇಖನ ವ್ರತ

ತೇರದಾಳ (ಬಾಗಲಕೋಟೆ): ‘ಜೈನ ಧರ್ಮದ ಪರಂಪರೆಯಲ್ಲಿ ವ್ಯಕ್ತಿಯ ಜೀವನದ ಕೊನೆಯ ಕಠಿಣ ನಿಯಮವಾದ ಯಮಸಲ್ಲೇಖನ ವ್ರತವನ್ನು ಹಳಿಂಗಳಿಯ ಭದ್ರಗಿರಿ ಬೆಟ್ಟದ ಕ್ಷೇತ್ರದಲ್ಲಿ ಮೂವರು ಮಾತಾಜಿಗಳು ಆಚರಿಸುತ್ತಿದ್ದಾರೆ’ ಎಂದು ಆಚಾರ್ಯಶ್ರೀ 108 ಕುಲರತ್ನಭೂಷಣ ಮಹಾರಾಜ ತಿಳಿಸಿದರು.

ಭದ್ರಗಿರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

‘772 ಜೈನಮುನಿಗಳು ಈ ಕ್ಷೇತ್ರಕ್ಕೆ ಬಂದು ಸಲ್ಲೇಖನ ಪಡೆದುಕೊಂಡ ಪುಣ್ಯಭೂಮಿ ಭದ್ರಗಿರಿ. ಅಂತಹ ಕ್ಷೇತ್ರದಲ್ಲಿ ದರ್ಶನ ಭೂಷಣ ಮತಿ (ವಿಜಯಪುರ), ಜ್ಞಾನಭೂಷಣಮತಿ(ಕೊಲ್ಹಾಪುರ) ಹಾಗೂ ಚಾರಿತ್ರ್ಯಭೂಷಣಮತಿ ಮಾತಾಜಿ(ಬೆಳಗಾವಿ) ಅವರು ಯಮಸಲ್ಲೇಖನ ವ್ರತ ಆಚರಿಸುತ್ತಿದ್ದಾರೆ’ ಎಂದು ತಿಳಿಸಿದರು.



ಆನೆ– ಬೇನೆ... ಮೈಸೂರು ಜಿಲ್ಲೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ ವಲಯದ ಮುದಗನೂರು ಕೆರೆಯಂಚಿನ ರೈಲ್ವೆ ಬ್ಯಾರಿಕೇಡ್ ಪಿಲ್ಲರ್ ನಡುವೆ ಸುಮಾರು 30 ವರ್ಷ ವಯಸ್ಸಿನ ಸಲಗ ಭಾನುವಾರ ಸಿಲುಕಿಕೊಂಡಿತ್ತು. ಅದನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ರಕ್ಷಿಸಿದರು

ನಿಧನ ವಾರ್ತೆ

ವತ್ಸಲಾ ವೇದಾಂತಂ

ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಯ ಮಾಜಿ ಸಹ ಸಂಪಾದಕಿ ಮತ್ತು ಅಂಕಣಗಾರ್ತಿ ವತ್ಸಲಾ ವೇದಾಂತಂ (92) ಅವರು ಶನಿವಾರ ನಿಧನರಾಗಿದ್ದಾರೆ. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

ವತ್ಸಲಾ ವೇದಾಂತಂ

ವತ್ಸಲಾ ವೇದಾಂತಂ ಅವರು ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿ ಜನಿಸಿದ್ದರು. ಬೆಂಗಳೂರಿನ ಮಹಾರಾಣಿ ಕಾಲೇಜು ಮತ್ತು ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಪಡೆದಿದ್ದರು. ಇಂಗ್ಲಿಷ್ ವಿಷಯದಲ್ಲಿ ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದು, ಹಲವು ವರ್ಷ ಉಪನ್ಯಾಸಕರಾಗಿ ಮತ್ತು ಆಡಳಿತ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದರು.

ಆಡಳಿತ ಮಂಡಳಿಯ ಆಹ್ವಾನದ ಮೇರೆಗೆ ಡೆಕ್ಕನ್ ಹೆರಾಲ್ಡ್ ಉದ್ಯೋಗಿಯಾಗಿ ಸೇರಿದ್ದ ಅವರು ಪತ್ರಿಕೆಯಲ್ಲಿ ಶಿಕ್ಷಣ, ನೃತ್ಯ ಮತ್ತು ಸಂಗೀತ ಕುರಿತು ಅಂಕಣ ಬರೆಯುತ್ತಿದ್ದರು. 90ರ ದಶಕದಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ನಿವೃತ್ತಿ ನಂತರವೂ ಹಲವು ಪತ್ರಿಕೆಗಳಿಗೆ ಪ್ರದರ್ಶಕ ಕಲೆಗಳ ಕಲಾವಿದರು, ಸಂಗೀತಗಾರರು, ನೃತ್ಯಗಾರರು, ಲೇಖಕರನ್ನು ಕುರಿತು ಲೇಖನಗಳನ್ನು ಬರೆಯುತ್ತಿದ್ದರು. ಬಿಡಿ ಬರಹಗಳನ್ನು ಸಂಕಲನವಾಗಿಸಿ ಕಳೆದ ವರ್ಷ ‘ದಿ ಅಚೀವರ್ಸ್’ ಎಂಬ ಕೃತಿ ಪ್ರಕಟಿಸಿದ್ದರು. ತಮ್ಮ ತಾಯಿ ರತ್ನಮ್ಮ ಅಯ್ಯಂಗಾರ್ ಅವರ ಜೀವನ ಚರಿತ್ರೆಯನ್ನು ಇತ್ತೀಚೆಗೆ ದಾಖಲಿಸಿದ್ದರು.

ದೇಗುಲಗಳಿಗೆ ಸೇರಿತು 11,499 ಎಕರೆ ಭೂಮಿ

ಒಂದನೇ ಪುಟದಿಂದ..

ಮುಜರಾಯಿ ದೇವಸ್ಥಾನಗಳ ಆಸ್ತಿಗಳ ದಾಖಲೆಗಳ ಭೂಮಾಪನ ಮತ್ತು ಇಂಡೀಕರಣ ಪ್ರಕ್ರಿಯೆ 2008ರಿಂದಲೇ ಆರಂಭವಾಗಿತ್ತು. 2023ರವರೆಗೆ ಹೆಚ್ಚು ಪ್ರಗತಿಯಾಗಿರಲಿಲ್ಲ. ಕೆಲವು ವರ್ಗಗಳಲ್ಲಿ ಎರಡರಿಂದ ಮೂರು ಎಕರೆ ಜಮೀನಿನ ದಾಖಲೆಗಳನ್ನಷ್ಟೇ ಇಂಡೀಕರಿಸಿದ್ದ ಉದಾಹರಣೆಗಳೂ ಇದ್ದವು. 2023ರಿಂದ ಪ್ರಕ್ರಿಯೆ ಚುರುಕಾಗಿತ್ತು.

ಹಾಸನ ಜಿಲ್ಲೆಯಲ್ಲಿ ದೇವಸ್ಥಾನಗಳ ಹೆಸರಿಗೆ ಅತ್ಯಧಿಕ 1,663 ಎಕರೆ 31 ಗುಂಟೆ ವಿಸ್ತೀರ್ಣದ ಜಮೀನುಗಳ ದಾಖಲೆ ಇಂಡೀಕರಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 1,435 ಎಕರೆ 12 ಗುಂಟೆ, ಕಲಬುರಗಿ ಜಿಲ್ಲೆಯಲ್ಲಿ 1,172 ಎಕರೆ 13 ಗುಂಟೆ, ಮೈಸೂರು ಜಿಲ್ಲೆಯಲ್ಲಿ 1,164 ಎಕರೆ 17 ಗುಂಟೆ, ತುಮಕೂರು ಜಿಲ್ಲೆಯಲ್ಲಿ 1,123 ಎಕರೆ 30 ಗುಂಟೆ, ಮಂಡ್ಯ ಜಿಲ್ಲೆಯಲ್ಲಿ 1,070 ಎಕರೆ ವಿಸ್ತೀರ್ಣದ ಜಮೀನುಗಳ ದಾಖಲೆಗಳಲ್ಲಿ ದೇವಸ್ಥಾನಗಳ ಹೆಸರುಗಳನ್ನು ದಾಖಲಿಸಿ, ಭದ್ರಪಡಿಸಲಾಗಿದೆ.

ರಾಜ್ಯದಾದ್ಯಂತ ಈವರೆಗೆ 7,485 ಸರ್ವೆ ನಂಬರ್‌ಗಳಲ್ಲಿರುವ ದೇವಸ್ಥಾನಗಳ ಆಸ್ತಿಗಳ ಭೂಮಾಪನ ನಡೆಸಿ, ಗಡಿಗಳನ್ನು ಗುರುತಿಸಲಾಗಿದೆ. ಅವುಗಳ ದಾಖಲೆಗಳನ್ನು ಪರಿಶೀಲಿಸಿ ದೇವಸ್ಥಾನಕ್ಕೆ ಸಂಬಂಧಿಸದ ವ್ಯಕ್ತಿಗಳು, ಟ್ರಸ್ಟ್‌ಗಳ ಹೆಸರು ಕೈಬಿಡಲಾಗಿದೆ.

ಈ ಪೈಕಿ ಆರು ಸಾವಿರಕ್ಕೂ ಹೆಚ್ಚು ಸರ್ವೆ ನಂಬರ್‌ಗಳಲ್ಲಿನ ಆಸ್ತಿಗಳ ಭೂಮಾಪನ, ದಾಖಲೆ ಪರಿಶೀಲನೆ, ತಿದ್ದುಪಡಿ ಪ್ರಕ್ರಿಯೆಗಳು ಕಳೆದ 19 ತಿಂಗಳ ಅವಧಿಯಲ್ಲೇ ನಡೆದಿವೆ.

ಸಾಣೇಹಳ್ಳಿ ಶ್ರೀಗೆ ‘ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ’

ಒಂದನೇ ಪುಟದಿಂದ...

‘ಜನಪರ ಕಾಳಜಿ, ವೈಚಾರಿಕ ಚಿಂತನೆ, ರಂಗಾಸಕ್ತಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಒಲವು ಹಾಗೂ ಜೀವನಾದರ್ಶಗಳನ್ನು ಪರಿಗಣಿಸಿ ಸ್ವಾಮೀಜಿ ಅವರನ್ನು ಈ ಸಾಲಿನ ಪ್ರಶಸ್ತಿಗೆ ಮಲ್ಲಿಕಾ ಘಂಟಿ ಅವರ ಅಧ್ಯಕ್ಷತೆಯ ಸಮಿತಿ ಆಯ್ಕೆ ಮಾಡಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

‘ಜನವರಿ 14ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಶ್ರೀ ಸಿದ್ದರಾಮೇಶ್ವರ ಜಯಂತಿ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ’ ಎಂದಿದ್ದಾರೆ.

ಶಿಕ್ಷಣ



ಉದ್ಯಮದಲ್ಲಿ ಕ್ರಿಯಾಶೀಲ ಒಳನೋಟಕ್ಕೆ ಪವರ್ ಬಿಐ

ಮಾರ್ಕೆಟಿಂಗ್, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಿರುವ ಪವರ್ ಬಿಐ ಕೋರ್ಸ್‌ನ ಪರಿಚಯ ಇಲ್ಲಿದೆ

ಪ್ರದೀಪ್ ವೆಂಕಟರಾಮ್

ಇಂದಿನ ಸ್ಪರ್ಧಾತ್ಮಕ ಔದ್ಯೋಗಿಕ ಜಗತ್ತಿನಲ್ಲಿ ಸಕಾಲಿಕ ನಿರ್ಧಾರಗಳನ್ನು ಮಾಡುವುದು ಮಹತ್ವದ್ದಾಗಿದೆ. ದತ್ತಾಂಶ ವಿಶ್ಲೇಷಣೆಯಿಂದ (ಡೇಟಾ ಅನಾಲಿಟಿಕ್ಸ್) ದೊರಕುವ ಮಾಹಿತಿ, ನಿರ್ಧಾರಗಳನ್ನು ಮಾಡುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಈ ನಿಟ್ಟಿನಲ್ಲಿ, ಹಲವಾರು ದತ್ತಾಂಶ ವಿಶ್ಲೇಷಣೆಯ ಸಾಫ್ಟ್‌ವೇರ್‌ಗಳಿದ್ದರೂ, ಮೈಕ್ರೋಸಾಫ್ಟ್ ಪವರ್ ಬಿಐ (ಪವರ್ ಬಿಸಿನೆಸ್ ಇಂಟೆಲಿಜೆನ್ಸ್) ಸಾಫ್ಟ್‌ವೇರ್ ಸೇವೆಗಳು, ಪರಿಕರಗಳು, ಕನೆಕ್ಟರ್‌ಗಳ ಸಂಗ್ರಹಗಳಿಂದ, ಬಹು ಮೂಲಗಳಿಂದ ದೊರಕುವ ದತ್ತಾಂಶವನ್ನು ವಿಶ್ಲೇಷಿಸಿ, ಕ್ರಿಯಾಶೀಲ ಒಳನೋಟಗಳನ್ನು ಒದಗಿಸುತ್ತದೆ.

ಪ್ರಮುಖ ಗುಣಲಕ್ಷಣಗಳು

1. **ಇಂಟರ್‌ಆಕ್ಟಿವ್ ಡ್ಯಾಶ್‌ಬೋರ್ಡ್ಸ್:** ಗ್ರಾಹಕೀಯಗೊಳಿಸಬಹುದಾದ ಡ್ಯಾಶ್‌ಬೋರ್ಡ್‌ಗಳಿಂದ ಬಳಕೆದಾರ ಸ್ನೇಹಿ ಚಾರ್ಟ್ಸ್, ಗ್ರಾಫ್ಸ್ ಇತ್ಯಾದಿಗಳಿಂದ ದೃಶ್ಯೀಕರಿಸಿ, ಕಾರ್ಯಕ್ಷಮತೆಯ ಸೂಚಕಗಳನ್ನು (ಕೆಪಿಐ-ಕಿ ಪರ್ಫಾರ್ಮೆನ್ಸ್ ಇಂಡಿಕೇಟರ್ಸ್) ಪ್ರದರ್ಶಿಸುತ್ತದೆ.
2. **ಡೇಟಾ ಇಂಟಿಗ್ರೇಷನ್:** ಎಕ್ಸೆಲ್, ಎಸ್‌ಕ್ಯೂಎಲ್ ಸರ್ವರ್, ಅಝುರೆ, ಸೇಲ್ಸ್‌ಫೋರ್ಸ್ ಮತ್ತು ಗೂಗಲ್ ಅನಾಲಿಟಿಕ್ಸ್ ಸೇರಿದಂತೆ ವ್ಯಾಪಕ ಶ್ರೇಣಿಯ ಡೇಟಾ ಮೂಲಗಳೊಂದಿಗೆ ಪವರ್ ಬಿಐ ಏಕೀಕರಣಗೊಳಿಸಿ, ಅನೇಕ ಪ್ಲಾಟ್‌ಫಾರ್ಮ್‌ಗಳಿಂದ ಡೇಟಾವನ್ನು ಕ್ರೋಡೀಕರಿಸಿ, ಅರ್ಥಪೂರ್ಣ ಒಳನೋಟಗಳನ್ನು ಒದಗಿಸುತ್ತದೆ.
3. **ಪವರ್ ಕ್ವೆರಿ:** ಬಳಕೆದಾರರು ಎಂಬೆಡ್ ಮಾಡಲಾದ ಸ್ವಯಂ-ಸೇವಾ ಡೇಟಾ ಪವರ್ ಕ್ವೆರಿಯೊಂದಿಗೆ ಡೇಟಾವನ್ನು ಅಳಿಸಬಹುದು, ಪರಿವರ್ತಿಸಬಹುದು ಮತ್ತು ರೂಪಿಸಬಹುದು. ಇದೇ ರೀತಿ, ಪವರ್ ಪಿವೊಟ್, ಪವರ್ ವ್ಯೂ, ಪವರ್ ನಕ್ಷೆ ಮುಂತಾದ ಘಟಕಗಳು ಲಭ್ಯ.
4. **ಎಐ ಮತ್ತು ಯಂತ್ರ ಕಲಿಕೆ:** ಪವರ್ ಬಿಐ ನೈಸರ್ಗಿಕ ಭಾಷಾ ಸಂಸ್ಕರಣೆ (ಎನ್‌ಎಲ್‌ಪಿ- ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್) ಮತ್ತು ಭವಿಷ್ಯದ ವಿಶ್ಲೇಷಣೆಗಳಂತಹ ಎಐ ಸಾಮರ್ಥ್ಯಗಳನ್ನು ಸಂಯೋಜಿಸುತ್ತದೆ. ಈ ವಿಶೇಷತೆಯಿಂದ ಆಳವಾದ ಒಳನೋಟಗಳನ್ನು ಪಡೆಯಬಹುದು.
5. **ಮೊಬೈಲ್ ಆಕ್ಸೆಸ್:** ಐಒಎಸ್ ಮತ್ತು ಆಂಡ್ರಾಯ್ಡ್ ಫೋನ್ ಬಳಕೆದಾರರು ಈ ಅಪ್ಲಿಕೇಷನ್‌ಗಳನ್ನು ಬಳಸಬಹುದು.

ಪ್ರಯೋಜನಗಳು

1. **ಬಳಕೆದಾರಸ್ನೇಹಿ:** ಡ್ರ್ಯಾಗ್ ಮತ್ತು ಡ್ರಾಪ್ ಇಂಟರ್ಫೇಸ್ ಮತ್ತು ಪೂರ್ವ-ನಿರ್ಮಿತ ಟೆಂಪ್ಲೇಟ್‌ಗಳಿಂದ, ಹೆಚ್ಚಿನ ತಜ್ಞತೆಯ ಅಗತ್ಯವಿಲ್ಲದೆ, ಎಲ್ಲಾ ಬಳಕೆದಾರರು ಉಪಯೋಗಿಸಬಹುದು.
2. **ಸ್ಕೇಲಬಿಲಿಟಿ:** ಸಣ್ಣ ಉದ್ಯಮದಿಂದ ಹಿಡಿದು ಬೃಹತ್ ಉದ್ಯಮದವರೆಗೆ, ಆಯಾ ಸಂಸ್ಥೆಗಳ ಅಗತ್ಯಕ್ಕೆ ತಕ್ಕಂತೆ ಗ್ರಾಹಕೀಕರಿಸಬಹುದು.
3. **ಆವೃತ್ತಿಗಳು:** ಪವರ್ ಬಿಐ ಬೇಸಿಕ್, ಡೆಸ್ಕ್‌ಟಾಪ್, ಪ್ರೊ, ಪ್ರೀಮಿಯಂ ಮತ್ತು ಮೊಬೈಲ್ ಸೇರಿದಂತೆ ಉಚಿತ ಮತ್ತು ಪಾವತಿಸಬೇಕಾದ ಆವೃತ್ತಿಗಳಲ್ಲಿ ಲಭ್ಯವಿದೆ. ಪ್ರತಿಯೊಂದು ಆವೃತ್ತಿಯು ಡೇಟಾ ವಿಶ್ಲೇಷಣೆ ಮತ್ತು ದೃಶ್ಯೀಕರಣಕ್ಕಾಗಿ ವಿಭಿನ್ನ ವೈಶಿಷ್ಟ್ಯಗಳು ಮತ್ತು ಸಾಮರ್ಥ್ಯಗಳನ್ನು ನೀಡುತ್ತದೆ.
4. **ನಿರ್ಧಾರ-ಮಾಡುವಿಕೆ:** ಸುಲಭವಾಗಿ ಅರ್ಥವಾಗುವ ಸ್ವರೂಪದಲ್ಲಿ ದತ್ತಾಂಶವನ್ನು ಪ್ರಸ್ತುತಪಡಿಸುವ ಮೂಲಕ, ಟ್ರೆಂಡ್‌ಗಳನ್ನು ಗುರುತಿಸಲು ಮತ್ತು ತಿಳಿವಳಿಕೆಯುಳ್ಳ ನಿರ್ಧಾರಗಳನ್ನು ತ್ವರಿತವಾಗಿ ಮಾಡಲು ಸಾಧ್ಯವಾಗಿಸುತ್ತದೆ.

ಬಳಕೆಯ ಕ್ಷೇತ್ರಗಳು

1 **ಮಾರ್ಕೆಟಿಂಗ್:** ಬೇಡಿಕೆಯನ್ನು ಅಂದಾಜು ಮಾಡುವುದು, ಮಾರ್ಕೆಟಿಂಗ್ ಮತ್ತು ಪ್ರಚಾರ ಕಾರ್ಯತಂತ್ರದ ವಿಶ್ಲೇಷಣೆ ಇತ್ಯಾದಿ.
2 **ಹಣಕಾಸು:** ಬಜೆಟ್ ತಯಾರಿಕೆ, ಮೇಲ್ವಿಚಾರಣೆ ಮತ್ತು ವಿಶ್ಲೇಷಣೆ ಇತ್ಯಾದಿ.
3 **ಉತ್ಪಾದನೆ:** ಸಪ್ಲೈಚೈನ್ ಕಾರ್ಯಕ್ಷಮತೆ, ಉತ್ಪಾದನೆ, ಉತ್ಪಾದಕತೆ ಇತ್ಯಾದಿ.
4 **ಆರೋಗ್ಯ:** ಚಿಕಿತ್ಸೆಯ ಫಲಿತಾಂಶಗಳ ವಿಶ್ಲೇಷಣೆ, ದಕ್ಷತೆ, ರೋಗಿಗಳ ಆರೈಕೆ ಇತ್ಯಾದಿ.
5 **ಶಿಕ್ಷಣ:** ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ವಿಶ್ಲೇಷಣೆ, ಸಂಪನ್ಮೂಲಗಳ ಹಂಚಿಕೆ ಇತ್ಯಾದಿ.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಉದ್ಯೋಗಾವಕಾಶಗಳು ಹೀಗಿವೆ...

ಪವರ್ ಬಿಐನ ವ್ಯಾಪಕವಾದ ವೈಶಿಷ್ಟ್ಯಗಳು, ತಡೆರಹಿತ ಸಂಯೋಜನೆಗಳು ಮತ್ತು ಬಳಕೆದಾರಸ್ನೇಹಿ ವಿನ್ಯಾಸದೊಂದಿಗೆ, ದತ್ತಾಂಶ ವಿಶ್ಲೇಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಲು ಅತ್ಯಂತ ಪ್ರಯೋಜನಕಾರಿ. ಹಾಗಾಗಿ, ಅರ್ಥ ವ್ಯವಸ್ಥೆಯ ಹಲವಾರು ಕ್ಷೇತ್ರಗಳಲ್ಲಿ ಪವರ್ ಬಿಐ ಅನಲಿಸ್ಟ್, ಡೇಟಾ ಅನಲಿಸ್ಟ್, ಡೇಟಾ ವಿಷುಯಲೈಸರ್, ಡೇಟಾ ಮ್ಯಾನೇಜರ್ ಮುಂತಾದ ಆಕರ್ಷಕ ಉದ್ಯೋಗಾವಕಾಶಗಳಿವೆ. ಈ ಅವಕಾಶಗಳಿಗೆ ಅನುಗುಣವಾಗಿ, ಪವರ್ ಬಿಐ ಕೋರ್ಸ್ ಅನ್ನು ಅಲ್ಪಾವಧಿ ಆವೃತ್ತಿಗಳನ್ನು ಆಯ್ಕೆಮಾಡಿಕೊಳ್ಳಬಹುದು. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಪ್ರಮುಖವಾಗಿ ವಿಶ್ಲೇಷಾತ್ಮಕ ಕೌಶಲದ ಅಗತ್ಯವಿದೆ. ಜತೆಗೆ ತಾಂತ್ರಿಕ ಶಿಕ್ಷಣ, ಎಕ್ಸೆಲ್, ದತ್ತಾಂಶ ನಿರ್ವಹಣೆ, ವಿನ್ಯಾಸದ ಕೌಶಲ, ಸಂವಹನ ಕೌಶಲಗಳಿದ್ದರೆ ಕೋರ್ಸ್ ಕಲಿಯಲು ಅನುಕೂಲ; ಅಥವಾ ಈ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಪವರ್ ಬಿಐ ಕೋರ್ಸನ್ನು ಆನ್‌ಲೈನ್ ಮೂಲಕ ಕಲಿತು, ಬೇಡಿಕೆಯಲ್ಲಿರುವ ಈ ಕ್ಷೇತ್ರದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

ಓದಿನ ಮಹತ್ವ ವಿವರಿಸೋದು ಹೇಗೆ?

ನನ್ನ ಮಗನಿಗೆ ಅದೆಷ್ಟು ಓದು ಅಂತ ತಿಳಿಸಿ ಹೇಳಿದರೂ, ಬೈದು ಹೇಳಿದರೂ ಅರ್ಥವೇ ಆಗುತ್ತಿಲ್ಲ. ಓದುವುದೇ ಇಲ್ಲ. ಹೇಗೆ ಹೇಳೋದು?ಮಕ್ಕಳಿಗೆ ಹೇಗೆ ಹೇಳಬೇಕು. ಏನನ್ನು, ಎಷ್ಟನ್ನು ಯಾವಾಗ ಹೇಳಬೇಕು ಎನ್ನುವುದೂ ಮುಖ್ಯ. ನಾವು ಹೇಳಿದಂತೆ ನಮ್ಮ ಮಕ್ಕಳು ಕೇಳಬೇಕು ಎನ್ನುವ ಆಸೆ ಪಾಲಕರಲ್ಲಿ ಸಹಜವಾಗಿರುತ್ತದೆ. ಪಾಲಕರ ಮಾತನ್ನು ಕೇಳುವ ವ್ಯವಧಾನ ಮಕ್ಕಳಿಗೆ ಇರುವುದಿಲ್ಲ. ಮಕ್ಕಳ ಮನಸ್ಸಿಗೆ ನಾಟುವಂತೆ ಹೇಳಬೇಕಾದ ಸಮಾಧಾನ ಪಾಲಕರಿಗೆ ಇರುವುದಿಲ್ಲ.

ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ನಿಮ್ಮ ಮಕ್ಕಳಿಗೆ ಬೇಜಾರಾಗದ ಹಾಗೆ, ಒತ್ತಡ ಹಾಕದೇ, ಅವರ ಇಚ್ಛೆಗೆ ವಿರುದ್ಧವಾಗಿ ಹೇಳುತ್ತಿದ್ದೀರಿ ಎಂದು ಎಣಿಸದ ಹಾಗೇ ಹೇಳಲು ಪ್ರಯತ್ನಿಸಿ. ಹೀನಾಯವಾಗಿ ಬೈಯ್ಯಬಾರದು. ಹೊಡೆಯುವುದಂತೂ ಮಾಡಲೇಬಾರದು. ಮಕ್ಕಳು ಬೆಳೆಯುತ್ತಿರುವಂತೆಯೇ ಅವರಿಗೆ ಅವರ ಕೆಲಸಗಳನ್ನು ಮಾಡಿಕೊಳ್ಳುವುದನ್ನೂ ಕಲಿಸಬೇಕು. ದೌರ್ಬಲ್ಯಗಳನ್ನು ಒಪ್ಪಿಕೊಳ್ಳಿ. ಸಾಮರ್ಥ್ಯವನ್ನು ಪೋಷಿಸಿ.

ಅವರಿಗೆ ಜೀವನದಲ್ಲಿ ಏನಾಗಬೇಕು ಎನ್ನುವ ಆಸೆ ಇದೆ ಎನ್ನುವುದನ್ನು ಪತ್ತೆ ಹಚ್ಚಿ. ಲಿಂಬೆ ಸಸಿಯನ್ನು ನೆಟ್ಟು ಮಾವಿನಕಾಯಿಯನ್ನು ನಿರೀಕ್ಷಿಸಲಿಕ್ಕೆ ಆಗುವುದಿಲ್ಲ. ಆಸಕ್ತಿ ಹಾಗೂ ಸಾಮರ್ಥ್ಯ ಅರಿತು ಅದಕ್ಕೆ ತಕ್ಕಂತೆ ಮಾರ್ಗದರ್ಶನ ಮಾಡಿ. ನಮ್ಮ ಹದಿಹರೆಯದಲ್ಲಿ ನಾವು ಎದುರಿಸಿದ ಸಮಸ್ಯೆಗಳಿಗೂ, ಈಗಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳಿಗೂ ವ್ಯತ್ಯಾಸಗಳಿವೆ. ನಿಮ್ಮ ಮಗನಜೊತೆಗೆ ಸರಳವಾಗಿ, ಸಹಜವಾಗಿ ಮಾತನಾಡಿರಿ.

ಓದುವ ಕೋಣೆ ಸ್ವಚ್ಛವಾಗಿಯೂ, ಗಾಳಿ ಬೆಳಕು ಆಡುವಂತೆಯೂ ಇರಲಿ. ಈಗ ಓದುವ ಅಗತ್ಯವನ್ನು, ಮುಂದೆ ಅದರಿಂದಾಗುವ ಅನುಕೂಲಗಳನ್ನು ವಿವರಿಸಿರಿ. ಸಾಕಷ್ಟು ಸಮಯಮೀಸಲಿಡಿ. ಯಾವುದೇ ಕಾರಣಕ್ಕೂ ನಿಮ್ಮ ಹತಾಶೆಯನ್ನಾಗಲೀ, ಅಸಹಾಯಕತೆಯನ್ನಾಗಲೀ ಅವನ ಮೇಲೆ ತೋರಿಸಬೇಡಿ.

ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದರೆ, ನಪಾಸಾದರೆ ಅದರಿಂದ ನಿಮಗೆ ಅವಮಾನವಾಗುತ್ತದೆ ಎನ್ನುವ ಒತ್ತಡದಿಂದ ಮೊದಲು ಪಾಲಕರು ಮುಕ್ತರಾಗಬೇಕು. ಮಗನ ಚಿಕ್ಕ ಪುಟ್ಟ ಯಶಸ್ಸಿಗೆ ಪುಸ್ತಕ ಬಹುಮಾನ ಕೊಡುವುದನ್ನು ರೂಢಿಸಿಕೊಳ್ಳಿ.

ಸದೃಢ ಶರೀರದಲ್ಲಿ ಸಶಕ್ತ ಮನಸ್ಸು ಇರುತ್ತದೆ. ಮಕ್ಕಳ ದೇಹ ಸದೃಢವಾಗಿರುವುದಕ್ಕೆ ಸಹಾಯ ಮಾಡಿ. ಅವರ ಮನಸ್ಸಿಗೆ ಸಜ್ಜನರ ಸಂಗದಿಂದ, ಒಳ್ಳೆಯ ವಿಚಾರಗಳಿಂದ ಸಕಾರಾತ್ಮಕ ವಿಷಯಗಳು ಸಿಗುವಂತೆ ನೋಡಿಕೊಳ್ಳಿ.

ವಿದ್ಯಾರ್ಥಿ ವೇತನ ಕೈಪಿಡಿ

ಕೋಟಕ್ ಸ್ಕಾಲರ್‌ಶಿಪ್

ಕೋಟಕ್ ಎಜುಕೇಶನ್ ಫೌಂಡೇಷನ್ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.
ಅರ್ಹತೆ: ಭಾರತ ದಾದ್ಯಂತದ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಲಭ್ಯ. ಅಭ್ಯರ್ಥಿಗಳು 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಅಥವಾ ತತ್ಸಮಾನ ಸಿಜಿಪಿಎಯನ್ನು ಗಳಿಸಿರಬೇಕು. ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ₹ 6,00,000ಕ್ಕಿಂತ ಕಡಿಮೆ ಇರಬೇಕು. ಮಾನ್ಯತೆ ಪಡೆದ ಎನ್‌ಆರ್‌ಎಫ್/ ಎನ್‌ಎಎಸಿಯಂಥ ಪ್ರತಿಷ್ಠಿತ ಸಂಸ್ಥೆಗಳಲ್ಲಿ 2024-25 ಶೈಕ್ಷಣಿಕ ವರ್ಷದಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಬಿಡಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷಗಳು), ಬಿ.ಎಸ್‌ಸಿ ನರ್ಸಿಂಗ್, ಬಿ.ಫಾರ್ಮಸಿ, ಇಂಟಿಗ್ರೇಟೆಡ್ ಬಿಎಸ್-ಎಂಎಸ್/ಬಿಎಸ್-ರಿಸರ್ಚ್ ಇನ್ ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ (ಡಿಸೈನ್, ಆರ್ಕಿಟೆಕ್ಚರ್, ಇತ್ಯಾದಿ) ಇತರ ವೃತ್ತಿಪರ ಕೋರ್ಸ್‌ಗಳಿಗೆ ಮೊದಲ ವರ್ಷದ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರು ಅರ್ಹರು.
ಆರ್ಥಿಕ ನೆರವು: ವರ್ಷಕ್ಕೆ ₹ 1.5* ಲಕ್ಷ
ಅರ್ಜಿ ಸಲ್ಲಿಸಲು ಕೊನೆ ದಿನ: 12-01-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/KKGS3

ಆಮ್ರಾನ್ ಹೆಲ್ತ್‌ಕೇರ್ ಸ್ಕಾಲರ್‌ಶಿಪ್

ಆಮ್ರಾನ್ ಹೆಲ್ತ್‌ಕೇರ್ ಇಂಡಿಯಾ ಯಾವುದೇ ಶಾಲೆಯಲ್ಲಿ 9ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.
ಅರ್ಹತೆ: ವಿದ್ಯಾರ್ಥಿನಿಯರು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 8,00,000ಕ್ಕಿಂತ ಕಡಿಮೆಯಿರಬೇಕು.
ಆರ್ಥಿಕ ನೆರವು: ₹ 20,000 ವಿದ್ಯಾರ್ಥಿವೇತನ
ಅರ್ಜಿ ಸಲ್ಲಿಸಲು ಕೊನೆ ದಿನ: 10-01-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಮಾಹಿತಿಗೆ: Short Url: www.b4s.in/pjvi/OMHS2

ಟಾಟಾ ಕ್ಯಾಪಿಟಲ್ ಪಂಖ್ ಸ್ಕಾಲರ್‌ಶಿಪ್

ಟಾಟಾ ಕ್ಯಾಪಿಟಲ್ ಲಿಮಿಟೆಡ್ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಿದೆ.
ಅರ್ಹತೆ: ಪ್ರಸ್ತುತ 11, 12ನೇ ತರಗತಿಗಳಲ್ಲಿರುವ, ಪದವಿ (ಬಿ.ಕಾಂ., ಬಿ.ಎಸ್‌ಸಿ, ಬಿಎ ಇತ್ಯಾದಿ), ಡಿಪ್ಲೊಮಾ ಮತ್ತು ಐಟಿಐ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಹರು. ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 2.5 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.
ಆರ್ಥಿಕ ಸಹಾಯ: ₹ 10,000 ರಿಂದ ₹ 12,000ದ ವರೆಗಿನ ಮೊತ್ತ ಅಥವಾ ಕೋರ್ಸ್ ಶುಲ್ಕದ ಶೇ 80.
ಅರ್ಜಿ ಸಲ್ಲಿಸಲು ಕೊನೆ ದಿನ: 15-01-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/TCPS27

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಈಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಕೇಂದ್ರದಲ್ಲಿ ದ್ವಿ ಸರ್ಕಾರವನ್ನು ಸ್ಥಾಪಿಸಲು ಅವಕಾಶ ಮಾಡಿದ ಕಾಯ್ದೆ
ಎ) 1773ರ ರೆಗ್ಯೂಲೇಟಿಂಗ್ ಕಾಯ್ದೆ
ಬಿ) 1909 ರ ಭಾರತೀಯ ಪರಿಷತ್ ಕಾಯ್ದೆ
ಸಿ) 1919ರ ಭಾರತ ಸರ್ಕಾರ ಕಾಯ್ದೆ
ಡಿ) 1935ರ ಭಾರತ ಸರ್ಕಾರ ಕಾಯ್ದೆ
ಉತ್ತರ:–(ಡಿ) 1935ರ ಭಾರತ ಸರ್ಕಾರ ಕಾಯ್ದೆ

2) ಭಾರತದಲ್ಲಿ ಶೇಕಡ ಎಷ್ಟು ಭೂಭಾಗ ಅರಣ್ಯಗಳಿಂದ ಕೂಡಿದೆ?
ಎ) ಶೇ 21.02 ಬಿ) ಶೇ. 33.3
ಸಿ) ಶೇ. 16.3 ಡಿ) ಶೇ, 44.2
ಉತ್ತರ:– (ಎ) ಶೇ 21.02

3) ಇವುಗಳಲ್ಲಿ ಉಳಿದವುಗಳಿಂದ ಭಿನ್ನವಾಗಿರುವುದು
ಎ) ಆಕ್ಸಿಸ್ ಬಿ) ಕದನ ಬಾಂಧವ್ಯತ್ರಯ
ಸಿ) ಕದನ ಸೌಹಾರ್ದತ್ರಯ ಡಿ) ಬೂದು ಅಂಗಿದಳ
ಉತ್ತರ:– (ಡಿ) ಬೂದು ಅಂಗಿದಳ

4) ಇವರು ಯಾರು? ಇವರ ಕೃತಿಯನ್ನು ಗುರುತಿಸಿ



ಎ) ಜವಾಹರ್ ಲಾಲ್ ನೆಹರು – ಡಿಸ್ಕವರಿ ಆಫ್ ಇಂಡಿಯಾ
ಬಿ) ಮಹಾತ್ಮ ಗಾಂಧಿ – ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್
ಸಿ) ರಬೀಂದ್ರನಾಥ್ ಟ್ಯಾಗೋರ್– ಗೀತಾಂಜಲಿ
ಡಿ) ಬಾಲಗಂಗಾಧರ್ ತಿಲಕ್– ಗೀತಾ ರಹಸ್ಯ
ಉತ್ತರ:–(ಬಿ) ಮಹಾತ್ಮ ಗಾಂಧಿ– ಎಕ್ಸ್‌ಪರಿಮೆಂಟ್ ವಿಥ್ ಥ್ರೂತ್

5) ವಿಶ್ವ ಸಂಸ್ಥೆಯ ಪ್ರಧಾನ ಕಛೇರಿ ಇರುವ ನಗರ________
ಎ) ಪ್ಯಾರಿಸ್ ಬಿ) ವಾಷಿಂಗ್‌ಟನ್ ಡಿಸಿ
ಸಿ) ನ್ಯೂಯಾರ್ಕ್ ಡಿ) ರೋಮ್
ಉತ್ತರ:–(ಸಿ) ನ್ಯೂಯಾರ್ಕ್

6). ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ________ ಇಲಾಖೆಯು ನೀಡುತ್ತದೆ.
ಎ) ಸಹಕಾರ ಬ್ಯಾಂಕ್ ಬಿ) ಸಹಕಾರ ಪತ್ತಿನ ಸೊಸೈಟಿ
ಸಿ) ಅಂಚೆ ಇಲಾಖೆ ಡಿ) ಯಾರೂ ಅಲ್ಲ
ಉತ್ತರ: (ಸಿ) ಅಂಚೆ ಇಲಾಖೆ

7) ....ನ ಬೆಂಬಲದಿಂದ 1829ರಲ್ಲಿ ಸತಿಪದ್ಧತಿಯ ಆಚರಣೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು.
ಎ) ವಿಲಿಯಂ ಬೆಂಟಿಂಕ್ ಬಿ) ಮೌಂಟ್ ಬ್ಯಾಟನ್
ಸಿ) ಲಾರ್ಡ್ ಡಫರಿನ್ ಡಿ) ಲಾರ್ಡ್ ಇರ್ವಿನ್
ಉತ್ತರ:– (ಎ) ವಿಲಿಯಂ ಬೆಂಟಿಂಕ್

8) ದೇಶದಲ್ಲಿ ಉತ್ಪಾದನೆಯಾಗುವ ಆದಾಯ ಮತ್ತು ಸಂಪತ್ತು ಬಡವ–ಬಲ್ಲಿದ, ನಗರ–ಗ್ರಾಮೀಣ ಎಂಬ ಯಾವುದೇ ತಾರತಮ್ಯವಿಲ್ಲದೆ ಸಮಾಜದ ಎಲ್ಲ ಜನರಲ್ಲಿ ಆದಷ್ಟು ಸಮಾನವಾಗಿ ಹಂಚಿಕೆಯಾಗ ಬೇಕಾಗುತ್ತದೆ. ಇದನ್ನೇ ....ಎನ್ನುತ್ತಾರೆ.
ಎ) ಆರ್ಥಿಕ ಅಸ್ಥಿರತೆ ಬಿ) ಸಾಮಾಜಿಕ ನ್ಯಾಯ
ಸಿ) ಸಾಮಾಜಿಕ ಸಂಘರ್ಷ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:–(ಬಿ) ಸಾಮಾಜಿಕ ನ್ಯಾಯ

9) ಸಂವಿಧಾನದ .... ವಿಧಿಯ ಅಸ್ಪೃಶ್ಯತಾ ಆಚರಣೆಯ ಒಂದು ಶಿಕ್ಷಾರ್ಹ ಅಪರಾಧ ಎಂದಿದೆ.
(ಎ) 11ನೇಯ ವಿಧಿ (ಬಿ) 17ನೇಯ ವಿಧಿ
(ಸಿ) 13ನೇಯ ವಿಧಿ (ಡಿ) 15ನೇಯ ವಿಧಿ
ಉತ್ತರ: (ಬಿ) 17ನೇಯ ವಿಧಿ

10) ಹಸಿರು ಕ್ರಾಂತಿಯನ್ನು ಆಹಾರ ಧಾನ್ಯಗಳ ಉತ್ಪಾದನೆ ಮಾಡಲಾಗಿತ್ತು, ಹಾಗಾದರೆ ನೀಲಿ ಕ್ರಾಂತಿ ಯಾವುದಕ್ಕಾಗಿ ಮಾಡಲಾಗಿತ್ತು?
(ಎ) ಮೊಟ್ಟೆಗಳ ಉತ್ಪಾದನೆ (ಬಿ) ಎಣ್ಣೆ ಬೀಜಗಳ ಉತ್ಪಾದನೆ
(ಸಿ) ಮೀನುಗಳ ಉತ್ಪಾದನೆ (ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಸಿ) ಮೀನುಗಳ ಉತ್ಪಾದನೆ

11) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?
ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– (ಎ) ರಾಬರ್ಟ್ ಕ್ಲೈವ್

12) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್‌ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?
ಎ) 1734 ಬಿ) 1526
ಸಿ) 1764 ಡಿ) 1943
ಉತ್ತರ:– (ಸಿ) 1764

13) ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ವಾರ್ಷಿಕ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದವನು. ಯಾರು?
ಎ) ಜೋಜೋ ಮೆಥ್ಯೂ ಬಿ) ರೋಜ್ ಮೇರಿ
ಸಿ) ಲಾರ್ಡ್ ಮೆಕಾಲೆ ಡಿ) ಎಡ್ಮಂಡ್ ಬರ್ಕ್
ಉತ್ತರ:– (ಡಿ) ಎಡ್ಮಂಡ್ ಬರ್ಕ್

14) ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯ ನಿರ್ವಹಿಸುತ್ತಿದ್ದವು. .... ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.
ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ
ಬಿ) 1784ರ ಪಿಟ್ಸ್ ಇಂಡಿಯಾ ಕಾಯ್ದೆ
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– (ಎ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

15) ಪ್ರಥಮ ಆಂಗ್ಲೋ–ಮರಾಠ ಯುದ್ಧದ ಕೊನೆಯಲ್ಲಿ ಸಹಿ ಹಾಕಲಾದ ಒಪ್ಪಂದ ಯಾವುದು?
ಉತ್ತರ:– ಸಾಲ್ಬಾಯ್ ಒಪ್ಪಂದ

16) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಎಲ್ಲಿ ಕಂಡು ಬರುತ್ತದೆ?
ಉತ್ತರ:– ಇಂಥ ಸಸ್ಯವರ್ಗವು 60–75 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ.

17) ಗಂಗಾ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ. ಏಕೆ?
ಉತ್ತರ:– ಗಂಗಾ ನದಿಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಕವಾಗಿ ಹಂಚಿಕೆಯಾಗಿದೆ ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ.

(ಮುಂದುವರಿಯುವುದು)

II PUC -MATHEMATICS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

REVISION : MODEL QUESTIONS

Multiple choice Questions

1) Let the relation R in the set $A = \{x \in Z: 0 \leq x \leq 12\}$, given by $R=\{(a, b):|a-b| \text{ is multiple of } 4\}$, then [3], the equivalence class containing 3 is
A) $\{1,5,9\}$ B) ϕ
C) A D) $\{3, 7,11\}$
Ans:- (D) $\{3, 7,11\}$

2) If a relation R on the set $\{1, 2, 3\}$ is defined by $R = \{(1, 1)\}$, then R is
(A) symmetric but not transitive
(B) transitive but not symmetric
(C) symmetric and transitive.
(D) neither symmetric nor transitive.
Ans:- (C) symmetric and transitive.

3. If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is
(A) $\frac{1-\sqrt{3}}{2}$ (B) 0
(C) $\frac{1}{2}(\sqrt{3}-1)$ (D) None of these
Ans : (C) $\frac{1}{2}(\sqrt{3}-1)$

$$\frac{dy}{dx} = \sin x + \cos x \quad \therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0$$
$$= \frac{\sqrt{3}}{2} - \frac{1}{2} = \frac{\sqrt{3}-1}{2}.$$

4. $\int e^x\left(\frac{1+\sin x}{1+\cos x}\right) dx$ is
(A) $\tan\left(\frac{x}{2}\right)+C$ (B) $e^x \sin x + C$
(C) $e^x \tan\left(\frac{x}{2}\right)+C$ (D) $e^x + C$
Ans : (C) $e^x \tan\left(\frac{x}{2}\right)+C$

$$\frac{1+\sin x}{1+\cos x} = \frac{1+2\sin\frac{x}{2}\cos\frac{x}{2}}{2\cos^2\frac{x}{2}} = \frac{1}{2}\sec^2\frac{x}{2} + \tan\frac{x}{2}$$

Let $f(x) = \tan\frac{x}{2}$. Then $f'(x) = \frac{1}{2}\sec^2\frac{x}{2}$.

$$\therefore \int e^x\left(\frac{1+\sin x}{1+\cos x}\right) dx = \int e^x[f(x) + f'(x)] \text{ form.}$$
$$= e^x f(x) = e^x . \tan\frac{x}{2} + C.$$

5. If 1, w, w^2 are three cube roots of unity, then $(1 - w + w^2)(1 + w - w^2)$ is........................
(A) 2 (B) 4
(C) 1 (D) 3
Ans: (B) 4
Expln:- We know $1 + w + w^2 = 0$. $\therefore 1 + w = -w^2$ and $1 + w^2 = -w$.
$\therefore (1 - w + w^2)(1 + w - w^2)$
$= (-2w)(-2w^2) = 4w^3 = 4$.

2. If $\cot^{-1} x = y$, then
(A) $0 \leq y \leq \pi$ **(B) $0 < y < \pi$**
(C) $-\frac{\pi}{2} \leq y \leq \frac{\pi}{2}$ (D) $-\frac{\pi}{2} < y < \frac{\pi}{2}$.
Ans:- (B) $0 < y < \pi$

2 . $\sin(\tan^{-1} x)$, $|x| < 1$ is equal to
(A) $\frac{\sqrt{1-x^2}}{x}$ (B) $\frac{x}{\sqrt{1-x^2}}$
(C) $\frac{1}{1+x^2}$ (D) $\frac{x}{\sqrt{1+x^2}}$.
Ans:-
(D) $\frac{x}{\sqrt{1+x^2}}$.

4. Solve for x
$\tan^{-1}\left(\frac{1-x}{1+x}\right) = \frac{1}{2}\tan^{-1} x, x > 0$
(A) 1 (B) $\frac{1}{\sqrt{3}}$ (C) $\sqrt{3}$ (D) -1
Ans : (B) $\frac{1}{\sqrt{3}}$

Expln :– $\tan^{-1}\left(\frac{1-x}{1+x}\right) = \frac{1}{2}\tan^{-1} x$

$\therefore 2\tan^{-1}\left(\frac{1-x}{1+x}\right) = \tan^{-1} x, x > 0$

Put $x = \tan\theta$. Then $\frac{1-x}{1+x} = \frac{1-\tan\theta}{1+\tan\theta} = \tan\left(\frac{\pi}{4}-\theta\right)$

$\therefore 2\tan^{-1}\tan\left(\frac{\pi}{4}-\theta\right) = \theta$

i.e., $2\left(\frac{\pi}{4}-\theta\right) = \theta \therefore \frac{\pi}{2} = 3\theta$ or $\theta = \frac{\pi}{6}$

$x = \tan\frac{\pi}{6} = \frac{1}{\sqrt{3}}$.

5. the system of linear equations $x + y + z = 6$, $x + 2y + 3z = 10$ and $x + 2y + az = b$ has no solutions when
(A) $a = 3, b \neq 10$ (B) $b = 3, a \neq 10$
(C) $a = 2, b \neq 3$ (D) $b = 2, a = 3$
Ans: (A) $a = 3, b \neq 10$
Expln:- $x + y + z = 6$
$x + 2y + 3z = 10$
$x + 2y + az = b$

$$\text{Let } A = \begin{pmatrix} 1 & 1 & 1 \\ 1 & 2 & 3 \\ 1 & 2 & a \end{pmatrix}, X = \begin{pmatrix} x \\ y \\ z \end{pmatrix}, B = \begin{pmatrix} 6 \\ 10 \\ b \end{pmatrix}$$

The matrix equation is $AX = B$.
If $|A| = 0$, $(\text{adj } A)B \neq 0$, then there exists no solution.

$$|A| = 0 \Rightarrow \begin{vmatrix} 1 & 1 & 1 \\ 1 & 2 & 3 \\ 1 & 2 & a \end{vmatrix} = 0. \text{ On expanding, we get } a = 3.$$

$$(\text{adj } A)\, B = \begin{pmatrix} 2a-6 & 2-a & 1 \\ 3-a & a-1 & -2 \\ 0 & -1 & 1 \end{pmatrix}\begin{pmatrix} 6 \\ 10 \\ b \end{pmatrix}$$

$\Rightarrow 12a - 36 + 20 - 10a + b \neq 0$
If $a = 3$, $-10 + b \neq 0 \Rightarrow b \neq 10$.

6. The value of $\tan(1^0) + \tan(89^0)$ is
(A) $\frac{2}{\sin(2^0)}$ (B) $\frac{1}{\sin(2^0)}$ (C) $\frac{1}{\sin(1^0)}$ (D) $\frac{2}{\sin(1^0)}$
Ans : (A) $\frac{2}{\sin(2^0)}$
Expln :– $\tan 1^0 + \tan 89^0 = \tan 1^0 + \tan(90^0 - 1^0) = \tan 1^0 + \cot 1^0$

6. The value of $\tan(1^0) + \tan(89^0)$ is
(A) $\frac{2}{\sin(2^0)}$ (B) $\frac{1}{\sin(2^0)}$
(C) $\frac{1}{\sin(1^0)}$ (D) $\frac{2}{\sin(1^0)}$
Ans : (A) $\frac{2}{\sin(2^0)}$
Expln :– $\tan 1^0 + \tan 89^0 = \tan 1^0 + \tan(90^0 - 1^0) = \tan 1^0 + \cot 1^0$

$$= \frac{\sin 1^0}{\cos 1^0} + \frac{\cos 1^0}{\sin 1^0} = \frac{\sin^2 1^0 + \cos^2 1^0}{\cos 1^0 \sin 1^0}$$
$$= \frac{1}{\sin 1^0 \cos 1^0} = \frac{1}{\frac{1}{2}\sin 2 \times 1^0} = \frac{2}{\sin 2^0}$$

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಮ್ಮ ಮನಸ್ಸಿನಲ್ಲಿ ತಾಯ್ತನ, ಮೆದುಳಿನಲ್ಲಿ ಮಗುತನ ಇರಬೇಕು. ಮಗುತನವೆಂದರೆ ಅಹಂಕಾರವಿಲ್ಲದ ಅರಿವಿನ ಆಸಕ್ತಿ. ತಾಯ್ತನವೆಂದರೆ ಸಮಾನತೆ ಮತ್ತು ಸೌಹಾರ್ದ.

-ಬರಗೂರು ರಾಮಚಂದ್ರಪ್ಪ

ಬಸ್ ಪ್ರಯಾಣ ದರ ಏರಿಕೆ ಸಮರ್ಥನೀಯವಲ್ಲ ಪರ್ಯಾಯ ಮಾರ್ಗೋಪಾಯ ಶೋಧಿಸಿ

ಜನಸಾಮಾನ್ಯರು ದೈನಂದಿನ ತಮ್ಮ ಓಡಾಟಕ್ಕೆ ನೆಚ್ಚಿಕೊಂಡಿರುವ ಬಸ್ ಪ್ರಯಾಣದ ದರವನ್ನು ಹೊಸ ವರ್ಷಾರಂಭದಲ್ಲೇ ಭಾರಿ ಪ್ರಮಾಣದಲ್ಲಿ ಏರಿಸುವ ಮೂಲಕ ರಾಜ್ಯ ಸರ್ಕಾರ ಬರೆ ಎಳೆದಿದೆ. ಆಹಾರಧಾನ್ಯ, ನಿತ್ಯಬಳಕೆ ವಸ್ತುಗಳು, ತರಕಾರಿ, ಮನೆ ಬಾಡಿಗೆ, ಹಾಲು ಹೀಗೆ ಎಲ್ಲದರ ಬೆಲೆಯೂ ಗಗನಮುಖಿಯಾಗಿದೆ. ಹೆಚ್ಚುತ್ತಿರುವ ವೆಚ್ಚಕ್ಕೆ ಅನುಗುಣವಾಗಿ ಬಹುಪಾಲು ಜನರ ಆದಾಯದಲ್ಲಿ ಹೆಚ್ಚಳ ಆಗುತ್ತಿಲ್ಲ. ಕೃಷಿಕರು, ಶ್ರಮಿಕ ವರ್ಗದವರು ಆದಾಯ-ವೆಚ್ಚ ಹೊಂದಿಸಿಕೊಳ್ಳಲಾಗದೆ ಸಂಕಟದಲ್ಲಿದ್ದಾರೆ. ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಸಿಲುಕಿದ್ದ ಜನಸಮುದಾಯವನ್ನು ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಸ್ವಲ್ಪಮಟ್ಟಿಗೆ ಸಂತೈಸಿದ್ದವು. ಬೆಲೆ ಏರಿಕೆಯ ಸಾಲಿಗೆ ಈಗ ಬಸ್ ಪ್ರಯಾಣ ದರವೂ ಸೇರಿಕೊಂಡಿದೆ. ಬೆಲೆ ಏರಿಕೆಯನ್ನು ತಡೆಯಬಹುದಾದ ಸಾಧ್ಯತೆಗಳ ಬಗ್ಗೆ ಗಮನವನ್ನೇ ಹರಿಸದ ರಸ್ತೆ ಸಾರಿಗೆ ನಿಗಮಗಳು ಪ್ರಯಾಣ ದರ ಏರಿಕೆಯ ಮೂಲಕ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹೇರಿರುವುದು ಜನವಿರೋಧಿ ಕ್ರಮ.

ದೇಶದಲ್ಲೇ ಅತ್ಯಂತ ಜನಸ್ನೇಹಿ ಹಾಗೂ ಉತ್ತಮ ಬಸ್ ಸೌಕರ್ಯ ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆ ಕರ್ನಾಟಕಕ್ಕೆ ಇದೆ. ಅದನ್ನು ಕಾಯ್ದುಕೊಳ್ಳಬೇಕು ಮತ್ತು ಇನ್ನಷ್ಟು ಉತ್ತಮಪಡಿಸುವ ಗುರಿ ಹೊಂದಿರಬೇಕು. ಆದರೆ ಅದಕ್ಕೆ ಪ್ರಯಾಣ ದರ ಏರಿಕೆಯೊಂದೇ ಮಾರ್ಗವಲ್ಲ. ಸಚಿವ ಸಂಪುಟದ ತೀರ್ಮಾನದಂತೆ ಎಲ್ಲ ಮಾದರಿಯ ಬಸ್‌ಗಳಲ್ಲಿನ ಪ್ರಯಾಣ ದರವನ್ನು ಶೇಕಡ 15ರಷ್ಟು ಏರಿಕೆ ಮಾಡಲಾಗಿದೆ, ಅದು ಜಾರಿಯೂ ಆಗಿದೆ. ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕೂ ಸಾರಿಗೆ ನಿಗಮಗಳಿಗೆ ಟಿಕೆಟ್ ಮಾರಾಟದಿಂದಾಗಿ ಪ್ರತಿ ತಿಂಗಳು ₹1,052 ಕೋಟಿ ವರಮಾನ ಬರುತ್ತಿತ್ತು. ದರ ಹೆಚ್ಚಳದ ಬಳಿಕ ₹74.52 ಕೋಟಿ ಹೆಚ್ಚುವರಿಯಾಗಿ ಲಭ್ಯವಾಗಲಿದೆ. ಕಳೆದ ಸಾಲಿನ ರಾಜ್ಯದ ಬಜೆಟ್ ಗಾತ್ರವು ₹3.71 ಲಕ್ಷ ಕೋಟಿಯಷ್ಟಿದ್ದು, ಈ ಬೃಹತ್ ಮೊತ್ತಕ್ಕೆ ಹೋಲಿಸಿದರೆ ಪ್ರಯಾಣ ದರ ಹೆಚ್ಚಳದಿಂದ ಲಭ್ಯವಾಗುವ ಸಂಪನ್ಮೂಲ ಅತ್ಯಲ್ಪ. 'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಿಗಮಗಳು ಮಾಡಿದ ಸಾಲ ಮತ್ತು ನೌಕರರಿಗೆ ನೀಡಬೇಕಾದ ವೇತನ ಮತ್ತು ಭತ್ಯೆಗಳ ಬಾಕಿಯೇ ₹5,900 ಕೋಟಿ ಇತ್ತು. ಬಿಜೆಪಿ ಆಡಳಿತ ಅವಧಿಯಲ್ಲಿ ಬಸ್ ಪ್ರಯಾಣ ದರವನ್ನು ಶೇ 47ರಷ್ಟು ಹೆಚ್ಚಳ ಮಾಡಲಾಗಿತ್ತು. ಬಿಎಂಟಿಸಿ ಬಸ್ ಪ್ರಯಾಣ ದರವನ್ನು ಹೆಚ್ಚಳ ಮಾಡದೇ 11 ವರ್ಷಗಳಾಗಿತ್ತು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ದರ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಹಿಂದೆ ದರ ಹೆಚ್ಚಳ ಮಾಡಿದಾಗ ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ಡೀಸೆಲ್‌ನ ಪ್ರತಿದಿನದ ಒಟ್ಟು ವೆಚ್ಚವು ₹9.16 ಕೋಟಿ ಇತ್ತು. ಈಗ ₹13.21 ಕೋಟಿಗೆ ಏರಿದೆ. ಈ ನಿಗಮಗಳು ಸಿಬ್ಬಂದಿಗಾಗಿ ಪ್ರತಿದಿನ ಮಾಡುವ ವೆಚ್ಚವು ಆಗ ₹12.85 ಕೋಟಿ ಇದ್ದದ್ದು, ಈಗ ₹18.36 ಕೋಟಿಗೆ ಹೆಚ್ಚಳವಾಗಿದೆ. ಅದನ್ನು ಸರಿದೂಗಿಸಲು ದರ ಹೆಚ್ಚಳ ಅನಿವಾರ್ಯವಾಗಿತ್ತು ಎಂಬ ಸಮರ್ಥನೆಯನ್ನೂ ಸರ್ಕಾರ ನೀಡಿದೆ. ಆಡಳಿತ ಪಕ್ಷದಲ್ಲಿ ಇದ್ದಾಗ ದರ ಏರಿಕೆಯನ್ನು ಸಮರ್ಥಿಸುವುದು, ವಿರೋಧ ಪಕ್ಷದಲ್ಲಿದ್ದಾಗ ವಿರೋಧಿಸುವ ಚಾಳಿಯನ್ನು ರಾಜಕೀಯ ಪಕ್ಷಗಳು ಮೈಗೂಡಿಸಿಕೊಂಡಿವೆ. ಇದಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಯಾವುದೂ ಹೊರತಲ್ಲ. ಇಂತಹ ಕಪಟ ನಾಟಕ ಆಡುವುದನ್ನು ರಾಜಕಾರಣಿಗಳು ಬಿಡಬೇಕು. ದರ ಪರಿಷ್ಕರಣೆ ಅನಿವಾರ್ಯವಾಗಿದ್ದಲ್ಲಿ ಆಯಾ ಕಾಲಕ್ಕೆ ಅದನ್ನು ಮಾಡಬೇಕು. ರಾಜಕೀಯ ಹಿತಾಸಕ್ತಿಗಾಗಿ ದರ ಪರಿಷ್ಕರಣೆಯನ್ನು ಮುಂದೂಡುತ್ತಾ ಬಂದು ಏಕಾಏಕಿ ದೊಡ್ಡ ಮಟ್ಟದಲ್ಲಿ ಹೇರಿಕೆ ಮಾಡುವುದು ಸರಿಯಾದ ನಡೆಯಲ್ಲ.

ಜನರ ಕೈಗೆಟಕುವ ದರದಲ್ಲಿ ಉತ್ತಮ ಸಾರಿಗೆ ಸೇವೆ ಒದಗಿಸುವುದು ಸಾರಿಗೆ ನಿಗಮಗಳ ಹೊಣೆ

ಆರೋಗ್ಯ, ಶಿಕ್ಷಣ, ಸಮೂಹ ಸಾರಿಗೆಯಂತಹ ವಲಯಗಳನ್ನು ಸರ್ಕಾರವು ಲಾಭ-ನಷ್ಟದ ದೃಷ್ಟಿಯಿಂದ ನೋಡಬಾರದು. ನಷ್ಟವಾಗುತ್ತಿದೆ ಎಂಬ ಕಾರಣ ಮುಂದಿಟ್ಟುಕೊಂಡು ದರ ಏರಿಸುವ ಬದಲು, ವೆಚ್ಚ ಕಡಿಮೆ ಮಾಡುವ ಮಾರ್ಗೋಪಾಯಗಳನ್ನು ಶೋಧಿಸುವುದು ಆದ್ಯತೆ ಆಗಬೇಕು. ಬಸ್ ಮತ್ತು ಯಂತ್ರೋಪಕರಣಗಳ ಖರೀದಿಯಲ್ಲಿ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು, ಸೋರಿಕೆಯನ್ನು ತಡೆಗಟ್ಟಬೇಕು. ಸಂಪನ್ಮೂಲ ಕ್ರೋಡೀಕರಣಕ್ಕೆ ಹೊಸ ದಾರಿಗಳನ್ನು ಕಂಡುಕೊಳ್ಳಬೇಕು. ಜನರ ಕೈಗೆಟಕುವ ದರದಲ್ಲಿ ಉತ್ತಮ ಸಾರಿಗೆ ಸೇವೆಯನ್ನು ಒದಗಿಸುವುದು ಸಾರಿಗೆ ನಿಗಮಗಳ ಹೊಣೆ.

ದಿನದ ಟ್ವೀಟ್

ನಿಯಮ ಉಲ್ಲಂಘನೆ ಮೇಲೆ ಹದ್ದಿನಕಣ್ಣು!

ಕರ್ನಾಟಕ ಪೊಲೀಸರು ಸಹ ಇಂತಹ ಕಾರ್ಯಕ್ರಮವನ್ನು ಆರಂಭಿಸಬೇಕು. ಯಾವುದಾದರೂ ಟ್ರಾಫಿಕ್ ಸಿಗ್ನಲ್ ಬಳಿ ನಿಂತು, ಸಂಚಾರ ನಿಯಮ ಉಲ್ಲಂಘಿಸುವವರ ಚಿತ್ರಗಳನ್ನು ಸೆರೆಹಿಡಿದು ಕಳಿಸುವ ಮೂಲಕ ನಾವು ಹೆಚ್ಚುವರಿ ಆದಾಯ ಗಳಿಸಬಹುದು. ಇದರಿಂದ ಸರ್ಕಾರ ಮತ್ತು ವ್ಯಕ್ತಿ ಇಬ್ಬರಿಗೂ ಅನುಕೂಲವಾಗುತ್ತದೆ. ಹೌದಲ್ಲವೇ?

(ವಿಯೆಟ್ನಾಂನಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರ ಚಿತ್ರ ಸೆರೆಹಿಡಿದು ಕಳಿಸುವ ಮೂಲಕ ನಾಗರಿಕರು ಹಣ ಗಳಿಸಬಹುದಾದ ಯೋಜನೆ ಜಾರಿಗೆ ಬಂದಿರುವುದಕ್ಕೆ ಪ್ರತಿಕ್ರಿಯೆ)

ನಾಗಭೂಷಣ್

ಕಿಡಿನುಡಿ

ಹೆದ್ದಾರಿಗಳ ಅಭಿವೃದ್ಧಿಗೆ ಅನುದಾನ ಒದಗಿಸುವಂತೆ ಹಿಂದಿನಿಂದಲೂ ಬೇಡಿಕೆ ಇತ್ತು. ಅದರಂತೆ ಈಗ ಅನುದಾನ ಬಿಡುಗಡೆ ಆಗುತ್ತಿದೆ. ಅದನ್ನೇ, 'ನಾನು ವಿಶೇಷ ಯೋಜನೆಯಡಿ ತಂದೆ' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳುತ್ತಾರೆ.

ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

25 ವರ್ಷಗಳ ಹಿಂದೆ

ಗುರುವಾರ, 6-1-2000

- **ವಿಮಾನ ಅಪಹರಣ: ಭಾರತ ಬಿಟ್ಟ ಉಗ್ರರು ಪಾಕ್‌ನಲ್ಲಿ**

ಕರಾಚಿ, ಜ. 5 (ಎಎಫ್‌ಪಿ)– ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣ ಪ್ರಕರಣದಲ್ಲಿ ಭಾರತ ಬಿಡುಗಡೆ ಮಾಡಿದ ಉಗ್ರಗಾಮಿಗಳಾದ ಮೌಲಾನಾ ಮಸೂದ್ ಅಜರ್ ಮತ್ತು ಮುಷ್ತಾಕ್ ಝರ್ಗರ್ ಪಾಕಿಸ್ತಾನದಲ್ಲಿ ಕಂಡು ಬಂದಿರುವುದಾಗಿ ವರದಿಯಾಗಿದೆ.

ವಿಮಾನ ಅಪಹರಣಕಾರರು ಮತ್ತು ಬಿಡುಗಡೆ ಹೊಂದಿರುವ ಉಗ್ರಗಾಮಿಗಳು ಪಾಕಿಸ್ತಾನದಲ್ಲಿ ಇರುವುದಾಗಿ ಭಾರತ ಪ್ರತಿಪಾದಿಸಿದಾಗ ಪಾಕಿಸ್ತಾನ ಅಲ್ಲಗಳೆದಿದ್ದನ್ನು ಇಲ್ಲಿ ಸ್ಮರಿಸಬಹುದು. ತನ್ನ ಗಡಿಯಲ್ಲಿ ಈ ಅಪಹರಣಕಾರರು ಕಂಡುಬಂದಲ್ಲಿ ಅಂತರರಾಷ್ಟ್ರೀಯ ಕಾನೂನಿನನ್ವಯ ಕ್ರಮ ಜರುಗಿಸುವುದಾಗಿಯೂ ಪಾಕಿಸ್ತಾನ ಭರವಸೆ ನೀಡಿತ್ತು.

- **ಶಿಕ್ಷಣದಲ್ಲಿ ಕಂಪ್ಯೂಟರ್ ವರದಿಗೆ ಕಾರ್ಯತಂಡ**

ಬೆಂಗಳೂರು, ಜ. 5– ಉನ್ನತ ಶಿಕ್ಷಣದಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಜಾರಿಗೊಳಿಸಲು ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪರಿಣತರನ್ನೊಳಗೊಂಡ ಕಾರ್ಯತಂಡವನ್ನು ರಚಿಸಿದೆ.

ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಂಪ್ಯೂಟರ್ ಉನ್ನತ ಅಧ್ಯಯನ ಅಭಿವೃದ್ಧಿ ಕೇಂದ್ರದ (ಸಿ-ಡಾಕ್) ನಿರ್ದೇಶಕ ಪ್ರೊ. ಎನ್. ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಈ ಕಾರ್ಯತಂಡದಲ್ಲಿ ಅಮೆರಿಕದ ಲೂಸಿಯಾನ ಸ್ಟೇಟ್ ವಿಶ್ವವಿದ್ಯಾಲಯದ ಪ್ರೊ. ಎಸ್. ಸೀತಾರಾಂ ಅಯ್ಯಂಗಾರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್. ರಾಜಶೇಖರಯ್ಯ, ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಪ್ರೊ. ಶಿವಶಂಕರ್, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಎಲ್.ಎಂ. ಪಟ್ನಾಯಕ್ ಮತ್ತು ಸಿಎಸ್‌ಐ, ವಿಪ್ರೊ, ಇನ್ಫೊಸಿಸ್ ಹಾಗೂ ಮೋಟೊರೋಲಾ ಸಂಸ್ಥೆಗಳ ಪ್ರತಿನಿಧಿಗಳು ಸದಸ್ಯರಾಗಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 6-1-1975

- **ಮುಖ್ಯಮಂತ್ರಿಗೆ ಸದಸ್ಯರ ತರಾಟೆ**

ಹುಬ್ಬಳ್ಳಿ, ಜ. 5– ಯಾರಿಗೂ ಗೊತ್ತಿಲ್ಲದ ಮುಖಗಳು ಸಚಿವ ಸಂಪುಟಕ್ಕೆ ಬಂದಿವೆ. ಅದರಿಂದ ನಮ್ಮ ಮಂತ್ರಿಮಂಡಲ ಏನು ಸಾಧನೆ ಮಾಡಲಾಗುತ್ತೆ? ಎಂದು ಕೆಪಿಸಿಸಿ ಸಭೆಯಲ್ಲಿ ಸಂಸತ್ ಸದಸ್ಯ ಎಸ್.ಬಿ.ಪಾಟೀಲ್ ಅವರು ಮುಖ್ಯಮಂತ್ರಿ ದೇವರಾಜ ಅರಸು ಅವರನ್ನು ನೇರವಾಗಿ ಕೇಳಿದರು.

ಮುಖ್ಯಮಂತ್ರಿ ಅವರು ಮಂಡಿಸಿದ ಆರ್ಥಿಕ ಪರಿಸ್ಥಿತಿ ನಿರ್ಣಯವನ್ನು ಅನುಮೋದಿಸಿದ ಪಾಟೀಲ್ ಅವರು, 'ನಿಮ್ಮ ಮಂತ್ರಿಮಂಡಲದಲ್ಲೇ ಇದ್ದು, ಸರ್ಕಾರವನ್ನು ಟೀಕಿಸಿ ಪತ್ರಿಕೆಗಳಿಗೆ ಹೇಳಿದರೆ ನೀವೇನು ಮಾಡುತ್ತಿದ್ದಿರಿ?' ಎಂದು ಖಾರವಾಗಿ ಕೇಳಿ 'ಶಾಸಕರು, ಸಂಸತ್ ಸದಸ್ಯರು ಏನಾದರೂ ಅಂದರೆ ರಾಜಕೀಯ ಬಣ್ಣ ಕಟ್ಟುವುದು ಸರಿಯಲ್ಲ' ಎಂದರು.

'ಮಂತ್ರಿಮಂಡಲಕ್ಕೆ ಸದಸ್ಯರನ್ನು ತೆಗೆದುಕೊಳ್ಳುವಾಗ ದಕ್ಷತೆ, ಸಾಮರ್ಥ್ಯ ನೋಡದೆ ಆ ಜಾತಿ, ಈ ಜಾತಿ ಅಂತ ನೋಡಿ, ಅರ್ಹತೆ ಇದೆಯೇ ಅಂತ ಯೋಚನೆ ಮಾಡದಿರುವ ಪ್ರವೃತ್ತಿ ಸರಿಯಲ್ಲ' ಎಂದು ಡಿ. ರಾಜಗೋಪಾಲ್ ಟೀಕಿಸಿದರೆ, 'ಆಡಳಿತ ಯಂತ್ರದ ದೋಷ ಸರಿಪಡಿಸದೆ ಅಧಿಕಾರಿಗಳನ್ನು ವಹಿಸಿಕೊಳ್ಳುವ ರೀತಿ ಸರಿಯಲ್ಲ' ಎಂದು ಕೆ.ಎನ್. ವೀರಪ್ಪಗೌಡರು ಆಕ್ಷೇಪಿಸಿದರು. 'ಮುಖ್ಯಮಂತ್ರಿಯಂತಹ ದಕ್ಷ, ನಿಷ್ಠಾವಂತ ವ್ಯಕ್ತಿಯ ಸುತ್ತಲೂ ಚಾಡಿಕೋರರು ತುಂಬಿ ಅವರ ದಕ್ಷತೆ ಹಾಳುಮಾಡಿದ್ದಾರೆ' ಎಂದು ದಯಾನಂದ ಸಾಗರ್ ವಿಷಾದಿಸಿದರು.

ಪಶುಪಾಲಕರ ಬಗ್ಗೆಯೂ ಮಾಹಿತಿ ಕಲೆಹಾಕುತ್ತಿರುವುದು ಈ ಬಾರಿಯ ವಿಶೇಷ

ಜಾನುವಾರು ಗಣತಿ ಏಕೆ? ಹೇಗೆ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ದೇಶದಾದ್ಯಂತ ಜಾನುವಾರು ಗಣತಿ ನಡೆಯುತ್ತಿದೆ. 1919ರಲ್ಲಿ ಮೊದಲ ಬಾರಿಗೆ ಶುರುವಾದ ಜಾನುವಾರು ಗಣತಿಯು ಪ್ರತಿ ಐದು ವರ್ಷಗಳಿಗೊಮ್ಮೆ ನಡೆಯುತ್ತಾ ಬಂದಿದ್ದು, ಈಗ 21ನೇ ಜಾನುವಾರು ಗಣತಿಯು 22 ರಾಜ್ಯಗಳಲ್ಲಿ ಅಕ್ಟೋಬರ್ ತಿಂಗಳಿನಿಂದ ಪ್ರಾರಂಭಗೊಂಡಿದೆ. ಈ ಗಣತಿಯು ಹಿಂದಿನ ಎಲ್ಲಾ ಜಾನುವಾರು ಗಣತಿಗಳಿಗಿಂತ ಅತ್ಯಂತ ವಿಶೇಷವೆನಿಸಿದ್ದು, ಪಶುಸಂಗೋಪನೆಯಲ್ಲಿ ತೊಡಗಿರುವ ಪಶುಪಾಲಕರ ಸಂಖ್ಯೆ ಎಷ್ಟು ಎಂಬುದನ್ನು ಪ್ರಥಮ ಬಾರಿಗೆ ಲೆಕ್ಕ ಹಾಕಲಿದೆ.

ಹೊಸದಾಗಿ ರೂಪಿಸಲಾಗಿರುವ ಮೊಬೈಲ್ ಆ್ಯಪ್ ಮೂಲಕ ನಡೆಯುತ್ತಿರುವ ಗಣತಿ ಕಾರ್ಯದಲ್ಲಿ ಎಮ್ಮೆ, ಕೋಣ, ಎತ್ತು, ಒಂಟೆ, ಕುದುರೆ, ಕುರಿ, ಕೋಳಿ, ಯಾಕ್, ಆಡು, ಕತ್ತೆ, ನಾಯಿ, ಮೊಲ, ಆನೆ, ಪೌಲ್ಟ್ರಿ ಕೋಳಿ, ಹುಂಜ, ಬಾತುಕೋಳಿ, ಎಮು, ಆಸ್ಟ್ರಿಚ್, ಮಿಥುನ್ (ಈಶಾನ್ಯ ಭಾರತದ ಎಮ್ಮೆತಳಿ), ಹಂದಿ, ಹೇಸರಗತ್ತೆ, ಚಮರೀಮೃಗ, ಸಣ್ಣಕುದುರೆ, ಆಕಳು ಮತ್ತು ಹೋರಿಗಳ ಸಂಖ್ಯೆಯನ್ನು ಲೆಕ್ಕ ಹಾಕಲು, ತರಬೇತಿ ಪಡೆದ ಒಂದು ಲಕ್ಷ ಸಿಬ್ಬಂದಿ ಮನೆಮನೆಗೂ ಭೇಟಿ ನೀಡಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಮೊದಲ ಬಾರಿಗೆ ಪಶುಪಾಲಕರ ಗಣತಿಗೆ ಮುಂದಾಗಿರುವ ಕೇಂದ್ರ ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ದೇಶದ 35 ನಾಗರಿಕ ಸೇವಾ ಸಂಘಟನೆಗಳೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿದೆ. ಅಭಿವೃದ್ಧಿ ಯೋಜನೆಗಳನ್ನು ರೂಪಿಸುವವರು ಇದುವರೆಗೆ ಮರೆತಿದ್ದ ಬೃಹತ್ ಸಮುದಾಯವನ್ನು ಜಾನುವಾರು ಗಣತಿಯಲ್ಲಿ ಸೇರಿಸಿರುವುದು ಆರ್ಥಿಕ ತಜ್ಞರಿಂದ ಪ್ರಶಂಸೆ ಪಡೆದಿದೆ. ಜೊತೆಗೆ ದೇಶದ ಜಿಡಿಪಿಗೆ ಶೇಕಡ 3ರಷ್ಟು ಕೊಡುಗೆ ನೀಡುತ್ತಿರುವ ಪಶುಸಂಗೋಪನಾ ವ್ಯವಸ್ಥೆಯ ಬಗ್ಗೆ ಇಷ್ಟು ವರ್ಷ ಗಮನ ನೀಡದೇ ಇದ್ದುದು ಅತ್ಯಂತ ದೊಡ್ಡ ತಪ್ಪು ಎಂಬ ಮಾತು ಜೋರಾಗಿ ಕೇಳಿಬಂದಿದೆ.

ಈ ಮಹತ್ವಾಕಾಂಕ್ಷೆಯ ಯೋಜನೆಯಲ್ಲಿ ಜಾನುವಾರು ಗಣತಿಯ ಜೊತೆಗೆ, ಪಶುಪಾಲಕರಲ್ಲಿ ಪುರುಷರೆಷ್ಟು ಮಹಿಳೆಯರೆಷ್ಟು, ಪಶುಪಾಲನೆಗೆ ಬೇಕಾದ ಮೂಲಭೂತ ಅಗತ್ಯಗಳೇನು, ವರ್ಷದ ಯಾವ ಋತುವಿನಲ್ಲಿ ಪಶುವಲಸೆ ನಡೆಯುತ್ತದೆ, ಎಂಥೆಂಥ ಪ್ರದೇಶಗಳಲ್ಲಿ ಮೇವು ದೊರಕುತ್ತದೆ ಎಂಬುದು ಪಶುಪಾಲಕರಿಗೆ ಹೇಗೆ ತಿಳಿಯುತ್ತದೆ ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆಯುತ್ತಿದೆ. ಪಶುಪಾಲಕರು ತಮ್ಮ ಸಾಕು-ಪ್ರಾಣಿಗಳಿಗೆ ಆಹಾರ ಒದಗಿಸಲು ವರ್ಷವೊಂದಕ್ಕೆ ಎಷ್ಟು ಕಿಲೊಮೀಟರ್ ಸಂಚರಿಸುತ್ತಾರೆ, ಸಂಚರಿಸುವ ದಾರಿಯಲ್ಲಿ ಕುರಿ-ಮೇಕೆ ಹಾಕುವ ಹಿಕ್ಕೆ, ಪಶುಗಳು ಹಾಕುವ ಸಗಣಿಯ ಪ್ರಮಾಣವೆಷ್ಟು, ಹೊಮ್ಮಿಸುವ ಮೀಥೇನ್ ಅನಿಲದ ಪ್ರಮಾಣ ಎಷ್ಟು ಎಂಬುದರ ಬಗ್ಗೆ ನಿಖರ ಅಧ್ಯಯನಗಳಾಗಿಲ್ಲ. ಜಾನುವಾರು ಗಣತಿ ನಡೆಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿ, ಗಣತಿಯ ಕ್ರಮದ ಕುರಿತು ಅಗತ್ಯ ತರಬೇತಿ ನೀಡಲಾಗಿದೆ. ರಾಜ್ಯ ಸಮಿತಿಯಲ್ಲಿ ಪಶುಸಂಗೋಪಕರ ಪ್ರತಿನಿಧಿಯೊಬ್ಬರು ಇರುತ್ತಾರೆ. ಜಿಲ್ಲಾವಾರು ಸಮೀಕ್ಷೆಯ ಮುಖ್ಯಸ್ಥರು ಗಣತಿಕಾರರನ್ನು ನಿರಂತರವಾಗಿ ಸಂಪರ್ಕದಲ್ಲಿ ಇರಿಸಿಕೊಂಡು, ವಾರದ ಯಾವ ಯಾವ ದಿನ ಊರಿನಲ್ಲಿ ಪಶುಪಾಲಕರು ಹಾಗೂ ಪಶುಗಳ ಸಂಖ್ಯೆ ಹೆಚ್ಚಾಗಿರುತ್ತದೆ ಎಂಬ ಮಾಹಿತಿ ನೀಡಿ ಗಣತಿ ಕಾರ್ಯಕ್ಕೆ ನೆರವಾಗುತ್ತಾರೆ. ಪಶುಪಾಲಕರನ್ನು ಸಮಾಜದ ಯಾವ ವರ್ಗಕ್ಕೆ ಸೇರಿಸುವುದು ಎಂಬ ಬಗ್ಗೆ ಗೊಂದಲಗಳಿದ್ದುದರಿಂದ ಅವರ ಗಣತಿ ವಿಳಂಬವಾಯಿತು ಎಂಬ ಮಾತಿದೆ. ಈಗ ಪಶುಪಾಲಕರನ್ನು ಸಾಂಪ್ರದಾಯಿಕ ಸಮುದಾಯವೆಂದು ಪರಿಗಣಿಸಲಾಗಿದೆ. ಗಣತಿಯ ಜೊತೆ ಜೊತೆಗೆ ಪಶುಗಳ ಜೀವ ಮತ್ತು ಆರೋಗ್ಯ ವಿಮೆಯ ಕಡೆಗೂ ಗಮನ ಹರಿಸಲಾಗುತ್ತಿರುವುದು ಶ್ಲಾಘನೀಯ ಸಂಗತಿಯೇ ಸರಿ.

ಅತ್ಯವಶ್ಯವಾದ ಜನಗಣತಿಯು 2021ರಲ್ಲಿ ನಡೆಯಬೇಕಿತ್ತು. ಅದನ್ನು ಮಾಡಲು ಇನ್ನೂ ಸಾಧ್ಯವಾಗಿಲ್ಲ. ಈ ನಡುವೆ ಜಾನುವಾರು ಗಣತಿಗೆ ಏಕೆ ಇಷ್ಟೊಂದು ಮಹತ್ವ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ. ಅದಕ್ಕೆ ಕಾರಣ ಇದೆ. ಪ್ರಮುಖವಾಗಿ ಪ್ರಾಣಿಗಳಿಗೆ ಆಹಾರ ಅರಸಿ ಪ್ರತಿವರ್ಷ ಬೃಹತ್ ಸಂಖ್ಯೆಯ ಪಶುಪಾಲಕರು ನಿಯಮಿತವಾಗಿ ತಮ್ಮ ಪ್ರಾಣಿಗಳೊಂದಿಗೆ ದೇಶದ ಒಂದು ಭೌಗೋಳಿಕ ಪರಿಸರದಿಂದ ಇನ್ನೊಂದಕ್ಕೆ ವಲಸೆ ಹೋಗುತ್ತಾರೆ. ಹಲವಾರು ವರ್ಷಗಳಿಂದ ಈ ಕೆಲಸದಲ್ಲಿ ನಿರತರಾಗಿರುವ ಜನರನ್ನು ಮುಖ್ಯವಾಹಿನಿಗೆ ಸೇರಿಸಿಕೊಳ್ಳುವ ಯಾವ ಪ್ರಯತ್ನವೂ ಇದುವರೆಗೆ ನಡೆದಿರಲಿಲ್ಲ. ದೇಶದ ಹೈನುಗಾರಿಕೆ, ಮಾಂಸೋದ್ಯಮ ಮತ್ತು ವಾಯುಗುಣ ಏರಿಳಿತಕ್ಕೆ ತನ್ನದೇ ಕೊಡುಗೆ ನೀಡುತ್ತಿರುವ ಪಶುಪಾಲಕರ ಕುರಿತು ಯಾವುದೇ ಖಚಿತ ಮಾಹಿತಿ ನಮ್ಮಲ್ಲಿ ಈಗಲೂ ಇಲ್ಲ.

ಪಶುಗಳು ಮೇಯುವ ಜಾಗಗಳಲ್ಲಿ ಹೊಸ ಹುಲ್ಲು ಹುಟ್ಟುತ್ತದೆ. ಅದು ಶಾಖವರ್ಧಕ ಅನಿಲವಾದ ಇಂಗಾಲದ ಡೈಆಕ್ಸೈಡ್ ಅನ್ನು ನೈಸರ್ಗಿಕವಾಗಿ ಹಿಡಿದಿಟ್ಟುಕೊಂಡು ವಾಯುಗುಣ ಏರುಪೇರು ನಿಯಂತ್ರಣಕ್ಕೆ ದೊಡ್ಡ ಕೊಡುಗೆ ನೀಡುತ್ತದೆ ಎಂಬುದು ಪರಿಸರ ವಿಶ್ಲೇಷಕರ ವಾದ. ಹುಲ್ಲುಗಾವಲುಗಳು ದೊಡ್ಡ ಕಾರ್ಬನ್ ಸಿಂಕ್‌ಗಳಂತೆ ಕೆಲಸ ಮಾಡುವುದು ನಮಗೆ ಗೊತ್ತೇ ಇದೆ. ವಾಸ್ತವದಲ್ಲಿ ನೂರಾರು ದನ- ಕುರಿಗಳು ಮೇಯುವುದರಿಂದ ವಾರ್ಷಿಕ ಶೇಕಡ 35ರಷ್ಟು ಮಣ್ಣಿನ ಸವಕಳಿ ಆಗುತ್ತದೆ ಎಂಬ ವರದಿ ಇದೆ. ಹಿಂದಿನ ಶತಮಾನದ ಕೊನೆಯಲ್ಲಿ ಪಶ್ಚಿಮ ಘಟ್ಟದ ಪ್ರದೇಶಗಳ ಬಳಿ ಕುರಿಗಾಹಿಗಳು ಸಾವಿರಾರು ಕುರಿಗಳನ್ನು ಮೇಯಿಸಲು ಬರುವುದನ್ನು ಪರಿಸರಪ್ರೇಮಿಗಳು ತೀವ್ರವಾಗಿ ವಿರೋಧಿಸುತ್ತಿದ್ದರು. ಒಂದೆಡೆ, ಶೇ 14.6ರಷ್ಟು ಶಾಖವರ್ಧಕ ಅನಿಲಗಳನ್ನು ಹೊಮ್ಮಿಸಿ ಭೂಮಿಯ ಬಿಸಿ ಏರಿಸುವ ಜಾನುವಾರುಗಳು, ಇನ್ನೊಂದೆಡೆ, ತಮ್ಮ ಸಗಣಿ ಮತ್ತು ಗಂಜಲದಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುತ್ತವೆ.

2019ರಲ್ಲಿ ಜರುಗಿದ ಗಣತಿಯಲ್ಲಿ, ಆಗ ದೇಶದಲ್ಲಿ 53.67 ಕೋಟಿ ಜಾನುವಾರುಗಳಿವೆ ಎಂಬ ಮಾಹಿತಿ ದೊರಕಿತ್ತು. 51.41 ಕೋಟಿ ಜಾನುವಾರುಗಳು ಗ್ರಾಮೀಣ ಪ್ರದೇಶದಲ್ಲಿದ್ದರೆ 2.26 ಕೋಟಿ ಜಾನುವಾರುಗಳು ನಗರ ಪ್ರದೇಶಗಳಲ್ಲಿ ಇವೆ. ಒಟ್ಟು ದನಗಳ ಪೈಕಿ 5.13 ಕೋಟಿ ದೇಸಿ ತಳಿ ಮತ್ತು 14.2 ಕೋಟಿ ಹೈಬ್ರಿಡ್ ತಳಿಗಳಿವೆ. 19.34 ಕೋಟಿ ದನ, 10.98 ಕೋಟಿ ಎಮ್ಮೆ, 7.5 ಕೋಟಿ ಕುರಿ, 14.8 ಕೋಟಿ ಆಡು, 1.5 ಕೋಟಿ ಬೀದಿನಾಯಿ, 90 ಲಕ್ಷ ಹಂದಿ, 3.5 ಲಕ್ಷ ಕುದುರೆ, 2.5 ಲಕ್ಷ ಒಂಟೆ... ಹೀಗೆ 16 ಪ್ರಭೇದಗಳಿಗೆ ಸೇರಿದ ಜಾನುವಾರುಗಳು ದೇಶದಲ್ಲಿವೆ. ಹತ್ತು ವರ್ಷಗಳಲ್ಲಿ ಜಾನುವಾರುಗಳ ಸಂಖ್ಯೆ ಶೇ 4.6ರ ಪ್ರಮಾಣದ ಏರಿಕೆ ಕಂಡಿದೆ.

ಮನೆಗಳಲ್ಲಿ ಸಾಕಲಾಗಿರುವ ಪ್ರಾಣಿಗಳ ಗಣತಿ ಮಾಡುವುದು ಸುಲಭ. ಸದಾ ವಲಸೆಯಲ್ಲಿರುವ ಪ್ರಾಣಿಗಳನ್ನು ಹೇಗೆ ಎಣಿಕೆ ಮಾಡಲಾಗುತ್ತದೆ ಎಂಬ ಬಗ್ಗೆ ಕುತೂಹಲವಿದೆ. ಅದಕ್ಕಾಗಿ ಸರ್ಕಾರವು ನಾಗರಿಕ ಸಂಘಟನೆಗಳಾದ ಸಹಜೀವನ್, ಸೆಂಟರ್ ಫಾರ್ ಪ್ಯಾಸ್ಟೋರಲಿಸಂ, ವಾಟರ್‌ಶೆಡ್ ಸಪೋರ್ಟ್ ಸರ್ವಿಸಸ್ ಆ್ಯಂಡ್ ಆ್ಯಕ್ಟಿವಿಟೀಸ್ ನೆಟ್‌ವರ್ಕ್ (ವಾಸನ್), ಫೌಂಡೇಷನ್ ಫಾರ್ ಎಕಲಾಜಿಕಲ್ ಸೆಕ್ಯೂರಿಟಿ (ಎಫ್‌ಇಎಸ್) ಹಾಗೂ ಹಲವು ಗ್ರಾಮೀಣ ಯುವಕರ ಸಂಘಟನೆಗಳೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿದೆ. ಯಾವುದೇ ಹಂತ ಮತ್ತು ರೀತಿಯಲ್ಲೂ ಗ್ರಾಮ ಪಂಚಾಯಿತಿಗಳನ್ನು ಬಳಸಿಕೊಳ್ಳದೆ ನೇರವಾಗಿ ಪಶು ಚಿಕಿತ್ಸಾಲಯದ ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗೆ ಜಾನುವಾರು ಗಣತಿಯ ಅಧಿಕಾರ ವಹಿಸಲಾಗಿದೆ.

ಇನ್ನು ಮುಂದೆ ಪಶುಸಂಗೋಪನಾ ಇಲಾಖೆ ಕೈಗೊಳ್ಳುವ ಪ್ರತಿ ಯೋಜನೆಯೂ ಪಶುಪಾಲಕರನ್ನು ಗಮನದಲ್ಲಿ ಇರಿಸಿಕೊಂಡು ರೂಪುಗೊಳ್ಳುತ್ತದೆ ಎಂಬ ನಿರ್ಧಾರವು ಇಲಾಖೆಯ ಅಭಿವೃದ್ಧಿ ಕೆಲಸಗಳಿಗೆ ಹೊಸ ದಿಕ್ಸೂಚಿಯಾಗಲಿದೆ. ಜಾನುವಾರು ಪೋಷಣೆ ಮಾಡುವವರ ಒಟ್ಟು ಸಂಖ್ಯೆ ಎಷ್ಟು ಎಂಬ ಖಚಿತ ಮಾಹಿತಿಯ ಸಲುವಾಗಿ ದೇಶವ್ಯಾಪಿ ಕಾರ್ಯಕ್ರಮ ರೂಪಿಸಿರುವ ಕೇಂದ್ರ ಸರ್ಕಾರವು ದೇಶದ ಯಾವ ಯಾವ ಭಾಗಗಳಲ್ಲಿ ಪಶುಪಾಲನೆ ಸಮರ್ಪಕವಾಗಿ ನಡೆಯುತ್ತಿದೆ ಎಂಬುದನ್ನು ಪತ್ತೆಹಚ್ಚಲು ನಿರ್ಧರಿಸಿದೆ. ಹಾಲಿನ ಉತ್ಪನ್ನ ಮತ್ತು ಮಾಂಸ ಎರಡಕ್ಕೂ ದೊಡ್ಡ ಮಾರುಕಟ್ಟೆ ಸೃಷ್ಟಿಸಿರುವ ಜಾನುವಾರುಗಳು ಅತಿಹೆಚ್ಚಿನ ಶಾಖವರ್ಧಕ ಅನಿಲವಾದ ಮೀಥೇನನ್ನು ವಾತಾವರಣಕ್ಕೆ ಹೊಮ್ಮಿಸುತ್ತಿರುವುದು ಪರಿಸರ ವಿಜ್ಞಾನಿಗಳ ನಿದ್ದೆಗೆಡಿಸಿದೆ.

ಸಂತಾನೋತ್ಪತ್ತಿಯ ಅವಧಿ ಮೀರಿದ ಮತ್ತು ಕಾಯಿಲೆ ಬಿದ್ದಿರುವ ಜಾನುವಾರುಗಳನ್ನು ಗೋಶಾಲೆಗಳಲ್ಲಿ ನೋಡಿಕೊಳ್ಳಲಾಗುತ್ತದೆಯಾದರೂ ಅವುಗಳ ಸಂಖ್ಯೆ ಒಟ್ಟು ಜಾನುವಾರುಗಳ ಸಂಖ್ಯೆಯ ಎದುರು ಅತ್ಯಂತ ಕಡಿಮೆಯೆ. ದನದ ಮಾಂಸ ಮಾರಾಟವು ದೇಶದ ಎಲ್ಲಾ ರಾಜ್ಯಗಳಲ್ಲಿ ನಿಷೇಧಗೊಂಡಿಲ್ಲವಾದ್ದರಿಂದ ಬೃಹತ್ ಸಂಖ್ಯೆಯ ಜಾನುವಾರುಗಳು ಕಸಾಯಿಖಾನೆ ಸೇರುತ್ತಿರುವುದು ಸುಳ್ಳಲ್ಲ.

ಚುರುಮುರಿ

ಭೂಮಿ ಯಾರದು?

• ಸುಮಂಗಲಾ

'ಈ ಭೂಮಿ ಮ್ಯಾಗೆ ಎಲ್ಲಿ ನೋಡಿದ್ರೂ ಮನುಷ್ಯತ್ವವಿಲ್ಲದ ಮನುಷ್ಯಾರೇ ತುಂಬ್ಯಾರೆ' ಎಂದು ಬೆಕ್ಕಣ್ಣ ಧುಸುಮುಸು ಮಾಡಿತು.

'ಎಲ್ಲಾ ಕಡಿಗೆ ಎಲ್ಲದಾರೆ? ಅಂಟಾರ್ಕ್ಟಿಕಾದಂತಹ ಧ್ರುವಪ್ರದೇಶಗಳಲ್ಲಿ ಮನಷ್ಯಾರು ಇಲ್ಲ, ಬರೀ ಹಿಮ ತುಂಬೈತಿ' ಎಂದೆ.

'ಹೊಸ ವರ್ಷದ ಆರಂಭದಲ್ಲೇ ವಿಶ್ವದ ಜನಸಂಖ್ಯೆ 8.09 ಬಿಲಿಯನ್ ಅಂದ್ರ 809 ಕೋಟಿ ಆಗೈತಂತೆ. ಅದ್ರಾಗೆ ಭಾರತದ ಜನಸಂಖ್ಯೆ 144 ಕೋಟಿ' ಎಂದು ಸುದ್ದಿ ತೋರಿಸಿತು.

'ಹ್ಞೂಂ ಮತ್ತೆ... ನಾವು ಅಭಿವೃದ್ಧಿವಳಗೆ, ಜಿಡಿಪಿವಳಗೆ ಚೀನಾನ ಹಿಂದಿಕ್ಕದಿದ್ದರೂ ಜನಸಂಖ್ಯೆವಳಗೆ ಹಿಂದಿಕ್ಕೀವಿ. ಅವರದ್ದು 142 ಕೋಟಿ' ಎಂದೆ.

'ನಿಮ್ಮ ಜನಸಂಖ್ಯೆ ಹೆಚ್ಚು ಮಾಡಿಕೋತ ಹೊಂಟೀರಿ. ಬೆನ್ನೆಲುಬು ಇರೋ ನಮ್ಮಂಥ ಕಶೇರುಕ ಪ್ರಾಣಿಗಳ ಸಂಖ್ಯೆ ಹಿಂದಿನ ಐವತ್ತು ವರ್ಷಗಳಲ್ಲಿ 73 % ಕುಸಿದೈತಿ. ಇನ್ನು ಬೆನ್ನೆಲುಬಿಲ್ಲದ ಅವೆಷ್ಟೋ ಪ್ರಾಣಿಗಳನ್ನು ಈ ಭೂಮಿಯಿಂದಲೇ ಮಾಯ ಮಾಡೀರಿ' ಬೆಕ್ಕಣ್ಣ ಅಂಕಿಸಂಖ್ಯೆ ಮುಂದಿಟ್ಟಿತು.

'ಝೂವಳಗೆ, ನ್ಯಾಷನಲ್ ಪಾರ್ಕುಗಳೊಳಗೆ ಪ್ರಾಣಿಗಳ ಸಂರಕ್ಷಣೆ ಮಾಡಾಕೆ ಹತ್ತೀವಲ್ಲ'. ನನ್ನ ವಾದವನ್ನು ಕಿವಿಗೆ ಹಾಕಿಕೊಳ್ಳದ ಬೆಕ್ಕಣ್ಣ ಮತ್ತೆ ಗುರುಗುಟ್ಟಿತು. 'ಇಷ್ಟಲ್ಲದೇ ಮೂರು-ನಾಕು ಮಕ್ಕಳನ್ನ ಮಾಡಿಕೋರಿ ಅಂತ ಮಠಗಳ ಸ್ವಾಮಿಗೋಳು, ಭಾಗವತರು, ರಾಜಕೀಯ ಪುಢಾರಿಗಳು ಅವರವರ ಜಾತಿ ಮಂದಿಗೆ ಬುದ್ಧಿವಾದ ಹೇಳತಾರೆ. ಹಿಂಗೇ ಆದರೆ ಈ ದೇಶದಾಗೆ ಕಾಲೂರಕ್ಕೆ ಯಾರಿಗೂ ಜಾಗ ಇರಂಗಿಲ್ಲ. ಈ ಭೂಮಿ ಮನುಷ್ಯರದಷ್ಟೇ ಅಲ್ಲ, ನಮ್ಮದೂ ಹೌದು'. ಬೆಕ್ಕಣ್ಣನ ಸಿಟ್ಟು ಈಗ ಅರ್ಥವಾಯಿತು!

'ಹಂಗೆ ಅನ್ನೋರೆಲ್ಲ ಬಸಿರು, ಬಾಣಂತನದ ಬ್ಯಾನಿ ಗೊತ್ತಿಲ್ಲದ ಗಂಡಸರು. ದೇವರು ಈ ಗಂಡಸರಿಗೆ ಗರ್ಭಕೋಶ ಕೊಟ್ಟು, ಈಗ ಹಡೀರಪ್ಪ ಅನ್ನಬಕು. ಆವಾಗ ಮೂರು- ನಾಕು ಮಕ್ಕಳು ಮಾಡಿಕೋರಿ ಅನ್ನದೆಲ್ಲ ಬಂದ್ ಆಗತೈತಿ' ಎಂದೆ.

'ಕೃತಕ ಗರ್ಭಕೋಶ ಹಾಕಿಕೊಂಡು ತಾವೇ ಹಡೆಯೋದಕ್ಕೂ ತಯಾರಾಗತಾರೆ ಬಿಡು ಈ ಗಂಡಸರು' ಎಂದು ಕಿಸಕ್ಕನೆ ನಕ್ಕಿತು ಬೆಕ್ಕಣ್ಣ.

ಚರ್ಚೆ

ನಪಾಸು: ಲಾಭಕ್ಕಿಂತ ನಷ್ಟವೇ ಹೆಚ್ಚು

ತಮ್ಮದಲ್ಲದ ತಪ್ಪಿಗೆ ಮಕ್ಕಳನ್ನು ಅನುತ್ತೀರ್ಣಗೊಳಿಸುವುದು ದುರದೃಷ್ಟಕರ

• ಹರಿಪ್ರಸಾದ್ ಜಿ.ವಿ.

ಪ್ರತಿ ಮಗುವೂ ಅನನ್ಯ, ವಿಶೇಷ. ಕಲಿಯುವ ರೀತಿಯಲ್ಲಿ ಕಲಿಸಿದರೆ ಎಲ್ಲ ವಿದ್ಯಾರ್ಥಿಗಳೂ ಕಲಿಯಲು ಶಕ್ತ. ವಿವಿಧ ಶೈಲಿಗಳಲ್ಲಿ ಕಲಿಯುವವರಿದ್ದಾರೆ. ಆಲಿಸಿ ಕಲಿಯುವವರು ಇರುವಂತೆ, ನೋಡಿ, ಮಾಡಿ, ಓದಿ, ಬರೆದು, ಮಾತಾಡಿ ಕಲಿಯುವವರೂ ಇದ್ದಾರೆ. ಹೀಗೆ ವಿಶೇಷವೆನಿಸುವ ಕಲಿಕಾ ಮಾದರಿಗಳನ್ನು ಅರ್ಥೈಸಿ ಕೊಳ್ಳದೆ, ಏಕರೂಪದ ಕಲಿಕಾ ವಿಧಾನ, ಏಕರೀತಿಯ ಪಾಠ, ಏಕರೀತಿಯ ಪರೀಕ್ಷೆಗಳನ್ನು ನಡೆಸಿ, ತಮ್ಮದಲ್ಲದ ತಪ್ಪಿಗೆ ಮಕ್ಕಳನ್ನು ಅನುತ್ತೀರ್ಣಗೊಳಿಸುವ ಯೋಚನೆ ಇತ್ತೀಚೆಗೆ ಮತ್ತೆ ಮುನ್ನೆಲೆಗೆ ಬಂದಿದೆ. ಕೇಂದ್ರ ಶಿಕ್ಷಣ ಸಚಿವಾಲಯದ ಅಧೀನಕ್ಕೆ ಒಳಪಡುವ ಶಾಲೆಗಳಲ್ಲಿ 5 ಮತ್ತು 8ನೇ ತರಗತಿಗಳಲ್ಲಿ ನಿಗದಿತ ಕಲಿಕಾ ಸಾಮರ್ಥ್ಯ ಇಲ್ಲದ ವಿದ್ಯಾರ್ಥಿಗಳನ್ನು ಫೇಲು ಮಾಡಬೇಕೆಂಬ ನಿರ್ಧಾರವು ಈ ಚರ್ಚೆಗೆ ಇಂಬು ನೀಡಿದೆ.

ಅನುತ್ತೀರ್ಣಕ್ಕೆ ಅವಕಾಶ ಇಲ್ಲದಿದ್ದರೆ ಮಗು ಆತಂಕಕ್ಕೆ ಒಳಗಾಗದೆ, ಫೇಲು ಎಂಬ ಹಣೆಪಟ್ಟಿಯನ್ನು ಹೊತ್ತುಕೊಳ್ಳುವ ಭಯವಿಲ್ಲದೆ ಕಲಿಯಲು ಸಾಧ್ಯ ಎಂದು ತೆಲಂಗಾಣ ರಾಜ್ಯ ಅಭಿಪ್ರಾಯಪಟ್ಟಿದ್ದರೆ, ಇಂತಹ ಕ್ರಮವು ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಿ, ಅವರ ಆತ್ಮಗೌರವವನ್ನು ಹೆಚ್ಚಿಸುತ್ತದೆ ಎಂದು ಮಹಾರಾಷ್ಟ್ರ ಪ್ರತಿಪಾದಿಸಿದೆ.

ಐಐಎಂ- ಅಹಮದಾಬಾದ್‌ನ ಸಂಶೋಧಕರಾದ ಅಂಕಿತ್ ಸರಾಫ್ ಮತ್ತು ಕೇತನ್ ಎಸ್. ದೇಶಮುಖ್ ಅವರು 2005- 15ರವರೆಗೆ, ಅಂದರೆ ಶಿಕ್ಷಣ ಹಕ್ಕು ಕಾಯ್ದೆ- 2009 (ಆರ್‌ಟಿಇ) ಜಾರಿಗೆ ಬರುವ ಮೊದಲಿನ ಐದು ವರ್ಷ ಹಾಗೂ ನಂತರದ ಐದು ವರ್ಷ ಸೇರಿ ಹತ್ತು ವರ್ಷಗಳ ದತ್ತಾಂಶವನ್ನು ಸಂಗ್ರಹಿಸಿದ್ದಾರೆ. 2006- 16ರವರೆಗಿನ ಆ್ಯನ್ಯುಯಲ್ ಸ್ಟೇಟಸ್ ಆಫ್ ಎಜುಕೇಷನ್ ರಿಪೋರ್ಟ್ (ಏಸರ್) ಸಮೀಕ್ಷೆಯ ದತ್ತಾಂಶವನ್ನು ವಿಶ್ಲೇಷಿಸಿ ಅವರು ಕಂಡುಕೊಂಡಿರುವ ಸಂಗತಿಗಳು ಪ್ರಮುಖವಾಗಿವೆ.

ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವುದರಿಂದ ವ್ಯವಸ್ಥೆಯಲ್ಲಿ, ಮಕ್ಕಳ ಕಲಿಕೆಯ ಗುಣಮಟ್ಟದಲ್ಲಿ ಅಥವಾ ಅವರ ಸ್ವಯಂ ಪ್ರಗತಿಯಲ್ಲಿ ಯಾವುದೇ ಸುಧಾರಣೆಗಳು ಆಗಿಲ್ಲ. ನಪಾಸು ಮಾಡದಿರುವ ನಿರ್ಧಾರಕ್ಕೆ ಮುನ್ನವೂ ಕಲಿಕಾ ಗುಣಮಟ್ಟ ಕುಸಿಯುತ್ತಿತ್ತು. ಆದರೆ ನಪಾಸು ಮಾಡದಿರುವ ನಿರ್ಧಾರವು ಮಕ್ಕಳು ಶಾಲೆ ಬಿಡುವುದನ್ನು ತಡೆದಿದೆ ಎಂದು ಗುರುತಿಸಿರುವುದು ಇಲ್ಲಿ ಗಮನಾರ್ಹ. ಇಂತಹ ನಿಯಮವನ್ನು ಮೊದಲಿನಿಂದ ಪಾಲಿಸಿಕೊಂಡು ಬಂದ ರಾಜ್ಯಗಳಾದ ಮಣಿಪುರ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಉತ್ತರಪ್ರದೇಶದಲ್ಲಿ ಮಕ್ಕಳ ಕಲಿಕೆಯಲ್ಲಿ ಹೆಚ್ಚಿನ ಸುಧಾರಣೆ ಕಂಡುಬಂದಿದೆ.

ಅನುತ್ತೀರ್ಣರಾದ ಹೆಚ್ಚಿನ ಮಕ್ಕಳು ಶಾಲೆ ಬಿಡುತ್ತಾರೆ. ಅದರಲ್ಲೂ ಫೇಲಾದ ಹೆಣ್ಣುಮಕ್ಕಳನ್ನು ಶಾಲೆ ಬಿಡಿಸಿಯೇ ತೀರುವುದು ಅನುಭವವೇದ್ಯ. ಫೇಲು ಎಂಬ ಹಣೆಪಟ್ಟಿಯು ಎಳೆಯ ಮನಸ್ಸಿಗೆ ಆಘಾತಕರ. ಮಕ್ಕಳ ಆತ್ಮಗೌರವವನ್ನು ಕುಂದಿಸಿ, ಭವಿಷ್ಯ ಕಟ್ಟಿಕೊಳ್ಳುವ ಅವರ ಆತ್ಮವಿಶ್ವಾಸವನ್ನು ಕಿತ್ತುಕೊಳ್ಳುತ್ತದೆ.

ಕಲಿಕೆ ಎನ್ನುವುದು ಒಂದು ಸುಂದರ ಬೌದ್ಧಿಕ ಅಪಘಾತ, ಅದು ಯಾವುದಾದರೂ ಒಂದು ಸಮಯದಲ್ಲಿ ನಡೆಯುತ್ತದೆ. ಆ ಪ್ರೌಢಿಮೆ ಘಟಿಸುವ ಕಾಲಕ್ಕಾಗಿ ಕಾಯುವ ಮೊದಲೇ ಮಕ್ಕಳನ್ನು ಫೇಲ್ ಮಾಡಿದರೆ, ಅವರನ್ನು ವ್ಯವಸ್ಥೆಯಿಂದ ಹೊರಗೆ ಇಟ್ಟಂತೆ ಆಗುತ್ತದೆ. ಇದರಿಂದ ಆ ಮಗುವಿಗೂ ಸಮಾಜಕ್ಕೂ ತುಂಬಲಾರದ ನಷ್ಟ.

ಅಮೆರಿಕದ ಶಿಕ್ಷಣ ಇಲಾಖೆಗೆ ಸೇರಿದ 'ನಾಗರಿಕ ಹಕ್ಕುಗಳ ಕಚೇರಿ'ಯು (ಒಸಿಆರ್) 2010ರಲ್ಲಿ ಆ ದೇಶದ 7,000 ಶಾಲೆಗಳಲ್ಲಿ ಕೈಗೊಂಡ ಅಧ್ಯಯನದಿಂದ ಕಂಡುಕೊಂಡ ಸಂಗತಿಗಳು ಹೀಗಿವೆ: ಅತಿ ಹೆಚ್ಚು ಫೇಲಾದ ವಿದ್ಯಾರ್ಥಿಗಳು ಬಡವರು, ಅಲ್ಪಸಂಖ್ಯಾತರು, ಕಪ್ಪುವರ್ಣೀಯ ಸಮುದಾಯಗಳಿಗೆ ಸೇರಿದವರಾಗಿದ್ದರು. ಉಳ್ಳವರಾದ ಮತ್ತು ಶ್ವೇತವರ್ಣೀಯ ಮಕ್ಕಳು ಕಡಿಮೆ ಸಂಖ್ಯೆಯಲ್ಲಿ ಅನುತ್ತೀರ್ಣರಾಗಿದ್ದರು. ಅನುತ್ತೀರ್ಣಗೊಳಿಸುವಿಕೆಯು ಕಲಿಕೆಯಲ್ಲಿ ಯಾವುದೇ ಪ್ರಮಾಣದ ಬದಲಾವಣೆಯನ್ನೂ ಮಾಡಿರಲಿಲ್ಲ. ಈ ಮಕ್ಕಳನ್ನು ಒಂದೇ ತರಗತಿಯಲ್ಲಿ ಒಂದಕ್ಕಿಂತ ಹೆಚ್ಚು ವರ್ಷ ಕೂರಿಸುವುದರಿಂದ ಅವರಿಗೆ ಒದಗಿಸುವ ಸೌಲಭ್ಯಗಳನ್ನು ಪುನರಾವರ್ತನೆ ಮಾಡಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಬರುವ ಖರ್ಚು 1,200 ಕೋಟಿ ಡಾಲರ್ (₹1.02 ಲಕ್ಷ ಕೋಟಿ). ಇಲ್ಲಿ ಪರಿಹಾರ ಬೋಧನೆಯ ಖರ್ಚು, ಈ ಮಕ್ಕಳು ಒಂದು ವರ್ಷ ತಡವಾಗಿ ವೃತ್ತಿಬದುಕನ್ನು ಪ್ರವೇಶಿಸುವುದರಿಂದ ಆಗುವ ನಷ್ಟವನ್ನೂ ಸೇರಿಸಿಕೊಂಡರೆ ಆಗುವ ಒಟ್ಟು ನಷ್ಟ ಇನ್ನೂ ಹೆಚ್ಚು. ಅಲ್ಲಿಗೆ ಫೇಲ್ ಮಾಡುವುದು ರಾಷ್ಟ್ರದ ಆರ್ಥಿಕ ದೃಷ್ಟಿಯಿಂದ ತುಂಬಾ ವೆಚ್ಚದಾಯಕ.

ನಮ್ಮಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ನೇಮಕ, ಕಲಿಕೆಗೆ ಒತ್ತು, ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದ ಅರ್ಥಪೂರ್ಣ ಬಳಕೆಯಂತಹ ಕ್ರಮಗಳು ಮಕ್ಕಳ ಕಲಿಕಾ ಸಮಸ್ಯೆಯನ್ನು ಪರಿಹರಿಸುತ್ತವೆ. ಅದುಬಿಟ್ಟು ವಾರ್ಷಿಕ ಪರೀಕ್ಷೆ ನಡೆಸಿ ಅವರನ್ನು ಅನುತ್ತೀರ್ಣಗೊಳಿಸುವುದರಿಂದ ಪ್ರಯೋಜನವಿಲ್ಲ ಎಂದು ಸಂಶೋಧನೆಗಳು ಹೇಳುತ್ತವೆ. ಆದ್ದರಿಂದ ಇಂತಹ ನಿರ್ಧಾರವನ್ನು ದತ್ತಾಂಶಗಳ ವಿಶ್ಲೇಷಣೆ, ಜಿಜ್ಞಾಸೆ ಮತ್ತು ಅಧ್ಯಯನಗಳ ಆಧಾರದ ಮೇಲೆ ವೈಜ್ಞಾನಿಕ ನೆಲೆಯಲ್ಲಿ ತೆಗೆದುಕೊಳ್ಳಬೇಕೇ ವಿನಾ ಏಕಾಏಕಿ ಅಲ್ಲ. ವಾರ್ಷಿಕ ಪರೀಕ್ಷೆಗಳನ್ನು ವೈಭವೀಕರಿಸದೆ, ನಿತ್ಯ ಮೌಲ್ಯಾಂಕನದಿಂದ ಕಲಿಕೆಗೆ ಒತ್ತು ಕೊಡುವತ್ತ ಸಮಾಜ ಸಾಗಬೇಕಾಗಿದೆ.

ಲೇಖಕ: ಹಿರಿಯ ಉಪನ್ಯಾಸಕ, ಡಯಟ್, ಶಿವಮೊಗ್ಗ

ವಾಚಕರ ವಾಣಿ

ಆರೋಗ್ಯ ಕ್ಷೇತ್ರ ಸುಧಾರಣೆಗೆ ಬೇಕು ಹೆಚ್ಚಿನ ಮುತುವರ್ಜಿ

ಬಾಣಂತಿಯರ ಸರಣಿ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಹಿಳಾ ಆಯೋಗ ನೀಡಿರುವ ವರದಿಯಲ್ಲಿ, ಸರ್ಕಾರಿ ಆಸ್ಪತ್ರೆಗಳಲ್ಲಿನ ಸ್ವಚ್ಛತೆ ಕೊರತೆಯ ಬಗ್ಗೆ ಉಲ್ಲೇಖವಿದೆ (ಪ್ರ.ವಾ., ಜ. 5). ಈ ಅಂಶವು ಸಾರ್ವಕಾಲಿಕ ಸತ್ಯ. ಆರೋಗ್ಯ ಇಲಾಖೆಗೆ ಬಜೆಟ್‌ನಲ್ಲಿ ತೆಗೆದಿರಿಸುವ ಅನುದಾನ ಬಳಕೆಯಾಗುತ್ತದೆ. ಆದರೆ ಆಸ್ಪತ್ರೆಗಳ ಸ್ಥಿತಿ ಮಾತ್ರ ಸುಧಾರಣೆ ಆಗುವುದೇ ಇಲ್ಲ. ಆಳುವ ವರ್ಗ, ರಾಜಕೀಯ ವ್ಯಕ್ತಿಗಳು ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯ ಫಲವನ್ನು ಸಾಮಾನ್ಯ ಜನ ಅನುಭವಿಸುವಂತೆ ಆಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವವರಲ್ಲಿ ಹೆಚ್ಚಿನವರು ಬಡವರು. ಈ ಆಸ್ಪತ್ರೆಗಳಿಗೆ ಮೂಲ ಸೌಕರ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉತ್ತಮ ಸ್ಪಂದನ ಮತ್ತು ಸೇವೆ ದೊರಕಿಸಿಕೊಡುವ ದಿಸೆಯಲ್ಲಿ ಸರ್ಕಾರ ವಿಶೇಷ ಮುತುವರ್ಜಿ ವಹಿಸಬೇಕು.

ಆಂಜನೇಯ ಎನ್., ಕಸಿನಾಯಕನಹಳ್ಳಿ, ಮಧುಗಿರಿ

ದರ ಹೆಚ್ಚಳ: ಜನಪರ ಕಾಳಜಿ ಮರೆಯಾಯಿತೇಕೆ?

ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಿರುವುದರ ಹಿಂದೆ ಯಾವತ್ತೂ ಇರುವ ರಾಜಕೀಯ ಹುನ್ನಾರವನ್ನು ತಳ್ಳಿಹಾಕುವಂತಿಲ್ಲ. ಪ್ರತಿ ಬಾರಿ ದರ ಹೆಚ್ಚಳ ಮಾಡುವಾಗ ಬಸ್‌ನ ಬಿಡಿ ಭಾಗಗಳು, ಡೀಸೆಲ್ ಬೆಲೆ ಹೆಚ್ಚಳ, ನೌಕರರ ಸಂಬಳ ಮತ್ತು ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ನೆಪವಂತೂ ಇದ್ದೇ ಇರುತ್ತದೆ. ದರ ಹೆಚ್ಚಳದ ವೇಳೆ ಜನರ ಹಿತವನ್ನು ಅಧಿಕಾರಸ್ಥರು ಲವಲೇಶವೂ ಪರಿಗಣಿಸುವುದಿಲ್ಲ. ಇದಕ್ಕೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಈ ಯಾವ ಪಕ್ಷದ ಆಡಳಿತವೂ ಹೊರತಲ್ಲ. ಆದರೆ ಈಗ ಶೇ 15ರಷ್ಟು ಏರಿಸಿರುವ ಬಸ್ ಪ್ರಯಾಣ ದರವಂತೂ ಗಾಯದ ಮೇಲೆ ಬರೆ ಎಳೆದಂತೆ ಆಗಿದೆ. ಈಗಲಾದರೂ ಸರ್ಕಾರವು ಸಾರಿಗೆ ಬಸ್‌ಗಳಲ್ಲಿ ಹಿರಿಯ ನಾಗರಿಕರಿಗೆ ಆಸನಗಳನ್ನು ಮೀಸಲಿಡುವ ಕ್ರಮ ಅನುಸರಿಸಲಿ. ಹಿರಿಯ ನಾಗರಿಕರು ಬಸ್‌ಚಾರ್ಜ್ ಕೊಟ್ಟು ನಿಂತು ಪ್ರಯಾಣಿಸುವುದು ಸಾಧುವಲ್ಲ.

ಮತ್ತೊಂದೆಡೆ, ರೈತರ ಫಸಲಿಗೆ ಮಾರುಕಟ್ಟೆಯಲ್ಲಿ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಯುವಕರಿಗೆ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ. ಆದಾಗ್ಯೂ ಸರ್ಕಾರ ವಿಧಿಸಬಹುದಾದ ತೆರಿಗೆ ದರ ಮಾತ್ರ ಏರಿಕೆಯಾಗುತ್ತಲೇ ಇರುತ್ತದೆ. ದರ ಹೆಚ್ಚಳದ ವಿಚಾರದಲ್ಲಿ ಯಾವ ರಾಜಕೀಯ ಪಕ್ಷಕ್ಕೂ ಜನಪರ ಕಾಳಜಿ ಇಲ್ಲ. ಇದರ ನಡುವೆ ಜನರಲ್ಲಿ ಪ್ರತಿಭಟಿಸುವ ಮನೋಧರ್ಮವೇ ಉಡುಗಿಹೋಗಿ, ಜನಸಮೂಹವು ಇಂತಹ ರಾಜಕೀಯ ನಾಟಕವನ್ನು ಮೂಕ ಪ್ರೇಕ್ಷಕರಂತೆ ನೋಡುತ್ತಾ ಕುಳಿತಿರುವುದು ಶೋಚನೀಯ ಸಂಗತಿ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಗಾಂಧಿ ದ್ವೇಷ ಮತ್ತು ಗಾಂಧಿ ಮಾರ್ಗ

'ಮಹಾತ್ಮ ಗಾಂಧಿ ಅವರನ್ನು ರಾಷ್ಟ್ರಪಿತ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದು ಡೆಹರಾಡೂನ್‌ನ ಮೀನಾಕ್ಷಿ ಸೆಹರಾವತ್ ಅವರು ಉಡುಪಿಯ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲ ಗಾಂಧೀಜಿ ಮೇಲೆ ಅನಗತ್ಯವಾಗಿ ಎರಗುವ ಇವರನ್ನು, ಹಾಗೆ ಒಪ್ಪಬೇಕು ಎಂದು ಯಾರು ಒತ್ತಾಯಿಸಿದ್ದಾರೋ ತಿಳಿಯುತ್ತಿಲ್ಲ. ಗಾಂಧಿ ರಾಷ್ಟ್ರಪಿತರೆಂದು ಭಾರತ ಸರ್ಕಾರವಂತೂ ಈತನಕ ಎಲ್ಲೂ ಅಧಿಕೃತವಾಗಿ ಘೋಷಿಸಿಲ್ಲ. ನಿಜ ಹೇಳಬೇಕೆಂದರೆ, ಗಾಂಧಿಯನ್ನು ಮೊದಲ ಸಲ ರಾಷ್ಟ್ರಪಿತ ಅಂತ ಕರೆದದ್ದು ಸುಭಾಷ್ ಚಂದ್ರ ಬೋಸ್. ಸಿಂಗಪುರದಿಂದ ಮಾಡಿದ ರೇಡಿಯೊ ಭಾಷಣವೊಂದರಲ್ಲಿ ಅವರು ಗಾಂಧೀಜಿಯನ್ನು 'ರಾಷ್ಟ್ರಪಿತ' ಎಂದು ಸಂಬೋಧಿಸಿದ್ದರು. ಇವರಿಗೆ ನಿಜವಾಗಿಯೂ ತಕರಾರಿದ್ದರೆ, ಈ ವಿಷಯದಲ್ಲಿ ಬೋಸ್ ಅವರನ್ನು ಆಕ್ಷೇಪಿಸುವ ಧೈರ್ಯ ಮತ್ತು ಪ್ರಾಮಾಣಿಕತೆ ತೋರಿಸಬೇಕು. ಒಬ್ಬ ವ್ಯಕ್ತಿಯನ್ನು ಯಾರಾದರೂ ರಾಷ್ಟ್ರಪಿತನೆಂದು ಕರೆದರೆ, ಹಾಗೆ ಕರೆದ ವ್ಯಕ್ತಿ ಸ್ತುತಿ, ನಿಂದೆಗೆ ಬಾಧ್ಯಸ್ಥರಾಗಬೇಕೇ ವಿನಾ ಕರೆಸಿಕೊಂಡ ವ್ಯಕ್ತಿ ಅಲ್ಲ.

ಇಷ್ಟು ಸರಳವಾದ ತರ್ಕ ಅವರಲ್ಲಿ ಗೈರುಹಾಜರಾಗಲು ಕಾರಣವಿದೆ. ಇಂಥವರ ಉದ್ದೇಶವು ವಸ್ತುನಿಷ್ಠ ವಿವೇಚನೆ ಅಲ್ಲ, ಗಾಂಧಿಯನ್ನು ಒಂದಲ್ಲ ಒಂದು ನೆವದಲ್ಲಿ ಟೀಕೆ ಮಾಡಬೇಕು ಎಂಬುದೇ ಆಗಿದೆ. ಇವರ ಈ ಧೋರಣೆ ಹಿರಣ್ಯಕಶಿಪುವಿನ ಮನಃಸ್ಥಿತಿಯನ್ನು ನೆನಪಿಸುತ್ತದೆ. ಅವನ ವಿಷಯದಲ್ಲಿ ದ್ವೇಷಭಾವವು ಭಕ್ತಿಭಾವಕ್ಕಿಂತಲೂ ಶೀಘ್ರ ಪರಿಣಾಮ ನೀಡಿತು. ಮಹಾ ವಿಷ್ಣುವಿನ ಮೇಲಿನ ದ್ವೇಷಭಾವ ಅವನನ್ನು ಪ್ರಹ್ಲಾದನಿಗಿಂತಲೂ ಮುಂಚಿತವಾಗಿಯೇ ವೈಕುಂಠ ಮಾರ್ಗದತ್ತ ನಡೆಸಿತು. ಅದೇ ರೀತಿ ಇವರ ಗಾಂಧಿ ದ್ವೇಷ ಇವರನ್ನು ಗಾಂಧಿ ಮಾರ್ಗದತ್ತ ನಡೆಸುವಂತಾಗಲಿ. ಗಾಂಧಿ ಮೇಲಿನ ಇವರ ಸೆಳೆತ ಸರಿದಾರಿಯಲ್ಲಿ ಮುಂದುವರಿಯಲಿ. ಒಟ್ಟಿನಲ್ಲಿ, ಗಾಂಧಿ ಸದಾಕಾಲ ಸುದ್ದಿಯಲ್ಲಿರಬೇಕು ಎಂಬ ಇವರ ಕಾಳಜಿ ನಿಜಕ್ಕೂ ಶ್ಲಾಘನೀಯವಾದುದು.

ಟಿ.ಎನ್.ವಾಸುದೇವಮೂರ್ತಿ, ಬಿ.ಜಿ.ನಗರ, ನಾಗಮಂಗಲ

ಸೊಗಸು ಕನ್ನಡದ ಸ್ನೇಹಜೀವಿ ಅಸ್ಸಾದಿ

ಪ್ರೊ. ಮುಜಾಫ್ಫರ್ ಅಸ್ಸಾದಿ ಅವರ ಅಕಾಲಿಕ ನಿಧನ ಮೂವತ್ತು ವರ್ಷಗಳ ನಮ್ಮ ಸ್ನೇಹಕ್ಕೆ ಅನಿರೀಕ್ಷಿತವಾಗಿ ಪೂರ್ಣವಿರಾಮ ನೀಡಿದೆ. ನಾವು ಪ್ರತಿದಿನ ಭೇಟಿಯಾಗುವಂತಹ ಸ್ನೇಹಿತರೇನೂ ಆಗಿರಲಿಲ್ಲ. ಹಾಗೆ ನೋಡಿದರೆ, ನಮ್ಮ ನಂಬಿಕೆಗಳಲ್ಲಿ ಬಹಳ ವ್ಯತ್ಯಾಸಗಳಿದ್ದವು. ಆದರೆ ಭೇಟಿಯಾದಾಗಲೆಲ್ಲ ಅವರು ತೋರುತ್ತಿದ್ದ ಪ್ರೀತಿ, ವಿಶ್ವಾಸ ದೊಡ್ಡದು. ಭಿನ್ನಾಭಿಪ್ರಾಯಗಳ ನಡುವೆಯೂ ಅಪ್ಪಟ ಸ್ನೇಹಿತರಾಗಿ ಉಳಿಯಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು.

ಅಸ್ಸಾದಿ ಮೈಸೂರಿನಲ್ಲಿ ಇಷ್ಟು ವರ್ಷ ಇದ್ದರೂ ಅವರಲ್ಲಿ ಕರಾವಳಿ, ಮಲೆನಾಡಿನ ಸೊಗಡಿತ್ತು. ಮಾತಿನಲ್ಲೂ ಬರವಣಿಗೆಯಲ್ಲೂ ಅವರ ಕನ್ನಡ ಸೊಗಸಾದುದು. ಸೈದ್ಧಾಂತಿಕ ವಿಷಯಗಳನ್ನೂ ಅಚ್ಚ ಕನ್ನಡದಲ್ಲಿ ಸರಳವಾಗಿ ವಿವರಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಮಾತಿನ ಮಲ್ಲ ಅಸ್ಸಾದಿ ತಾವು ನಂಬಿದ ತತ್ವಗಳನ್ನು ಅಷ್ಟೇ ಪ್ರಬಲವಾಗಿ ಬರವಣಿಗೆಯಲ್ಲಿ ಪ್ರತಿಪಾದಿಸುತ್ತಿದ್ದರು. ಅಧಿಕಾರಕ್ಕಾಗಿ ರಾಜಿ ಮಾಡಿಕೊಳ್ಳುವ ಮನೋಭಾವ ಅವರದ್ದಾಗಿರಲಿಲ್ಲ. ಅಧಿಕಾರಸ್ಥ ರಾಜಕಾರಣಿಗಳ ಮರ್ಜಿ ಕಾಯುವ ಸ್ವಭಾವ ಅವರದ್ದಾಗಿದ್ದರೆ ಖಂಡಿತವಾಗಿ ಅವರು ಯಾವುದಾದರೂ ಉನ್ನತ ಅಧಿಕಾರ ಸ್ಥಾನ ಪಡೆದಿರುತ್ತಿದ್ದರು. ದೆಹಲಿಯ ಅವರ ಸಂಪರ್ಕಗಳನ್ನು ಬಳಸಿಕೊಂಡು ಅಧಿಕಾರಕ್ಕೇರಿದವರೂ ಅವರಿಗಾಗಿ ಏನನ್ನೂ ಮಾಡಲಿಲ್ಲ. ಅದಕ್ಕಾಗಿ ಅಸ್ಸಾದಿ ವಿಷಾದಿಸಲೂ ಇಲ್ಲ. ಬರವಣಿಗೆ, ಓಡಾಟದ ನಡುವೆ ಅವರು ಆರೋಗ್ಯದ ಕಡೆ ಗಮನ ಕೊಡಲಿಲ್ಲ ಎನಿಸುತ್ತದೆ. 63 ವರ್ಷ ಸಾಯುವ ವಯಸ್ಸಲ್ಲ. ಜಾಗತಿಕ ರಾಜಕೀಯ ತತ್ವಗಳ ಬಗ್ಗೆ ಆಳವಾದ ಅರಿವಿದ್ದ ಹಾಗೂ ವಾಸ್ತವಗಳನ್ನು ಚೆನ್ನಾಗಿ ಅರಿತಿದ್ದ ಪ್ರಾಮಾಣಿಕ, ಬುದ್ಧಿಜೀವಿ ಅಸ್ಸಾದಿ ಅವರ ನಿಧನ ಕರ್ನಾಟಕದ ಸಾರ್ವಜನಿಕ ಬದುಕಿನಲ್ಲಿ ಬಹುದೊಡ್ಡ ನಷ್ಟ.

ನಿರಂಜನ ವಾನಳ್ಳಿ, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮುದಾಯ ಪ್ರಜ್ಞೆಯ ಲೇಖಕ

• ಎಂ.ರಾಘವೇಂದ್ರ

ಸಾಗರ: ಲೇಖಕನೊಬ್ಬ ಹೇಗೆ ಜಾತಿ, ಧರ್ಮಗಳ ಎಲ್ಲೆಯನ್ನು ಮೀರಿ ಸಮುದಾಯ ಪ್ರಜ್ಞೆಯೊಂದಿಗೆ ಸಾಹಿತ್ಯ ರಚಿಸುವ ಜೊತೆಗೆ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದಕ್ಕೆ ನಾ.ಡಿಸೋಜ ಅವರ ಬರಹ ಮತ್ತು ಬದುಕು ನಿದರ್ಶನವಾಗಿದೆ.

ಕಟ್ಟಡ ನಿರ್ಮಾಣಕ್ಕೆ ಬಳಕೆಯಾಗುವ ಸೈಜುಗಲ್ಲನ್ನು ಕೆತ್ತಿ ನಿಖರವಾದ ಆಕಾರ ನೀಡಿ, ಬಳಕೆಗೆ ಯೋಗ್ಯವಾಗುವಂತೆ ಮಾಡುವ ಕೆಲಸದ ಕುಟುಂಬಕ್ಕೆ ನಾ.ಡಿ. ಸೇರಿದವರು. ಆ ಪರಂಪರೆಯನ್ನು ಮುಂದುವರಿಸುವ ರೀತಿಯಲ್ಲಿ ತಮ್ಮ ಬರವಣಿಗೆಯ ಮೂಲಕ ಸಮಾಜದ ಓರೆಕೋರೆಗಳನ್ನು ಗುರುತಿಸಿ ತಿದ್ದಿ ತೀಡುವ ಉತ್ಸಾಹವನ್ನು ಜೀವಿತಾವಧಿಯ ಕೊನೆಯ ತನಕವೂ ತೋರಿದ್ದು ನಾ.ಡಿ. ಅವರ ವೈಶಿಷ್ಟ್ಯ.

ಕತೆ, ಕಾದಂಬರಿ, ನಾಟಕ, ಕವನ, ಪ್ರಬಂಧ, ಮಕ್ಕಳ ಸಾಹಿತ್ಯ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ದಣಿವರಿಯದೇ ಬರೆಯುವ ಮೂಲಕ ಮಲೆನಾಡಿನ ಜೀವನ ಕ್ರಮ, ಸಂಘರ್ಷ, ಸಮಸ್ಯೆಗಳಿಗೆ ಇವರು ಕನ್ನಡಿ ಹಿಡಿಯುತ್ತಲೇ ಬಂದಿದ್ದರು.

ಸಾಹಿತ್ಯದ ಬರವಣಿಗೆ ನಾ.ಡಿ. ಅವರ ಪಾಲಿಗೆ ಬೌದ್ಧಿಕ ವಿಲಾಸವಾಗಿರಲಿಲ್ಲ. ಶ್ರೇಷ್ಠತೆಯ ವ್ಯಸನದಿಂದಲೂ ಅವರು ದೂರವಿದ್ದರು. ತಮ್ಮ ಬರವಣಿಗೆಗಳ ಕುರಿತು ಸಾಹಿತ್ಯ ವಿಮರ್ಶಕರಿಂದ ಬರುವ ಅಭಿಪ್ರಾಯಗಳ ಬಗ್ಗೆ ಅವರು ಯಾವತ್ತೂ ಚಿಂತಿಸಿದವರಲ್ಲ. ಹೀಗಾಗಿ ಸರಳತೆ ಅವರ ಬರವಣಿಗೆ ಮತ್ತು ಬದುಕಿನಲ್ಲಿ ಎದ್ದು ಕಾಣುವ ಸಂಗತಿಯಾಗಿದೆ.

ಮೇಲ್ನೋಟಕ್ಕೆ ಅತ್ಯಂತ ಸೌಜನ್ಯದ ವ್ಯಕ್ತಿಯಂತೆ ಕಾಣುತ್ತಿದ್ದ ನಾ.ಡಿ ಊರಿನ ವಿಷಯ ಬಂದಾಗ ನಿಷ್ಠುರವಾದಿಯಾಗಲು ಹಿಂಜರಿದವರಲ್ಲ. ಆದರೆ ವಿಷಯಕ್ಕೆ ಮಾತ್ರ ಅವರ ವಿರೋಧವಿರುತ್ತಿತ್ತೇ ವಿನಾ ವ್ಯಕ್ತಿಗತವಾಗಿ ಅವರು ಯಾರನ್ನೂ ದ್ವೇಷಿಸಿದವರಲ್ಲ. ಹಾಗಾಗಿ ತೀರಾ ಇತ್ತೀಚಿನವರೆಗೂ ಮಲೆನಾಡು ಪ್ರದೇಶದಲ್ಲಿ ಯಾವುದೇ ಪ್ರಮುಖ ಕಾರ್ಯಕ್ರಮವಾದರೂ ಸಂಘಟಕರು ನಾ.ಡಿ. ಅವರ ಹಾಜರಿಯನ್ನು ಬಯಸುತ್ತಿದ್ದರು.

ಮಡಿಕೇರಿಯಲ್ಲಿ 2014ರಲ್ಲಿ ನಡೆದಿದ್ದ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ನಾ.ಡಿಸೋಜ ಅವರು ಪತ್ನಿ ಫಿಲೋಮಿನಾ ಅವರೊಂದಿಗೆ ಮೆರವಣಿಗೆ ಸಾರೋಟಿನಲ್ಲಿ

ಲೋಕೋಪಯೋಗಿ ಇಲಾಖೆಯಲ್ಲಿ ನೌಕರರಾಗಿ ಜೋಗ್ ಫಾಲ್ಸ್ ಬಳಿ ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣ ಆಗುತ್ತಿದ್ದುದ್ದನ್ನು ನಾ.ಡಿ. ಹತ್ತಿರದಿಂದ ನೋಡಿದವರು. ಈ ಕಾರಣಕ್ಕೆ 'ಮುಳುಗಡೆ'ಯ ಸಂಕಟ ಅವರ ಬರವಣಿಗೆಯ ಜೀವದ್ರವ್ಯವೇ ಆಗಿದೆ. ತಮ್ಮನ್ನು 'ಮುಳುಗಡೆ'ಯ ಲೇಖಕ ಎಂದೇ ಅವರು ಗುರುತಿಸಿಕೊಳ್ಳಲು ಬಯಸುತ್ತಿದ್ದರು.

'ಸರ್ಕಾರಿ ನೌಕರರು ಹೇಗೆ ಇರಬೇಕು?' ಎಂಬುದಕ್ಕೆ ನಾ.ಡಿ. ಮಾದರಿಯಾಗಿದ್ದಾರೆ. 'ನಾನು ಸೇವೆಯುದ್ದಕ್ಕೂ ಯಾರಿಂದಲೂ ಒಂದು ರೂಪಾಯಿಯನ್ನೂ ಲಂಚ ಪಡೆದಿಲ್ಲ. ನನ್ನನ್ನು ನೋಡಿ ನನ್ನ ಸಹೋದ್ಯೋಗಿಗಳು ಹಾಸ್ಯ ಮಾಡುತ್ತಿದ್ದರು' ಎಂದು ಈಚೆಗೆ ಅವರ ಕುರಿತು ನಿರ್ಮಾಣವಾಗಿರುವ ಸಾಕ್ಷ್ಯಚಿತ್ರದಲ್ಲಿ ಸ್ವತಃ ಅವರೇ ಹೇಳಿಕೊಂಡಿದ್ದಾರೆ.

ಮಲೆನಾಡಿನಲ್ಲಿ ನಡೆದ ಐತಿಹಾಸಿಕ ಕಾಗೋಡು ಸತ್ಯಾಗ್ರಹ ನಾ.ಡಿ.ಯವರ ಸಾಹಿತ್ಯದ ಮೇಲೆ ಪರಿಣಾಮ ಬೀರಿದ ಮತ್ತೊಂದು ಪ್ರಮುಖ ಸಂಗತಿಯಾಗಿದೆ. ಈ ಸತ್ಯಾಗ್ರಕ್ಕೆ ಕಾರಣವಾದ ಗೇಣಿ ಭತ್ತ ಅಳೆದುಕೊಡುವ ಕೊಳಗದ ಅಳತೆಗೆ ಸಂಬಂಧಿಸಿದಂತೆ ಅವರು ರಚಿಸಿರುವ 'ಕೊಳಗ' ಕಾದಂಬರಿ ಕಾಗೋಡು ಚಳವಳಿಯ ದಾಖಲೆಯಂತಿದೆ.

ಮಲೆನಾಡು ಪ್ರದೇಶದ ದೀವರ ಸಮುದಾಯದ ವಿಶಿಷ್ಟ ಜನಪದ ಆಚರಣೆಗಳ ಬಗ್ಗೆಯೂ ನಾ.ಡಿ.ಯವರಿಗೆ ವಿಶೇಷ ಆಸಕ್ತಿ ಇತ್ತು. ಹೀಗಾಗಿಯೆ ತಮ್ಮ ಬರವಣಿಗೆಯದುದ್ದಕ್ಕೂ ಆ ಸಮುದಾಯದ ವೈಶಿಷ್ಟ್ಯಗಳನ್ನು ಅವರು ದಾಖಲಿಸುತ್ತಲೇ ಬಂದಿದ್ದರು.

ಸಾಂಪ್ರದಾಯಿಕ ಕ್ಯಾಥೊಲಿಕ್ ಕ್ರೈಸ್ತ ಕುಟುಂಬಕ್ಕೆ ಸೇರಿದ್ದ ನಾ.ಡಿ. ಯಾವತ್ತೂ ಚರ್ಚ್‌ನ ಪ್ರಾರ್ಥನೆಗೆ ಹೋದವರಲ್ಲ. ಆದರೆ ತಮ್ಮ ಕುಟುಂಬದ ಸದಸ್ಯರಿಗೆ ಇಂತಹ ಧಾರ್ಮಿಕ ಆಚರಣೆಗಳಿಗೆ ಅಡ್ಡಿಪಡಿಸಿದವರಲ್ಲ. ಧಾರ್ಮಿಕ ಆವರಣಗಳನ್ನು ದಾಟಿ ಒಂದು ಸಮುದಾಯ ಅನನ್ಯತೆ ಗಳಿಸಬೇಕು ಎಂಬ ತುಡಿತವನ್ನು ತಮ್ಮ ಹಲವು ಭಾಷಣಗಳಲ್ಲಿ ಅವರು ವ್ಯಕ್ತಪಡಿಸಿದ್ದರು.

ಸಮಕಾಲೀನ ವಿದ್ಯಮಾನಗಳಿಗೆ ತಮ್ಮ ಬರಹಗಳ ಮೂಲಕ ಸ್ಪಂದಿಸುವ ಜೊತೆಗೆ ಸಂದರ್ಭ ಬಂದಾಗ ಬೀದಿಗಿಳಿದು ಹೋರಾಟ ನಡೆಸಿದ್ದು ಕೂಡ ನಾ.ಡಿ. ಅವರ ಬದುಕಿನ ವಿಶೇಷ. ಇತಿಹಾಸ ಪ್ರಸಿದ್ಧ ಸ್ಥಳವಾಗಿರುವ ಇಕ್ಕೇರಿ ಪ್ರಾಂತ್ಯದಲ್ಲಿ ಗಣಿಗಾರಿಕೆ ಆರಂಭವಾಗುತ್ತದೆ ಎಂಬ ಸುದ್ದಿ ಹರಡಿದ ಸಮಯದಲ್ಲಿ ಗಣಿ ಸಮೀಕ್ಷೆಗೆಂದು ಬಂದ ಹೆಲಿಕಾಪ್ಟರ್ ಮಾಡಿದ ಸದ್ದಿನ ಕುರಿತೆ ಕತೆ ಬರೆದು ಜಾಗೃತಿ ಮೂಡಿಸಿದ್ದು ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ.

ಬ್ರಿಟಿಷರ ಕಾಲದಲ್ಲಿ ಮಲೆನಾಡು ಭಾಗಕ್ಕೆ ಬಂದಿದ್ದ ರೈಲ್ವೆ ಸೌಲಭ್ಯವನ್ನು ನಂತರ ಬಂದ ಸರ್ಕಾರ ನಿಲ್ಲಿಸಲು ಮುಂದಾದಾಗ ನಡೆದ ಹೋರಾಟಕ್ಕೆ ನಾಯಕತ್ವ ಕೊಟ್ಟಿದ್ದು ನಾ.ಡಿ. ಅವರ ಹೆಗ್ಗಳಿಕೆ. ಹೀಗೆ ಅರ್ಧ ಶತಮಾನಕ್ಕೂ ಹೆಚ್ಚು ಮಲೆನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಕೊಂಡಿಯಂತೆ ಬಾಳಿದವರು ನಾ.ಡಿ.

ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಬಂಡಾಯ ಹೀಗೆ ಹಲವು ಹಂತಗಳನ್ನು ತಮ್ಮ ಬದುಕಿನಲ್ಲಿ ಕಂಡರೂ ಯಾವುದೇ ಪಂಥದ ಜೊತೆಗೆ ಗುರುತಿಸಿಕೊಳ್ಳುವಲ್ಲಿ ನಾ.ಡಿ.ಯವರಿಗೆ ಆಸಕ್ತಿ ಇರಲಿಲ್ಲ. ಆದರೆ, ಅವರ ಸಾಹಿತ್ಯದಲ್ಲಿ ಈ ಎಲ್ಲಾ ಪಂಥಗಳ ಆಶಯ ಒಂದಲ್ಲ ಒಂದು ರೀತಿಯಲ್ಲಿ ಹಾಸುಹೊಕ್ಕಾಗಿದೆ ಎಂಬುದೆ ಅವರ ವೈಶಿಷ್ಟ್ಯ.

ಪರಿಸರ ಹೋರಾಟ

ನಾ. ಡಿಸೋಜ ಅವರು ಬರವಣಿಗೆಯಲ್ಲಿ ಮಾತ್ರವಲ್ಲದೆ ಪರಿಸರ ಹೋರಾಟದಲ್ಲೂ ಪಾತ್ರ ವಹಿಸಿದ್ದಾರೆ. ಇಕ್ಕೇರಿಯಲ್ಲಿ ಗಣಿಬೇಡ ಹೋರಾಟ, ಅಂಬುತೀರ್ಥದಿಂದ ಅರಬ್ಬಿ ಸಮುದ್ರದವರೆಗಿನ ಶರಾವತಿ ನಡೆ, ಸಾಗರದಲ್ಲಿ ರೈಲ್ವೆ ಹೋರಾಟ, ಮಲೆನಾಡಿನಲ್ಲಿ ಕಲ್ಲು ಗಣಿಗಾರಿಕೆ ವಿರುದ್ಧದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಸ್ಥಳೀಯರಿಗೆ ಸಮಸ್ಯೆ ಎದುರಾದಾಗ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದರು. ಶರಾವತಿ ನೀರನ್ನು ಬೆಂಗಳೂರಿಗೆ ಕೊಂಡೊಯ್ಯಲು ರಾಜ್ಯ ಸರ್ಕಾರ ಮುಂದಾದಾಗ ಸಮಾನ ಮನಸ್ಕರೊಂದಿಗೆ ಸೇರಿ ನಾ.ಡಿಸೋಜಾ ಮತ್ತೆ ಬೀದಿಗಿಳಿದಿದ್ದರು. 'ಈ ಅವೈಜ್ಞಾನಿಕ ಯೋಜನೆಯನ್ನು ವಿರೋಧಿಸಬೇಕು. ಬೇಸಿಗೆಯಲ್ಲಿ ಸ್ಥಳೀಯ ಜನರು–ಜಾನುವಾರುಗಳಿಗೆ ನೀರು ಸಾಕಾಗುವುದಿಲ್ಲ. ಅದರ ಪ್ರಸ್ತಾವವೇ ಮೂರ್ಖತನದ್ದು' ಎಂದು ಕಟುವಾಗಿ ಹೇಳಿದ್ದರು.



ಸಾಗರದಲ್ಲಿ ನಡೆದ ಒಡನಾಟ ಸಂಸ್ಥೆಯ ಕಾರ್ಯಕ್ರಮವೊಂದರಲ್ಲಿ ದಿ. ಯು.ಆರ್. ಅನಂತಮೂರ್ತಿ ಅವರೊಂದಿಗೆ ನಾ.ಡಿಸೋಜ

ಸಾಂಸ್ಕೃತಿಕ ಸಂಘಟಕ

ಒಡನಾಟ ಸಂಸ್ಥೆಯ ಮೂಲಕ ಸಾಗರದ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಜಾಗೃತವಾಗಿಡುವಲ್ಲಿ ನಾ.ಡಿ. ಪಾತ್ರ ಪ್ರಮುಖವಾಗಿದೆ.ನಾಡಿನ ಪ್ರಮುಖ ಬರಹಗಾರರು, ಕಲಾವಿದರನ್ನು ಕರೆಸಿ ಉಪನ್ಯಾಸ, ಸಂವಾದದಂತಹ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ಸಾಂಸ್ಕೃತಿಕ ಸಂಘಟಕ ಕೂಡ ಅವರಾಗಿದ್ದರು.

ನಾ. ಡಿಸೋಜ ಮಾತುಗಳು

2014ರಲ್ಲಿ ಮಡಿಕೇರಿಯಲ್ಲಿ ನಡೆದ 80ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ನಾ.ಡಿಸೋಜರ ನುಡಿಗಳಿವು.

- ಹೆದ್ದಾರಿಯ ಮೇಲೆ ರಕ್ತದ ಕಲೆ ಬಿದ್ದಿರುವಾಗ ನಾನು ಕವಿತೆ ಹೇಗೆ ಬರೆಯಲಿ?' ಕಪ್ಪು ಕವಿಯೊಬ್ಬ ಹೀಗೆ ಕೇಳಿದ್ದಾನೆ. ನನ್ನದೂ ಅದೇ ಮನಃಸ್ಥಿತಿ
- ನಾಡಿನ ಯಾವುದೇ ಪ್ರದೇಶದ ಜನ, ನಮ್ಮನ್ನು ಯಾರೂ ಕೇಳುತ್ತಿಲ್ಲ, ಸಿಗಬೇಕಾದ ಸೌಲಭ್ಯಗಳು ನಮಗೆ ಸಿಗುತ್ತಿಲ್ಲ ಎಂದು ಕೊರಗುವಂತಹ ಸ್ಥಿತಿ ಬಾರದ ಹಾಗೆ ನೋಡಿಕೊಳ್ಳಬೇಕಿದೆ
- ಪರಿಸರವನ್ನು ಬೇಕಾಬಿಟ್ಟಿಯಾಗಿ ನಾಶ ಮಾಡಿದ್ದರಿಂದಲೇ ಕಸ್ತೂರಿ ರಂಗನ್ ವರದಿ ಬರಲು ಕಾರಣ. ಪರಿಸರ ಇರುವುದೇ ನಮಗಾಗಿ ಎಂಬ ಭ್ರಮೆಯಲ್ಲಿ ಅದನ್ನು ದೋಚಿದರೆ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಕತ್ತರಿಸಿದಂತಾಗುತ್ತದೆ
- ರೈತನನ್ನು ತಾನು ಬೆಳೆಯುತ್ತಿದ್ದ ಭೂಮಿಯ ಮೇಲಿನ ಕಾರ್ಖಾನೆಯ ಕಾವಲುಗಾರನನ್ನಾಗಿ ನಿಲ್ಲಿಸುವುದು ಇಂದಿನ ದುಃಸ್ಥಿತಿಯ ರೂಪಕದಂತಿದೆ

ಅಗಾಧ ಬದ್ಧತೆಯ ಅಪ್ರತಿಮ ವ್ಯಕ್ತಿ

• ರಾಜೇಂದ್ರ ಚೆನ್ನಿ

ನಮ್ಮನ್ನು ಅಗಲಿದ ನಾ.ಡಿಸೋಜ ಅವರು ಸ್ಥಳೀಯವಾದ ವಿದ್ಯಮಾನಗಳ ಮೂಲಕ ಇಡೀ ನಾಡಿಗೆ ಮತ್ತು ರಾಷ್ಟ್ರಕ್ಕೆ ಪ್ರಸ್ತುತವಾಗಬಲ್ಲಂತಹ ಅನೇಕ ಪ್ರಶ್ನೆಗಳನ್ನು ನಮ್ಮೆದುರು ಇಟ್ಟಿದ್ದಾರೆ. ಅಂದಿನ ಮೈಸೂರು ಮತ್ತು ಇಂದಿನ ಕರ್ನಾಟಕದ ಅತ್ಯಂತ ಪ್ರಗತಿಪರವಾದ ಸಾಧನೆ ಮಾಡಿದೆ ಎಂದು ಹೇಳುತ್ತಿದ್ದರೋ ಅಂತಹದ್ದನ್ನು ಅವರು ಪ್ರಶ್ನಿಸಿದ್ದರು. ಒಂದು ಜಲವಿದ್ಯುತ್ ಉತ್ಪಾದನೆಯ ಯೋಜನೆಯ ಕಾರಣಕ್ಕೆ ಸ್ಥಳಾಂತರಗೊಳ್ಳಬೇಕಾದ ಸಾವಿರಾರು ಜನರು ಇರುವಂತಹ ಅನೇಕ ಸಮುದಾಯಗಳ ಪರಿಸ್ಥಿತಿಯ ಬಗ್ಗೆ ಅವರು ತಮ್ಮ 'ಮುಳುಗಡೆ' ಎಂಬ ಕೃತಿಯಲ್ಲಿ ಪ್ರಸ್ತಾಪ ಮಾಡಿದರು. 'ದ್ವೀಪ' ಸಿನಿಮಾದ ವಸ್ತುವೂ ಇದೇ ಆಗಿತ್ತು. ಗಿರೀಶ ಕಾಸರವಳ್ಳಿ ಅವರು ಅದನ್ನು ಬಹಳ ಅರ್ಥಪೂರ್ಣವಾಗಿ ಸಿನಿಮಾ ಮೂಲಕ ಪರಿಸರವಾದಿಗಳ ಪ್ರಜ್ಞೆಗೆ ತರುವಂತಹ ಕೆಲಸ ಮಾಡಿದರು.

ಅವರು ಒಬ್ಬ ಜನಪ್ರಿಯ ಬರಹಗಾರರು ಎಂದು ನಾನು ಅಂದುಕೊಂಡಿಲ್ಲ. ಏಕೆಂದರೆ ಬಹಳ ವಿಶಾಲವಾದ ಓದುವ ವರ್ಗ ಇದ್ದರು ಕೂಡ, ಅವರು ಆಯ್ದುಕೊಂಡ ವಸ್ತು ಬಹಳ ಗಂಭೀರವಾದುದಾಗಿತ್ತು. ಇದಕ್ಕೆ ಒಂದು ಪ್ರಸಂಗ ನೆನಪಾಗುತ್ತಿದೆ. ತಮ್ಮ ಬದುಕನ್ನು ಉಳಿಸಿಕೊಳ್ಳಬೇಕು ಎಂದು ದೋಣಿಯಲ್ಲಿ ಹೋಗುತ್ತಿರುವವರು, ಆ ದೋಣಿಯಲ್ಲಿದ್ದ ದೇವರ ಮೂರ್ತಿಗಳ ಭಾರದಿಂದ ಅಪಾಯ ಬರಬಹುದೆಂದು ಅವುಗಳನ್ನು ಪ್ರವಾಹದ ನೀರಿಗೆ ಹಾಕಿಡುವಂತಹ ತೀರ್ಮಾನ ಮಾಡಿಬಿಡುತ್ತಾರೆ. ಈ ಎಲ್ಲ ಸೂಕ್ಷ್ಮಗಳನ್ನು ನಾವು ನೋಡುತ್ತಾ ಹೋದರೆ, ಅವರ ಕೃತಿಗಳನ್ನು ನಾವು ಗಂಭೀರವಾಗಿ ಓದುವ ಅವಶ್ಯಕತೆ ಇದೆ ಎಂದು ನಾನು ಅಂದುಕೊಂಡಿದ್ದೇನೆ.

ಒಬ್ಬ ಕೃತಿಕಾರನ ಮಹತ್ವ ಅರ್ಥಮಾಡಿಕೊಳ್ಳುವಲ್ಲಿ, ಆತ ಸಮಾಜವನ್ನು ಯಾವ ಯಾವ ಕೋನಗಳಿಂದ ತಲುಪುತ್ತಾನೆ ಎನ್ನುವುದು ಮುಖ್ಯವಾಗುತ್ತದೆ. ಇದನ್ನು ಅವರ ಬರಹಗಳಲ್ಲಿ ಕಾಣಲು ಸಾಧ್ಯವಿದೆ. ಅಂತಹ ಬರಹಗಾರನಿಗೆ ಸಮುದಾಯದೊಂದಿಗೆ ನಿರಂತರವಾದ ಸಂಭಾಷಣೆ, ವಾಗ್ವಾದ ನಡೆಯುತ್ತಲೇ ಇರಬೇಕಾಗುತ್ತದೆ. ಅದನ್ನು ಅವರು ಸಾಧಿಸಿದ್ದರು.

ಇಷ್ಟೇ ಮುಖ್ಯವಾದ ಮತ್ತೊಂದು ವಿಚಾರವೂ ಇದೆ. 44 ವರ್ಷಗಳಿಂದ ನಾನು ಶಿವಮೊಗ್ಗದಲ್ಲಿ ಇದ್ದೇನೆ. ಇಲ್ಲಿನ ಎಲ್ಲ ಜನಪರ ಚಳವಳಿಗಳ ಜತೆಗೆ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧ ಇಟ್ಟುಕೊಂಡಿದ್ದೇನೆ. ಆ ಚಳವಳಿಗಳಲ್ಲಿ ಡಿಸೋಜ ಅವರ ಅಗಾಧ ಬದ್ಧತೆಯನ್ನು ನೋಡಿದ್ದೇನೆ. ಕೋಮುವಾದಿಗಳು ಕೆಲವು ಧರ್ಮಗಳ ವಿರುದ್ಧ ಶಿವಮೊಗ್ಗದಲ್ಲಿ ಕ್ಷೋಭೆ ಉಂಟುಮಾಡುವಂತಹ ಪ್ರಯತ್ನ ನಡೆಯುತ್ತಿದ್ದಾಗ, ಪ್ರತಿಭಟನೆ ಆಯೋಜಿಸಿದ್ದೆವು. ಆ ಪ್ರತಿಭಟನಾ ಸ್ಥಳಕ್ಕೆ, ಅದು ಆರಂಭವಾಗಬೇಕಿದ್ದ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋದವರು ನಾನು ಮತ್ತು ಡಿಸೋಜ ಮಾತ್ರ.

ಸಾಗರದಲ್ಲಿ ಒಂದು ಸಮುದಾಯ ಪ್ರಜ್ಞೆ ಬಹಳ ಗಟ್ಟಿಯಾಗಿದೆ ಮತ್ತು ಅದಕ್ಕೊಂದು ದೊಡ್ಡ ಇತಿಹಾಸವೇ ಇದೆ. ಒಂದು ಘಟನೆ ನೆನಪಾಗುತ್ತಿದೆ. ಸಾಗರದಲ್ಲಿ ಇದ್ದಂತಹ ಜಾತ್ಯತೀತ ಮನೋಭಾವನೆ ಮುರಿಯುವ ಒಂದು ಘಟನೆ ನಡೆಯಿತು. ಇದು ತಪ್ಪು, ತಪ್ಪು ಗ್ರಹಿಕೆಯಿಂದ ಉಂಟಾಗಿರುವಂಥದ್ದು ಎಂದು ಮನವರಿಕೆ ಮಾಡಲು ಒಂದು ದೊಡ್ಡ ಸಭೆಯನ್ನು ಆಯೋಜಿಸಲಾಗಿತ್ತು. ಆ ಸಭೆಗೆ ಡಿಸೋಜ ಅವರೇ ಮೂಲ ಪ್ರೇರಣೆ. ಆ ಸಭೆಯಲ್ಲಿ ಅವರು ಆಡಿದ ಮಾತುಗಳು ಈಗಲೂ ನನಗೆ ನೆನಪಿದೆ. ವಿಷಾದದಿಂದ ನಾನದನ್ನು ಈಗ ನೆನಪು ಮಾಡಿಕೊಳ್ಳುತ್ತಿದ್ದೇನೆ. ಕೋಮುವಾದ, ಪ್ರತ್ಯೇಕತೆ ಯಾವುದೂ ಇಲ್ಲದಂತಹ ಸುಂದರವಾದ ಸ್ಥಿತಿ ಇರುವಲ್ಲಿ, ಅದನ್ನು ಹಾಳುಮಾಡುವಂತಹ ಯಾವುದೇ ಶಕ್ತಿಗಳು ಕ್ರಿಯಾಶೀಲವಾದ ತಕ್ಷಣವೇ ಅವನ್ನು ಪ್ರಶ್ನಿಸಬೇಕು ಎಂಬ ಪ್ರಜ್ಞೆ ನಾ.ಡಿಸೋಜ ಅವರಲ್ಲಿ ಇತ್ತು. ಎಲ್ಲ ಕಾಲಕ್ಕೂ ಇಂತಹ ನಗರ, ಪ್ರದೇಶಗಳಲ್ಲಿ ನಾ.ಡಿಸೋಜ ಅಂತಹವರು ಬಂದು ನಾಗರಿಕ ಪ್ರಜ್ಞೆಯನ್ನು, ವಿವೇಕವನ್ನು, ಸಹಬಾಳ್ವೆಯನ್ನು ಹೇಳಿಕೊಡಬೇಕು. ಅಂತಹ ನಾ.ಡಿಸೋಜ ಅವರು ನಮ್ಮನ್ನು ಅಗಲಿದ್ದು ಬಹಳ ದುಃಖದ ಸಂಗತಿ.

ನಿರೂಪಣೆ: ಜಯಸಿಂಹ ಆರ್.

ಮುಕ್ತ ಮನಸಿನ ಸಹೃದಯಿ ಸಾಹಿತಿ

• ಗಿರೀಶ ಕಾಸರವಳ್ಳಿ

ನಾ. ಡಿಸೋಜ ಅವರದ್ದು ಸೌಮ್ಯ ಸ್ವಭಾವ. ಅವರಿಗೆ ಸ್ವಲ್ಪವೂ ಸ್ವಪ್ರತಿಷ್ಠೆ ಎನ್ನುವುದೇ ಇರಲಿಲ್ಲ. ಜನಪ್ರಿಯತೆ ಬಂದಮೇಲೆ ಎಷ್ಟೋ ಸಾಹಿತಿಗಳಿಗೆ ಒಂದು ಬಗೆಯ ಹಟ ಇರುತ್ತದೆ; ಅವರಿಗೆ ಅದೂ ಇರಲಿಲ್ಲ.

ಅವರು ಮನ್ವಂತರದ ಸಾಹಿತಿ. ಅತಿ ಗಂಭೀರವೂ ಅಲ್ಲದ, ಜನಪ್ರಿಯತೆಯ ಹಂಗಿಗೆ ಬೀಳದ ಸಾಹಿತ್ಯ ಅವರದ್ದು.

ಅವರು ಲೋಕೋಪಯೋಗಿ ಇಲಾಖೆಯಲ್ಲಿ ಮುಳುಗಡೆ ಸಂತ್ರಸ್ತರಿಗೆ ಪರಿಹಾರ ನಿಗದಿ ಮಾಡುವ ಕೆಲಸದಲ್ಲಿದ್ದವರು. ಹೀಗಾಗಿ ಸ್ವಾನುಭವವೇ ಅವರಿಗೆ ಸಾಕಷ್ಟು ಸಾಹಿತ್ಯದ್ರವ್ಯವನ್ನು ಒದಗಿಸಿಕೊಟ್ಟಿತ್ತು. ಅಲ್ಲದೆ, ಕ್ರೈಸ್ತ ಸಮುದಾಯದಿಂದ ಬಂದವರಲ್ಲಿಯೂ ಅವರು ಮುಖ್ಯವಾದ ಲೇಖಕ.

ಅವರ 'ದ್ವೀಪ' ಕಾದಂಬರಿಯನ್ನು ಓದಿದ ಮೇಲೆ ನನಗೆ ರೂಪಕದ ಮೂಲಕ ಅದನ್ನು ಸಿನಿಮಾ ಆಗಿಸಬಹುದು ಎನ್ನಿಸಿತು. ನಾನು ಅದನ್ನು ಆಧರಿಸಿ ಚಿತ್ರಕತೆ ಸಿದ್ಧಪಡಿಸಿಕೊಂಡು ಹೋದಮೇಲೆ ಅವರಿಗೆ ಅದು ಹಿಡಿಸಿತ್ತು. ಬರೀ ಕಾದಂಬರಿಯ ದ್ರವ್ಯವನ್ನು ಯಥಾವತ್ತಾಗಿ ಇಟ್ಟುಕೊಂಡು ಚಿತ್ರಕತೆ ಮಾಡಿರಲಿಲ್ಲ. ಅವರದ್ದೇ 'ನೀರಿನ ಮಟ್ಟ ಅಳೆಯುವ ಮನುಷ್ಯ' ಎಂಬ ಸಣ್ಣಕತೆಯೊಂದರ ಅಂಶವನ್ನೂ ನಾನು ಸೇರಿಸಿಕೊಂಡಿದ್ದೆ. ಮಳೆ ನಕ್ಷತ್ರಗಳನ್ನು ಇಟ್ಟುಕೊಂಡು ಅಧ್ಯಾಯಗಳಾಗಿ ಚಿತ್ರಕತೆ ಸಿದ್ಧಪಡಿಸಿದ್ದೆ. ಅದಕ್ಕೆ ಪೂರಕವಾಗಿ ಕೆಲವು ಗಾದೆಮಾತುಗಳನ್ನು ಬಳಸಿಕೊಳ್ಳಬೇಕಿತ್ತು. ಅವನ್ನೂ ಅವರೇ ನನಗೆ ಕೊಟ್ಟಿದ್ದರು.

ಸಾಗರದಲ್ಲಿಯೇ ಚಿತ್ರೀಕರಣ ಮಾಡಿದೆವು. ಲೊಕೇಷನ್ ನೋಡಲು ಅವರು ಅಥವಾ ಕೆ.ವಿ. ಸುಬ್ಬಣ್ಣ ಇಬ್ಬರೂ ಅಥವಾ ಇಬ್ಬರಲ್ಲಿ ಒಬ್ಬರು ನಮ್ಮೊಡನೆ ಬರುತ್ತಿದ್ದರು. ಸಾಗರದ ಈ ಕಾಲದ ಮಳೆಯ ಆರ್ಭಟದ ವಿಷಯ ಅವರಿಗೆ ಚೆನ್ನಾಗಿ ಗೊತ್ತಿದ್ದರಿಂದ ನನಗೂ ಅನುಕೂಲವಾಯಿತು.

ಸಿನಿಮಾ ತಯಾರಾದ ಮೇಲೆ ಸಾಗರಲ್ಲಿಯೇ ಒಂದು ಪ್ರದರ್ಶನ ಆಯೋಜಿಸಿದ್ದೆವು ಆಗ ಅವರು ಸಿನಿಮಾ ಮಾಧ್ಯಮವು ಮೂಲ ಕೃತಿಯ ವಿಸ್ತರಣೆ ಎನ್ನುವುದನ್ನು ಮುಕ್ತವಾಗಿ ಒಪ್ಪಿಕೊಂಡಿದ್ದರು. ಕತೆಯಲ್ಲಿ ಬರೆದಂತೆಯೇ ಸಿನಿಮಾ ಇರಬೇಕು ಎಂಬ ತುಸುವೂ ಹಟ ಅವರಿಗೆ ಇರಲಿಲ್ಲ.

ಅವರ ಸಾಹಿತ್ಯದಲ್ಲಿ ಸಿನಿಮಾ ಮಾಡಬಲ್ಲ ಸಾಕಷ್ಟು ಅಂಶಗಳಿವೆ. 'ದ್ವೀಪ' ಸಿನಿಮಾದಲ್ಲಿ ನಾಲ್ಕು ಮುಖ್ಯ ಪಾತ್ರಗಳು; ಐದನೇ ಪಾತ್ರ ಮಳೆ ಎಂದು ಹೇಳಿದಾಗ ಅವರು ಖುಷಿಪಟ್ಟಿದ್ದರು.

ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ನಾನು ಭೇಟಿ ಮಾಡಲು ಹೋಗಿದ್ದೆ. ನಾನು ಬರುವ ವಿಷಯ ತಿಳಿದು, ಅವರು ನನ್ನನ್ನು ಸ್ವಾಗತಿಸಲೆಂದೇ ಹೊರಗೆ ಕಾಯುತ್ತಿದ್ದರು. ಕಡಿಮೆ ಮಾತಿನ ಅವರದ್ದು ಅಷ್ಟು ಆತ್ಮೀಯವಾದ ವ್ಯಕ್ತಿತ್ವ.

'ಯಾವುದೇ ಬಿಗುಮಾನವಿಲ್ಲದ, ಒಳ–ಹೊರಗು ಇಲ್ಲದ, ಪಾರದರ್ಶಕ ವ್ಯಕ್ತಿತ್ವ ಅವರದ್ದು' ಎಂದು ಕೆ.ವಿ. ಸುಬ್ಬಣ್ಣ ಒಂದು ಕಡೆ ಬರೆದಿದ್ದಾರೆ. ಈ ಅಭಿಪ್ರಾಯ ನನ್ನದೂ ಹೌದು.

ನಿರೂಪಣೆ ವಿಶಾಖ ಎನ್.

ಸಿನಿಮಾಗಳಾದ ಕೃತಿಗಳು

'ದ್ವೀಪ' ಹಾಗೂ 'ಕಾಡಿನಬೆಂಕಿ' ಕೃತಿಗಳನ್ನು ಆಧರಿಸಿದ ಅವೇ ಹೆಸರಿನ ಸಿನಿಮಾಗಳಿಗೆ ಪ್ರಶಸ್ತಿಗಳೂ ಹುಡುಕಿಕೊಂಡು ಬಂದಿದ್ದವು. ಅವುಗಳಲ್ಲದೆ 'ಬಳುವಳಿ' ಹಾಗೂ 'ಬೆಟ್ಟದಪುರದ ದಿಟ್ಟ ಮಕ್ಕಳು', 'ಅಂತರ್ಯ' ನಾ.ಡಿ. ಸಾಹಿತ್ಯಕೃತಿಗಳನ್ನು ಆಧರಿಸಿದ ಚಿತ್ರಗಳಾಗಿವೆ.

ನಂದಿತು 'ದ್ವೀಪ'ದ ದೀಪ

ಒಂದನೇ ಪುಟದಿಂದ...

ನಂತರ ಲೋಕೋಪಯೋಗಿ ಇಲಾಖೆಯಲ್ಲಿ ಟೈಪಿಸ್ಟ್, ದ್ವಿತೀಯ ದರ್ಜೆ ಹಾಗೂ ಪ್ರಥಮ ದರ್ಜೆ ಕ್ಲರ್ಕ್ ಆಗಿ ಕಾರ್ಗಲ್‌ನ ಶರಾವತಿ ಯೋಜನೆ, ಮಾಸ್ತಿಕಟ್ಟೆ, ತೀರ್ಥಹಳ್ಳಿ, ಸಾಗರದಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಬಾಲ್ಯದಲ್ಲಿ ತಾಯಿ ರೂಪಿನಾ ಹೇಳುತ್ತಿದ್ದ ಜನಪದ ಹಾಡು, ಕತೆಗಳು ಡಿಸೋಜ ಅವರ ಮೇಲೆ ಪ್ರಭಾವ ಬೀರಿದ್ದವು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಹೋದರ ನರಸಿಂಹಾಚಾರ್ ಶಾಲೆಯಲ್ಲಿ ಆಕರ್ಷಕವಾಗಿ ಬೋಧಿಸುತ್ತಿದ್ದ ರೀತಿ, ಕಾಲೇಜಿನಲ್ಲಿ ಗುರು ಡಾ. ಜಿ.ಎಸ್. ಶಿವರುದ್ರಪ್ಪ ಅವರ ಪಾಂಡಿತ್ಯ ನಾ. ಡಿಸೋಜ ಅವರನ್ನು ಪ್ರಭಾವಿಸಿತ್ತು.

ನಾ. ಡಿಸೋಜ ಅವರು 75 ಕಾದಂಬರಿಗಳು, 6 ಚಾರಿತ್ರಿಕ ಕಾದಂಬರಿ, ಮಕ್ಕಳಿಗಾಗಿ 25 ಕಾದಂಬರಿ, 9 ಕಥಾ ಸಂಕಲನ, ಸಮಗ್ರ ಕಥೆಗಳ ಎರಡು ಸಂಪುಟಗಳು, ಸುಮಾರು 500 ಕಥೆಗಳು, ಹತ್ತಾರು ನಾಟಕಗಳು, ರೇಡಿಯೋ ನಾಟಕಗಳು, ಅನೇಕ ಪತ್ರಿಕಾ ಲೇಖನಗಳು ಹೀಗೆ ವಿಶಾಲ ವ್ಯಾಪ್ತಿಯಲ್ಲಿ ಬರೆದಿದ್ದರು. ಇವರ 'ಮುಳುಗಡೆಯ ಊರಿಗೆ ಬಂದವರು' ಎಂಬ ಮಕ್ಕಳ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ' ಸಂದಿತ್ತು. 'ದ್ವೀಪ' ಮತ್ತು 'ಕಾಡಿನ ಬೆಂಕಿ' ಕಾದಂಬರಿಗಳು ಚಲನಚಿತ್ರಗಳಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿವೆ. 2014ರಲ್ಲಿ ಮಡಿಕೇರಿಯಲ್ಲಿ ನಡೆದ 80ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದರು. ಅವರ ಜೀವನಚರಿತ್ರೆ 'ಮಲೆನಾಡಿಗ' 2012ರಲ್ಲಿ ಪ್ರಕಟವಾಗಿದೆ.

ಅವರ ಕತೆಗಳು ಪಾಟೀಲ ಪುಟ್ಟಪ್ಪ ಅವರ ಪ್ರಪಂಚ ಪತ್ರಿಕೆಯಲ್ಲಿ ಮೊದಲು ಪ್ರಕಟಗೊಂಡು ಮುಂದೆ ಎಲ್ಲ ಪತ್ರಿಕೆಗಳಲ್ಲೂ ಬಹುಬೇಡಿಕೆ ಪಡೆದವು. ಡಿಸೋಜ ಅವರ ಹಲವಾರು ಸಣ್ಣಕತೆಗಳು ಕೊಂಕಣಿ, ಮಲಯಾಳ, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ.

ಲಿಂಗನಮಕ್ಕಿ ಅಣೆಕಟ್ಟೆ ನಿರ್ಮಾಣದ ವೇಳೆ ಮುಳುಗಡೆಯಿಂದಾಗಿ ಶರಾವತಿ ಕಣಿವೆಯಲ್ಲಿ ಆದ ತಲ್ಲಣಗಳ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಅವರು ಅದನ್ನು ಕಥೆ, ಕಾದಂಬರಿಗಳ ಮೂಲಕ ಕಟ್ಟಿಕೊಟ್ಟಿದ್ದರು. 'ಲಿಂಗನಮಕ್ಕಿ ಅಣೆಕಟ್ಟೆ ಜನರ ಜೀವನವನ್ನು ಸುಧಾರಿಸುತ್ತದೆ ಎಂದು ನಂಬಲಾಗಿತ್ತು. ಆದರೆ, ಅಂಥದ್ದೇನೂ ಆಗಲಿಲ್ಲ. 112 ಗ್ರಾಮಗಳು ಮುಳುಗಡೆಯಾಗಿದ್ದು, ಸುಮಾರು 90,000 ಜನರು ಸ್ಥಳಾಂತರಗೊಂಡಿದ್ದಾರೆ. ನಾನು ಆ ಜನರ ಸಂಕಷ್ಟಗಳನ್ನು ಆಲಿಸಿದೆ ಮತ್ತು ಅವರು ನನಗೆ ಕಾದಂಬರಿ ಮತ್ತು ಸಣ್ಣ ಕಥೆಗಳನ್ನು ಬರೆಯಲು ಪ್ರೇರೇಪಿಸಿದರು' ಎಂದು ನಾ.ಡಿಸೋಜ ಹೇಳುತ್ತಿದ್ದರು.

ಮನಸ್ಸಿನ ಲೀಲಾವಿಲಾಸ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

103

ನಮ್ಮ ಇಂದ್ರಿಯಗಳು ಸಾಕಷ್ಟು ಕೆಲಸ ಮಾಡುತ್ತವೆ. ಕಣ್ಣು ನೋಡುತ್ತದೆ. ಕಿವಿ ಕೇಳಿಸಿಕೊಳ್ಳುತ್ತದೆ. ನಾಲಿಗೆ ರುಚಿ ನೋಡುತ್ತದೆ. ಕಾಲು ನಡೆಯುತ್ತದೆ. ಇದಕ್ಕೆಲ್ಲಾ ಕಾರಣ ಏನು? ಈ ಎಲ್ಲ ಅಂಗಗಳು ತಮ್ಮಷ್ಟಕ್ಕೆ ತಾವು ಯಾವುದೇ ಕಾರ್ಯವನ್ನು ಮಾಡುವುದಿಲ್ಲ. ಅವುಗಳ ಹಿಂದೆ ಯಾವುದೋ ಒಂದು ಶಕ್ತಿ ಕಾರ್ಯಗಳನ್ನು ಮಾಡಿಸುತ್ತಿರುತ್ತದೆ. ಹೆಣ ನೋಡಿ. ಅದಕ್ಕೆ ಕಣ್ಣು, ಕಿವಿ, ಕೈ ಕಾಲು ಎಲ್ಲಾ ಇರುತ್ತವೆ. ಆದರೆ ಯಾವುದೂ ಕೆಲಸ ಮಾಡುವುದಿಲ್ಲ. ಕಣ್ಣು, ಕಿವಿ, ಕೈ, ಕಾಲು ಎಲ್ಲಾ ಕೆಲಸ ಮಾಡಲು ಮೂಲ ಕಾರಣ ನಮ್ಮ ಮನಸ್ಸು. ವಿಶ್ವದ ಎಲ್ಲ ಕೆಲಸಗಳು ನಡೆಯಲು ಸೂರ್ಯ ಹೇಗೆ ಕಾರಣನೋ ಹಾಗೆಯೇ ಮನಸ್ಸಿಲ್ಲದೆ ದೇಹದ ಯಾವುದೇ ಕಾರ್ಯಗಳೂ ನಡೆಯೋದಿಲ್ಲ.

ಕೇಳಿ ಕೇಳಿ ಕಿವಿ ಮಂದಾತು, ನೋಡಿ ನೋಡಿ ಕಣ್ಣಿಗೆ ಕನ್ನಡಕ ಬಂತು, ದೇಹಕ್ಕೆ ಮುಪ್ಪಾತು. ಆದರೆ ಮನಸ್ಸಿಗೆ ಮುಪ್ಪಾಗುವುದೇ ಇಲ್ಲ. ಇದೇ ಮನಸ್ಸಿನ ವೈಶಿಷ್ಟ್ಯ. ನೀವು ಒಂದು ಸಾದಾ ಮೊಬೈಲ್ ತಗೊಂಡರೆ ಅದರಲ್ಲಿ 10ರಿಂದ 20 ಜಿಬಿ ಸಂಗ್ರಹ ಮಾಡಬಹುದು. ಸ್ಮಾರ್ಟ್ ಫೋನ್ ತೆಗೆದುಕೊಂಡರೆ 200–250 ಜಿಬಿ ಸಂಗ್ರಹ ಮಾಡಬಹುದು. ಆದರೆ, ಮನಸ್ಸಿನೊಳಗೆ ನೀವು ಹುಟ್ಟಿದಾಗಿನಿಂದ ಈವರೆಗೆ ಎಷ್ಟು ಚಿತ್ರಗಳು, ಎಷ್ಟು ಸಂಗತಿಗಳನ್ನು ತುಂಬಿಸಿಕೊಂಡಿದೆ! ಆದರೂ ಇನ್ನೂ ತುಂಬಿಸಿಕೊಳ್ಳುತ್ತಲೇ ಇದೆ. ಯಾವಾಗಲೂ ಖಾಲಿಯಾಗಲೇ ಇಲ್ಲ. ಒಬ್ಬ ಶ್ರೀಮಂತನಾಗಿದ್ದು, ಒಬ್ಬ ಬಡವ ಆಗಿದ್ದು, ಒಬ್ಬ ಶ್ರೇಷ್ಠನಾಗಿದ್ದು, ಒಬ್ಬ ಕನಿಷ್ಠನಾಗಿದ್ದು ಇದೇ ಮನಸ್ಸಿನಿಂದ. ಸುಖ ದುಃಖಗಳಿಗೂ ಮನಸ್ಸೇ ಕಾರಣ. ಮನಸ್ಸು ಬಹಳ ವಿಚಿತ್ರ. ಒಮ್ಮೆ ಹಾಂಗೆ ಮಾಡಿಸುತ್ತದೆ. ಇನ್ನೊಮ್ಮೆ ಹೀಗೆ ಮಾಡಿಸುತ್ತದೆ. ಬುದ್ಧನಂತಹವನಿಗೆ ಮದುವೆ ಮಾಡಿಕೊ, ಸಾಮ್ರಾಜ್ಯ ಕಟ್ಟು ಅಂತ ಹೇಳಿದ್ದು ಮನಸ್ಸು. ನಂತರ ಇದೆಲ್ಲ ಬ್ಯಾಡ, ಬಿಟ್ಟು ಹೋಗು ಅಂತ ಹೇಳಿದ್ದೂ ಇದೇ ಮನಸ್ಸು. ಇದು ಮನಸ್ಸಿನ ಲೀಲಾವಿಲಾಸ.

ಒಬ್ಬ ಮುದುಕ ಇದ್ದ. ಅವನಿಗೆ ಇಬ್ಬರು ಮಕ್ಕಳು. ಇಬ್ಬರಿಗೂ ಮದುವೆ ಮಾಡಿ ದೊಡ್ಡ ದೊಡ್ಡ ಮನೆ ಕಟ್ಟಿಸಿಕೊಟ್ಟು ತಲಾ ನೂರು ಎಕರೆ ಹೊಲ ಕೊಟ್ಟು ತೀರಿಕೊಂಡ. ತಮ್ಮನಿಗೆ ಮೊದಲು ಗಂಡು ಮಗುವಾಯಿತು. ಅಣ್ಣನಿಗೆ ಮಕ್ಕಳಿಲ್ಲ, ಅವರ ಆಸ್ತಿಯೂ ತಮಗೇ ಸಿಗುತ್ತದೆ ಎಂದು ಅವ ಸಂತೋಷವಾಗಿದ್ದ. ನಂತರ ಕೆಲವೇ ದಿನಗಳಲ್ಲಿ ಅಣ್ಣನಿಗೂ ಗಂಡು ಮಗುವಾಯಿತು. ಇದರಿಂದ ತಮ್ಮನಿಗೆ ದುಃಖವಾಯಿತು. ಹೇಗಾದರೂ ಅಣ್ಣನ ಮಗನನ್ನು ಕೊಲ್ಲಬೇಕು ಎಂದು ಬಯಸಿದ. ಒಂದು ದಿನ ಮಿಠಾಯಿ ಮಾರುವ ವ್ಯಕ್ತಿ ಊರಿಗೆ ಬಂದಾಗ ಆತನನ್ನು ಕರೆದು 'ಅಣ್ಣನ ಮಗನಿಗೆ ಮಿಠಾಯಿಯಲ್ಲಿ ವಿಷ ಹಾಕಿ ಕೊಡು. ಒಂದು ಲಕ್ಷ ರೂಪಾಯಿ ಕೊಡ್ತೀನಿ' ಎಂದ. ಅದಕ್ಕೆ ಮಿಠಾಯಿ ಮಾರುವವ, 'ದೇವರು ನನ್ನನ್ನು ಕಳಿಸಿದ್ದು ಮಿಠಾಯಿ ಮಾರಿ ಬದುಕು ಅಂತ, ವಿಷ ಮಾರಿ ಬದುಕು ಅಂತಲ್ಲ' ಎಂದ. 'ಈಗ ನನಗೆ ಒಂದು ಲಕ್ಷ ರೂಪಾಯಿ ಕೊಡ್ತೀನಿ ಅಂದ್ರಲ್ಲ; ಅದು ಈಗ ನಿಮ್ಮ ಬಳಿಯೇ ಐತಿ. ಅದು ನಿಮಗೆ ಸುಖ ಕೊಟ್ಟಿಲ್ಲ ಅಂದ ಮೇಲೆ ನನ್ನ ಬಳಿಗೆ ಬಂದ್ರೂ ನನಗೂ ಸುಖ ಕೊಡೋದಿಲ್ಲ' ಅಂದ. ಅದು ಮನಸ್ಸು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಜನವರಿ 6, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಸಪ್ತಮಿ ಗಂ. 18-24 ನಕ್ಷತ್ರ: ಉತ್ತರಭಾದ್ರ ಗಂ. 19-07 ಯೋಗ: ಪರಿಘ ಗಂ. 26-05 ಕರಣ: ಗರ ಗಂ. 07-21, ಧನು ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-59 **ಸೂರ್ಯಾಸ್ತ:** 06-14
ಮುಸ್ಲಿಂ ದಿನಾಂಕ: 05 ರಜಬ್
ಅದೃಷ್ಟ ಸಂಖ್ಯೆ: 2, 4

ಮೇಷ: ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ತಾಳ್ಮೆ ಕಳೆದುಕೊಳ್ಳದೆ ಸಮಾಧಾನದಿಂದ ವರ್ತಿಸಿ. ಕೋರ್ಟು–ಕಚೇರಿ ವ್ಯವಹಾರಗಳಲ್ಲಿ ಜಯಿಸಲು ಹೆಚ್ಚಿನ ಶ್ರಮ ಅಗತ್ಯ. ಜವಳಿ ಉದ್ಯಮದವರಿಗೆ ಲಾಭವಾಗಲಿದೆ.

ವೃಷಭ: ವ್ಯವಹಾರಗಳು ನಿರೀಕ್ಷೆಗೂ ಮೀರಿ ಕಡಿಮೆ ಖರ್ಚಿನಲ್ಲಿ ಸಂಪೂರ್ಣವಾಗಲಿದ್ದು, ಸಂತೋಷಗೊಳ್ಳುವಿರಿ. ಕಳೆದಿದ್ದ ದಾಖಲೆ ಪತ್ರಗಳು ಮರಳಿ ಸಿಗುವುದರಿಂದ ಸಮಾಧಾನ ಉಂಟಾಗುತ್ತದೆ.

ಮಿಥುನ: ನಿಮ್ಮ ವಿಶೇಷ ಕೌಶಲ್ಯವು ಅಧಿಕ ಲಾಭವನ್ನು ತಂದುಕೊಡಲಿದೆ. ಪುತ್ರನ ಉದ್ಯೋಗದಲ್ಲಿನ ಪ್ರಗತಿಯಿಂದ ಸಂತೋಷವಾಗುತ್ತದೆ. ಉದ್ಯೋಗ–ವ್ಯವಹಾರಗಳಲ್ಲಿ ತೊಂದರೆಗಳಿರುವುದಿಲ್ಲ.

ಕರ್ಕಾಟಕ: ಆರೋಗ್ಯವೇ ಮಹಾಭಾಗ್ಯ ಎಂಬಂತೆ, ಎಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ನಿರ್ಧರಿಸುವಿರಿ. ಕೌಟುಂಬಿಕ ಸಮಸ್ಯೆಗಳಿಂದಾಗಿ ಮಾನಸಿಕ ಯಾತನೆ ಉಂಟಾಗಲಿದೆ.

ಸಿಂಹ: ಸರ್ಕಾರಿ ಕೆಲಸಗಳನ್ನು ಈಡೇರಿಸಿಕೊಳ್ಳಲು ತ್ರಾಸವಾಗಲಿದೆ. ಸಂಸ್ಥೆಯ ಆದಾಯವನ್ನು ಹೆಚ್ಚಿಸಲು ಅಧಿಕ ಶ್ರಮ ಅಗತ್ಯವಾಗಲಿದೆ. ಮನೋರಂಜನಾ ಚಟುವಟಿಕೆಗಳಲ್ಲಿ ಸಮಯ ಕಳೆಯುವಿರಿ.

ಕನ್ಯಾ: ಜನರೊಂದಿಗೆ ಹೆಚ್ಚಾಗಿ ಬೆರೆಯುವ ಸಂದರ್ಭ ಎದುರಾಗುವುದರಿಂದ, ಆರೋಗ್ಯದ ಬಗ್ಗೆ ವಿಶೇಷ ಗಮನವಹಿಸಿ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಪಡೆಯುವಿರಿ. ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣಲಿದೆ.

ತುಲಾ: ಏರುಪೇರಾಗಿದ್ದ ವ್ಯಾಪಾರ–ವ್ಯವಹಾರಗಳನ್ನು ಸರಿದಾರಿಗೆ ತರಲು ಅವಕಾಶ ಸಿಗಲಿದೆ. ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ತೀರ್ಮಾನ ಮಾಡಿರಿ.

ವೃಶ್ಚಿಕ: ಮಕ್ಕಳ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ಮನಸ್ಸಿನಲ್ಲಿ ನೆಮ್ಮದಿ ಮೂಡುತ್ತದೆ. ಹಿರಿಯರ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಚಿಂತೆ ಬೇಡ. ಬರಹಗಾರರಿಗೆ ವಿಶೇಷ ಕಥಾವಸ್ತು ಸಿಗಲಿದೆ.

ಧನು: ನಿರ್ಧಾರ ತೆಗೆದುಕೊಳ್ಳುವ ಮುನ್ನ, ಸಹವರ್ತಿಗಳ ಅಭಿಪ್ರಾಯಗಳನ್ನು ಪಡೆಯಿರಿ. ಮನಃಶಾಸ್ತ್ರಜ್ಞರಿಗೆ ವೃತ್ತಿಯಲ್ಲಿ ಹಿನ್ನಡೆ ಉಂಟಾಗಬಹುದು. ಧೈರ್ಯ ಮತ್ತು ಜನರನ್ನು ಸಂಭಾಳಿಸುವ ಶಕ್ತಿಯನ್ನು ಹೊಂದುವಿರಿ.

ಮಕರ: ಮುಕ್ತ ಮಾತುಕತೆಯ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದು ಬುದ್ಧಿವಂತಿಕೆಯ ಲಕ್ಷಣ. ಸಿನೆಮಾ ನಟ–ನಟಿಯರಿಗೆ ಹೆಚ್ಚಿನ ಅವಕಾಶಗಳು ಒದಗಿ ಬರಲಿವೆ.

ಕುಂಭ: ತಾಂತ್ರಿಕ ವಿದ್ಯಾಭ್ಯಾಸ ಪಡೆಯುತ್ತಿರುವವರಿಗೆ ಉತ್ತಮ ಫಲಿತಾಂಶ ಲಭಿಸಿ ಸಂತೋಷವಾಗುವುದು. ದುಶ್ಚಟಗಳಿಂದ ಮುಕ್ತರಾಗಲು ನಿರ್ಧಾರ ಮಾಡಿ. ವೃತ್ತಿಯಲ್ಲಿ ನೂತನ ಪ್ರಯತ್ನಗಳು ಲಾಭ ತಂದು ಕೊಡಲಿವೆ.

ಮೀನ: ಇಂದ್ರಿಯಗಳ ಚಾಂಚಲ್ಯತೆಯು ಏಕಾಗ್ರತೆಯನ್ನು ಭಂಗಗೊಳಿಸುವ ಜೊತೆಗೆ, ನಿಮ್ಮ ಹಾದಿಯನ್ನು ತಪ್ಪಿಸುವ ಸಾಧ್ಯತೆ ಹೆಚ್ಚಿದೆ. ಮಕ್ಕಳ ಆರೋಗ್ಯ ಸುಧಾರಿಸಲಿದೆ. ಆತ್ಮೀಯರ ಸಮಾಗಮವಾಗಲಿದೆ.

ಪದಬಂಧ 5914

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಸರಾಗವನ್ನು ಹೀಗೂ ಹೇಳಬಹುದು (3)
4.ಬೇಸಾಯಕ್ಕೊಂದು ಪರ್ಯಾಯ ಪದ (3)
6.ವರ್ಣರಹಿತ ಅಥವಾ ತಿಳಿಬಣ್ಣದ ಪಾರದರ್ಶಕ ಕಲ್ಲಿನ ಚೂರು (3)
7.ಕಡಗ ಧರಿಸಿದವನು ಕೇಳಿದ ಸಾಲ (2)
8.ನಿರಾಶೆ ಹೊಂದಿದವನು ಇಲ್ಲಿದ್ದಾನೆ (6)
10.ರಸಿಕ ಜನರಿಗೆ ಸಿಕ್ಕಿರುವ ಸೂಟಿ! (2)
12.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
14.ತಿಳಿಯಲು ಕಠಿಣವಾದ ಕಾವ್ಯಶೈಲಿಯು ನಾಕದಲ್ಲಿದೆ! (6)
16.ಗಾವಿಲನ ನೋಡಿದಾಗ ಸಂಗೀತ ನೆನಪಾಯಿತಲ್ಲ! (2)
17.ಕಲಿಯಿಂದ ಬಂದಿರುವ ದೋಷ! (3)
19.ದರ ಹೇಳುವವನಿಗೆ ಅಂಟಿದ ಸಿಡುಬುರೋಗ (3)
20.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)

ಮೇಲಿಂದ ಕೆಳಕ್ಕೆ

1.ಗಾಳಿಯ ಚಲನೆ (5)
2.ಆರಂಭದಲ್ಲಿ ಕೊನೆಗೊಂಡಿರುವ ಹಬ್ಬ (4)
3.ಕರುವಿನ ತಾಯಿಯಿಲ್ಲಿ ತಿರುಗಿನಿಂತಿದೆ! (2)
4.ಆಕಳು ಹಿಡಿದಿರುವ ಚಾರ ಇಲ್ಲಿದ್ದಾನೆ (2)
5.ಬಗ್ಗದೇ ನೋಡಿದಾಗ ಕಾಣಿಸಿದ ಕೊಚ್ಚೆ (3)
7.ನಿರೂಪಣೆಯನ್ನು ಹೀಗೆನ್ನಿ (3)
9.ಮರುಕ ತೋರುತ್ತಿರುವವನು ಹುಚ್ಚ (3)
11.ಜನರು ನೋಡಿದ್ದು ಅಂತಃಪುರ (3)
13.ಗುರಿಯಲ್ಲಿ ಪರಾಧೀನತೆ (5)
15.ಉಗ್ರವಾದ ಆಜ್ಞೆ (4)
16.ಸುಮಾರು ಎರಡು ಮೈಲಿ (3)
17.ಕಮ್ಮಾರನ ಕೈ (2)
18.ಸಾವಿರ ಸಲ ಕೇಳಿದಾಗ ಸಿಕ್ಕಿರುವ ಉದ್ಧರಿಯು ಉಲ್ಟಾ ಆಗಿದೆ (2)



5913ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತವರು 5.ಮಧುಕರಿ
6.ದ್ರವ 7.ದಸ್ತಗಿರಿ
9.ಮಿಟ್ಟೆ 10.ವ್ಯಾಸ
12.ಕಟುನುಡಿ 15.ಮವಾ
16.ಸದಾಚಾರ 17.ಸಚಿತ್ರ

ಮೇಲಿಂದ ಕೆಳಕ್ಕೆ:
1.ಆಮಲಕ 2.ಮಕರಂದ
3.ತರಾತುರಿ 4.ರುದ್ರಭೂಮಿ
8.ಗಿಲೀಟು 11.ಸಹವಾಸ
12.ಕಟಿಸೂತ್ರ 13.ಡಿಕ್ರಿದಾರ
14.ಆವರಣ

ಸುಡೊಕು 6299

	5		7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6298 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಪಿಎಲ್‌ಐ 1.1ಕ್ಕೆ ಇಂದು ಚಾಲನೆ • 14,760 ಉದ್ಯೋಗ ಸೃಷ್ಟಿ ನಿರೀಕ್ಷೆ

ಉಕ್ಕು ವಲಯಕ್ಕೆ ಉತ್ತೇಜನ: ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಉಕ್ಕು ತಯಾರಿಕೆ ವಲಯಕ್ಕೆ ಮತ್ತೊಂದು ಸುತ್ತಿನಲ್ಲಿ ಉತ್ಪಾದನೆ ಆಧರಿತ ಉತ್ತೇಜನ (ಪಿಎಲ್‌ಐ) ಯೋಜನೆಯಡಿ ಸೌಲಭ್ಯ ಕಲ್ಪಿಸಲು ಮುಂದಾಗಿದೆ.

ಪಿಎಲ್‌ಐ ಯೋಜನೆ 1.1ಕ್ಕೆ ಸೋಮವಾರ ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವ ಎಚ್‌.ಡಿ. ಕುಮಾರಸ್ವಾಮಿ ಚಾಲನೆ ನೀಡಲಿದ್ದಾರೆ.

ಮಿಶ್ರಲೋಹದ ಉಕ್ಕು ಆಮದು ಪ್ರಮಾಣ ತಗ್ಗಿಸುವ ಮೂಲಕ ದೇಶೀಯ ಮಟ್ಟದಲ್ಲಿ ಉತ್ಪಾದನೆ ಹೆಚ್ಚಳಕ್ಕೆ ಒತ್ತು ನೀಡುವ ದೃಷ್ಟಿಯಿಂದ ಸರ್ಕಾರವು ಈ ವಲಯಕ್ಕೂ ಪಿಎಲ್‌ಐ ಯೋಜನೆಯನ್ನು ವಿಸ್ತರಿಸಿದೆ.

ಈ ಹೊಸ ಕ್ರಮದಿಂದಾಗಿ ₹27,106 ಕೋಟಿ ಬಂಡವಾಳ ಹೂಡಿಕೆ

ಯಾಗಲಿದ್ದು, ನೇರವಾಗಿ 14,760 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. 79 ಲಕ್ಷ ಟನ್ ಮಿಶ್ರಲೋಹದ ಉಕ್ಕು ಉತ್ಪಾದನೆ ಆಗುವ ನಿರೀಕ್ಷೆಯಿದೆ.

ಕಚ್ಚಾ ವಸ್ತುಗಳ ಬೆಲೆ ಏರಿಕೆ ಮತ್ತು ಚೀನಾದಿಂದ ಕಡಿಮೆ ಗುಣಮಟ್ಟದ ಉಕ್ಕು ಆಮದು ಹೆಚ್ಚಳದಿಂದ ಸಂಕಷ್ಟಕ್ಕೆ ಸಿಲುಕಿರುವ ದೇಶದ ಉಕ್ಕು ಉದ್ಯಮಕ್ಕೆ ಈ ಯೋಜನೆಯು ಹೆಚ್ಚು ಬಲ ನೀಡಲಿದೆ ಎಂದು ಹೇಳಲಾಗಿದೆ.

ಮಿಶ್ರಲೋಹದ ಉಕ್ಕನ್ನು ಆಟೊಮೊಬೈಲ್, ರಕ್ಷಣೆ ಮತ್ತು ಎಲೆಕ್ಟ್ರಾನಿಕ್ ವಲಯದಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ.

ಕಳೆದ ವರ್ಷದ ನವೆಂಬರ್ ಅಂತ್ಯಕ್ಕೆ ಕಂಪನಿಗಳು ₹18,300 ಕೋಟಿ ಬಂಡವಾಳ ಹೂಡಿಕೆ ಮಾಡಿದ್ದು, 8,660 ಉದ್ಯೋಗಗಳು ಸೃಷ್ಟಿಯಾಗಿವೆ.

ಸರ್ಕಾರವು ಪಿಎಲ್‌ಐ ಅಡಿ ಪಾಲ್ಗೊಳ್ಳುವ ಕಂಪನಿಗಳ ಜೊತೆಗೆ ನಿಯಮಿತವಾಗಿ ಮಾತುಕತೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದೆ. ಹಾಗಾಗಿ, ಹೆಚ್ಚಿನ ಬಂಡವಾಳ ಆಕರ್ಷಿಸಲು ಈ ಕ್ರಮಕೈಗೊಂಡಿದೆ ಎಂದು ಹೇಳಲಾಗಿದೆ.

2020ರಲ್ಲಿ ಕೋವಿಡ್‌ನಿಂದ ಲಾಕ್‌ಡೌನ್ ಆದ ವೇಳೆ ದೇಶೀಯ ಮಟ್ಟದಲ್ಲಿ ತಯಾರಿಕೆಗೆ ಪ್ರೋತ್ಸಾಹ ನೀಡಲು ಉತ್ಪಾದನೆ ಆಧರಿತ ಉತ್ತೇಜನ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿತ್ತು. ಆರಂಭದಲ್ಲಿ ಮೂರು ವಲಯಗಳಲ್ಲಷ್ಟೇ ಈ ಯೋಜನೆ ಅನುಷ್ಠಾನಗೊಂಡಿತ್ತು. ಅದೇ ವರ್ಷದ ನವೆಂಬರ್‌ನಲ್ಲಿ ಉಕ್ಕು ವಲಯಕ್ಕೂ ಇದನ್ನು ವಿಸ್ತರಿಸಲಾಯಿತು.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ 47 ಲಕ್ಷ ಟನ್ ಉಕ್ಕು ಆಮದು ಮಾಡಿಕೊಳ್ಳಲಾಗಿದೆ. ಇದರ ಹಿಂದಿನ ವರ್ಷದ ಇದೇ ಅವಧಿಯಲ್ಲಿ 33.3 ಲಕ್ಷ ಟನ್ ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 41ರಷ್ಟು ಏರಿಕೆಯಾಗಿದೆ.

23.1 ಲಕ್ಷ ಟನ್ ಉಕ್ಕು ರಫ್ತು ಮಾಡಲಾಗಿದೆ. ರಫ್ತು ಪ್ರಮಾಣದಲ್ಲಿ ಶೇ 36ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ಉಕ್ಕು ಸಚಿವಾಲಯ ತಿಳಿಸಿದೆ.

ಬಸ್ ಟಿಕೆಟ್ ದರ ಹೆಚ್ಚಳಕ್ಕೆ ಕೇಂದ್ರ ಕಾರಣ: ಲಾಡ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬಸ್ ಟಿಕೆಟ್ ದರ ಹೆಚ್ಚಳಕ್ಕೆ ಕೇಂದ್ರ ಸರ್ಕಾರವೇ ಕಾರಣ. ಡೀಸೆಲ್, ಪೆಟ್ರೋಲ್ ದರ ಹೆಚ್ಚಳವಾದಾಗ ಎಲ್ಲ ವಸ್ತುಗಳೂ ದುಬಾರಿ ಆಗುತ್ತವೆ. ಹೀಗಾಗಿ ಬಸ್ ಟಿಕೆಟ್ ದರವನ್ನು ಸಹ ಏರಿಕೆ ಮಾಡಲಾಗಿದೆ' ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ 1 ಲೀಟರ್ ಡೀಸೆಲ್ ಅನ್ನು ₹30ರಿಂದ ₹40ಕ್ಕೆ ಕೊಡಬಹುದು. ರಿಲಯನ್ಸ್ ಪೆಟ್ರೋಲ್ ಬಂಕ್ ಉಳಿಯಬೇಕು ಎನ್ನುವ ಉದ್ದೇಶದಿಂದ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡುತ್ತಿಲ್ಲ' ಎಂದು ಟೀಕಿಸಿದರು.

'ದಿನಕ್ಕೆ 1.16 ಕೋಟಿ ಜನರು ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದರಿಂದ 5,300 ಹೊಸ ಬಸ್ ಖರೀದಿಸಲಾಗಿದೆ. 8 ಸಾವಿರ ಸಾರಿಗೆ ಸಿಬ್ಬಂದಿ ನೇಮಕಕ್ಕೆ ಹಣಕಾಸು ಇಲಾಖೆ ಅನುಮತಿ ನೀಡಿದ್ದು, ಈಗಾಗಲೇ 4ರಿಂದ 5 ಸಾವಿರ ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ. ಹೀಗಾಗಿ ದರ ಏರಿಕೆ ಅನಿವಾರ್ಯ ಎಂದರು.

₹56 ಸಾವಿರ ಕೋಟಿ ಸಾಲ ಪೂರ್ವ ಪಾವತಿಸಿದ ಹೆದ್ದಾರಿ ಪ್ರಾಧಿಕಾರ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ₹56 ಸಾವಿರ ಕೋಟಿ ಸಾಲವನ್ನು ಪೂರ್ವ ಪಾವತಿ ಮಾಡಿದೆ. ಇದರಿಂದ ಪ್ರಾಧಿಕಾರಕ್ಕೆ ₹1,200 ಕೋಟಿ ಬಡ್ಡಿ ಉಳಿತಾಯವಾಗಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಆರಂಭದಲ್ಲಿ ಪ್ರಾಧಿಕಾರದ ಸಾಲದ ಮೊತ್ತವು ₹3.35 ಲಕ್ಷ ಕೋಟಿ ಇತ್ತು. ಮೂರನೇ ತ್ರೈಮಾಸಿಕದ ಅಂತ್ಯಕ್ಕೆ ₹2.76 ಲಕ್ಷ ಕೋಟಿಗೆ ಇಳಿದಿದೆ ಎಂದು ಹೇಳಿದ್ದಾರೆ.

ಪ್ರಾಧಿಕಾರವು ಹೆದ್ದಾರಿಗಳ ಅಭಿವೃದ್ಧಿಗಾಗಿ ಮೂಲಸೌಕರ್ಯ ಟ್ರಸ್ಟ್ ಮೂಲಕ ಹಣ ಸಂಗ್ರಹಿಸುತ್ತದೆ. ಇದರಡಿ ಸಂಗ್ರಹವಾದ ₹15,700 ಕೋಟಿಯನ್ನು ಸಾಲ ಪೂರ್ವ ಪಾವತಿ ಮಾಡಿದೆ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಸಣ್ಣ ಉಳಿತಾಯ

ನಿಧಿಯಿಂದ ₹30 ಸಾವಿರ ಕೋಟಿ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ (ಎಸ್‌ಬಿಐ) ₹10 ಸಾವಿರ ಕೋಟಿ ಸಾಲ ಪಡೆಯಲಾಗಿತ್ತು. ಈ ಸಾಲಕ್ಕೆ ಹೆಚ್ಚಿನ ಬಡ್ಡಿ ನೀಡಬೇಕಿತ್ತು. ಹಾಗಾಗಿ, ಈ ಸಾಲವನ್ನು ಪೂರ್ವ ಪಾವತಿ ಮಾಡಲಾಗಿದೆ. ಆ ಮೂಲಕ ಪ್ರಾಧಿಕಾರದ ಸಾಲದ ಹೊಣೆಗಾರಿಕೆಯು ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ.

2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪ್ರಾಧಿಕಾರಕ್ಕೆ ₹1.68 ಲಕ್ಷ ಕೋಟಿ ಅನುದಾನವನ್ನು ಹಂಚಿಕೆ ಮಾಡಿದ್ದರು.

ಬಂಡವಾಳ ಹೊರಹರಿವು ಮುಂದುವರಿಕೆ

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಈ ತಿಂಗಳ ಮೊದಲ ಮೂರು ವಹಿವಾಟಿನಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹4,285 ಕೋಟಿ ಬಂಡವಾಳವನ್ನು ಹಿಂಪಡೆದಿದ್ದಾರೆ.

ಈ ತಿಂಗಳಿನಲ್ಲಿ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಪ್ರಕಟವಾಗಲಿದೆ. ಅಲ್ಲದೆ, ದೇಶೀಯ ಷೇರುಪೇಟೆಯಲ್ಲಿ ಸೂಚ್ಯಂಕಗಳ ಏರಿಕೆ ನಡುವೆಯೂ ಬಂಡವಾಳ ವಾಪಸ್ ಪಡೆಯುವುದು ಮುಂದುವರಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಒಟ್ಟು ₹15,446 ಕೋಟಿ ಬಂಡವಾಳ ಹೂಡಿಕೆಯಾಗಿದೆ.

'ಡಾಲರ್ ಮೌಲ್ಯ ಬಲಗೊಳ್ಳುತ್ತಿದೆ. ಅಲ್ಲದೆ, ಅಮೆರಿಕದ ಬಾಂಡ್‌ಗಳ ಗಳಿಕೆ ಹೆಚ್ಚಿದೆ. ಹಾಗಾಗಿ, ವಿದೇಶಿ ಬಂಡವಾಳದ ಹೊರಹರಿವು ಮುಂದುವರಿಯಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಎಸ್‌ಐಎಫ್ ಹೂಡಿಕೆ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಷೇರು ಮಾರುಕಟ್ಟೆ ಆಧರಿತ ಹೂಡಿಕೆಗಳಲ್ಲಿ ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧ, ಆದರೆ ಗಳಿಕೆ ಸಾಧ್ಯತೆಯೂ ಹೆಚ್ಚಿಗೆ ಇರಬೇಕು ಎನ್ನುವವರಿಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹೊಸ ಆಯ್ಕೆಯೊಂದನ್ನು ನೀಡಿದೆ. ಹೌದು, ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್ (ಎಸ್‌ಐಎಫ್) ಎನ್ನುವ ಹೂಡಿಕೆಯನ್ನು ಪರಿಚಯಿಸಿದೆ.

ಏನಿದು ಫಂಡ್? ಇದು ಹೇಗೆ ಕೆಲಸ ಮಾಡುತ್ತದೆ? ಯಾರಿಗೆ ಇದು ಸೂಕ್ತ ಹೂಡಿಕೆ? ಹೀಗೆ ಫಂಡ್ ಸುತ್ತ ಇರುವ ಎಲ್ಲ ಪ್ರಶ್ನೆಗಳಿಗೂ ಉತ್ತರ ಕಂಡುಕೊಳ್ಳೋಣ ಬನ್ನಿ.

ಏನಿದು ಫಂಡ್?: ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್ ಒಂದು ಹೊಸ ಮಾದರಿಯ ಹೂಡಿಕೆಯಾಗಿದೆ. ಮ್ಯೂಚುವಲ್ ಫಂಡ್ ಮತ್ತು ಪೋರ್ಟ್ ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವಿಸಸ್ (ಪಿಎಂಎಸ್) ನಡುವೆ ಇದ್ದ ಹೂಡಿಕೆ ಆಯ್ಕೆಗಳ ಕೊರತೆಯನ್ನು ಇದು ನೀಗಿಸಲಿದೆ.

ಸದ್ಯ ಕಡಿಮೆ ಮೊತ್ತವನ್ನು ಹೂಡಿಕೆ ಮಾಡುತ್ತಾ ಹೋಗುವವರಿಗೆ ಮ್ಯೂಚುವಲ್ ಫಂಡ್ ಆಯ್ಕೆ ಮಾತ್ರ ಇತ್ತು. ದೊಡ್ಡ ಮೊತ್ತ ಹೂಡಿಕೆ ಮಾಡುವ ಹೈನೆಟ್ ವರ್ತ್ ವ್ಯಕ್ತಿಗಳು ಪೋರ್ಟ್ ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವಿಸಸ್ ಮೊರೆ ಹೋಗುತ್ತಿದ್ದರು. ಇವೆರಡರ ನಡುವೆ ಮಧ್ಯಮ ಗಾತ್ರದ ಹೂಡಿಕೆ ಮಾಡುವವರಿಗೆ ವೃತ್ತಿಪರ ಹೂಡಿಕೆ ಸೇವೆಯ ಕೊರತೆ ಇತ್ತು. ಅದನ್ನು ತಪ್ಪಿಸಲು ಸೆಬಿ ಇತ್ತೀಚೆಗಷ್ಟೇ ಎಸ್‌ಐಎಫ್ ಪರಿಚಯಿಸಿದೆ.

ಇದು ಯಾರಿಗೆ ಸೂಕ್ತ?: ಎಸ್‌ಐಎಫ್‌ಗಳನ್ನು ಷೇರು ಮಾರುಕಟ್ಟೆ ಬಗ್ಗೆ ಹೆಚ್ಚು ತಿಳಿವಳಿಕೆ ಹೊಂದಿರುವ, ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿರುವ ಹೂಡಿಕೆದಾರರಿಗಾಗಿ ತರಲಾಗಿದೆ. ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳಲ್ಲಿ ಕನಿಷ್ಠ ಹೂಡಿಕೆ ₹10 ಲಕ್ಷ ಆಗಿದೆ.

ಫಂಡ್ ಮ್ಯಾನೇಜರ್‌ಗಳಿಗೆ ಇಲ್ಲಿ ಹೂಡಿಕೆ ತೀರ್ಮಾನ ತೆಗೆದುಕೊಳ್ಳಲು ಹೆಚ್ಚಿನ ಸ್ವಾತಂತ್ರ್ಯ ಸಿಗಲಿದೆ. ಮ್ಯೂಚುವಲ್ ಫಂಡ್‌ಗಳನ್ನು ನಿರ್ವಹಿಸುವ ಫಂಡ್ ಮ್ಯಾನೇಜರ್‌ಗಳಿಗೆ ಸಾಕಷ್ಟು ನಿಬಂಧನೆಗಳಿವೆ. ಆದರೆ, ಎಸ್‌ಐಎಫ್ ಹೂಡಿಕೆ ನಿರ್ವಹಿಸುವ ಫಂಡ್ ಮ್ಯಾನೇಜರ್‌ಗಳಿಗೆ ನಿಬಂಧನೆಗಳನ್ನು ಸಡಿಲಿಸಿ, ಹೂಡಿಕೆದಾರರ ಮೊತ್ತ ತೊಡಗಿಸುವಾಗ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ಸ್ವಾತಂತ್ರ್ಯ ನೀಡಲಾಗಿದೆ.

ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳು ಹೆಚ್ಚು ರಿಸ್ಕ್ ಇರುವ ಷೇರು ಮಾರುಕಟ್ಟೆ ಆಧರಿತ ಈಕ್ವಿಟಿ ಹೂಡಿಕೆಗಳು ಮತ್ತು ಕಡಿಮೆ ರಿಸ್ಕ್ ಇರುವ ಡೆಟ್ ಹೂಡಿಕೆಗಳ ನಡುವೆ ಬರುವ ಎಲ್ಲ ಮಾದರಿಯ ಆಯ್ಕೆಗಳನ್ನು ಪರಿಗಣಸಬಹುದಾಗಿದೆ. ಹಾಗೆಂದ ಮಾತ್ರಕ್ಕೆ ಇಲ್ಲಿ ಎಲ್ಲವನ್ನೂ ಫಂಡ್ ಮ್ಯಾನೇಜರ್ ವಿವೇಚನೆಗೆ ಬಿಟ್ಟಿದ್ದಾರೆ ಅಂತಲ್ಲ. ಇಲ್ಲೂ ಕೂಡ ನೀತಿ– ನಿಬಂಧನೆಗಳಿವೆ. ಹೂಡಿಕೆದಾರರ ಮೊತ್ತ ಕರಗದಂತೆ ನೋಡಿಕೊಳ್ಳಲು ಸೆಬಿ ಒಂದಷ್ಟು ಚೌಕಟ್ಟನ್ನು ಫಂಡ್ ಮ್ಯಾನೇಜರ್‌ಗಳಿಗೆ ಹಾಕಿದೆ.

ಇದು ಮ್ಯೂಚುವಲ್ ಫಂಡ್‌ಗಿಂತ ಹೇಗೆ ಭಿನ್ನ?: ಮ್ಯೂಚುವಲ್ ಫಂಡ್‌ನಲ್ಲಿ ಕಡಿಮೆ ಮೊತ್ತದ ಹೂಡಿಕೆಯೂ ಸಾಧ್ಯ. ಇಲ್ಲಿ ರಿಸ್ಕ್ ತೀರಾ ಜಾಸ್ತಿ ಇರುವುದಿಲ್ಲ. ಆದರೆ, ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ನಲ್ಲಿ ಹೂಡಿಕೆಗೆ ₹10 ಲಕ್ಷಕ್ಕಿಂತ ಹೆಚ್ಚಿನ ಮೊತ್ತ ಅಗತ್ಯ. ಅಲ್ಲದೆ, ಇಲ್ಲಿ ಮ್ಯೂಚುವಲ್ ಫಂಡ್‌ಗಿಂತ ಅತಿಹೆಚ್ಚಿನ ರಿಸ್ಕ್ ಇರುತ್ತದೆ. ಎಸ್‌ಐಎಫ್ ಹೂಡಿಕೆಗಳಲ್ಲಿ ಗಳಿಕೆಯ ಸಾಧ್ಯತೆಯೂ ಹೆಚ್ಚಿರುತ್ತದೆ. ಎಸ್‌ಐಎಫ್‌ಗಳು ಒಂದೇ ಕಂಪನಿಯ ಷೇರಿನ ಮೇಲೆ ಶೇ 15ರಷ್ಟು ಮೊತ್ತ ಹೂಡಿಕೆ ಮಾಡಬಹುದು.

ಆದರೆ, ಸಾಂಪ್ರದಾಯಿಕ ಮ್ಯೂಚುವಲ್ ಫಂಡ್‌ಗಳಲ್ಲಿ ಒಂದೇ ಕಂಪನಿಯ ಷೇರಿನ ಮೇಲೆ ಶೇ 10ಕ್ಕಿಂತ ಹೆಚ್ಚಿನ ಮೊತ್ತ ತೊಡಗಿಸುವಂತಿಲ್ಲ. ಎಸ್‌ಐಎಫ್‌ಗಳು ನಿರ್ದಿಷ್ಟ ಆದಾಯ ಕೊಡುವ ಬಾಂಡ್, ಸಾಲ ಪತ್ರಗಳು ಇತ್ಯಾದಿ ಡೆಟ್ ಹೂಡಿಕೆಗಳಲ್ಲಿ ತೊಡಗಿಸಲು ಅವಕಾಶವಿದೆ. ಡೆಟ್ ಹೂಡಿಕೆಗಳಲ್ಲಿ ಒಂದೇ ಕಂಪನಿಯ ಮೇಲೆ (ಸಿಂಗಲ್ ಇಶ್ಯೂವರ್) ಶೇ 20ರಷ್ಟು ಹೂಡಿಕೆ ಮಾಡಬಹುದಾಗಿದೆ. ಬೋರ್ಡ್ ಮತ್ತು ಟ್ರಸ್ಟಿಗಳಿಂದ ಅನುಮೋದನೆ ಪಡೆದರೆ ಈ ಹೂಡಿಕೆ ಮೊತ್ತವನ್ನು ಶೇ 25ರಷ್ಟು ಮಾಡಬಹುದಾಗಿದೆ.

ಇನ್ನು ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳ ಮೇಲೆ ಎಸ್‌ಐಎಫ್‌ಗಳು ತಮ್ಮ ಶೇ 20ರಷ್ಟು ಹೂಡಿಕೆಯನ್ನು ತೊಡಗಿಸಲು ಅವಕಾಶ ಕಲ್ಪಿಸಲಾಗಿದೆ.

ಫಂಡ್ ಶುಲ್ಕ ಹೇಗೆ?: ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳಲ್ಲಿ ಶುಲ್ಕ ಮ್ಯೂಚುವಲ್ ಫಂಡ್‌ಗಳ ಮಾದರಿಯಲ್ಲೇ ಇರುತ್ತದೆ. ಎಕ್ಸ್‌ಪೆನ್ಸ್ ರೇಷಿಯೊವನ್ನು (ನಿರ್ವಹಣಾ ಕಮಿಷನ್/ಶುಲ್ಕ) ಮ್ಯೂಚುವಲ್ ಫಂಡ್‌ಗಳು ತೆಗೆದುಕೊಳ್ಳುವ ಹಾಗೆ ಈ ಫಂಡ್‌ಗಳು ತೆಗೆದುಕೊಳ್ಳುತ್ತವೆ. ಉದಾಹರಣೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಎಕ್ಸ್‌ಪೆನ್ಸ್ ರೇಷಿಯೊ ಶೇ 1ರಿಂದ ಶೇ 2ರ ವರೆಗೆ ಇರುತ್ತದೆ. ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳು ಎಷ್ಟು ಎಕ್ಸ್‌ಪೆನ್ಸ್ ರೇಷಿಯೊ ಹಾಕುತ್ತವೆ ಎನ್ನುವುದನ್ನು ಇನ್ನಷ್ಟೇ ತಿಳಿಯಬೇಕಿದೆ.

ಫಂಡ್‌ನ ಅನುಕೂಲ ಏನು: ಹೆಚ್ಚು ರಿಸ್ಕ್ ತೆಗೆದುಕೊಂಡು ಹೆಚ್ಚು ಗಳಿಸಬೇಕು ಎನ್ನುವವರಿಗೆ ಒಂದು ಉತ್ತಮ ಹೂಡಿಕೆ ಆಯ್ಕೆಯಾಗಿದೆ. ಮ್ಯೂಚುವಲ್ ಫಂಡ್‌ಗಿಂತ ಹೆಚ್ಚಿನ ಗಳಿಕೆ ತಂದುಕೊಡುವ ಸಾಮರ್ಥ್ಯ ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳಿಗೆ ಇದೆ. ಈ ಫಂಡ್ ಹೂಡಿಕೆಗಳಲ್ಲಿ ವೈವಿಧ್ಯ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಈ ಫಂಡ್‌ಗಳನ್ನು ನಿರ್ದಿಷ್ಟ ವಲಯದಲ್ಲಿ ಅನುಭವ ಹೊಂದಿರುವ ವೃತ್ತಿಪರರು ನಿರ್ವಹಿಸುತ್ತಾರೆ.

ಅನನುಕೂಲ ಏನು?: ಈ ಫಂಡ್‌ಗಳಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಗಳಿಗಿಂತ ಹೆಚ್ಚಿನ ರಿಸ್ಕ್ ಇರುತ್ತದೆ. ಈ ಫಂಡ್‌ಗಳನ್ನು ತಕ್ಷಣಕ್ಕೆ ನಗದೀಕರಣ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಅಲ್ಲದೆ, ಮ್ಯೂಚುವಲ್ ಫಂಡ್‌ಗಳಿಗಿಂತ ಹೆಚ್ಚಿನ ಎಕ್ಸ್‌ಪೆನ್ಸ್ ರೇಷಿಯೊ (ನಿರ್ವಹಣಾ ಶುಲ್ಕ) ವಿಧಿಸಬಹುದು.

ಕಿವಿಮಾತು: ಸ್ಪೆಷಲೈಸ್ಡ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳನ್ನು ಸೆಬಿ ಪರಿಚಯಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಹೆಚ್ಚು ರಿಸ್ಕ್ ತೆಗೆದುಕೊಂಡು ಹೆಚ್ಚು ಗಳಿಸಬೇಕು ಎನ್ನುವವರಿಗೆ ಇದೊಂದು ಪರ್ಯಾಯ ಆಯ್ಕೆ. ಆದರೆ, ಇದು ಹೊಸ ಮಾದರಿಯ ಹೂಡಿಕೆ ಉತ್ಪನ್ನವಾಗಿದೆ. ಇದರಿಂದ ಹಣ ತೊಡಗಿಸುವ ಮುನ್ನ ಸರಿಯಾಗಿ ಅರಿತು ಮುನ್ನಡೆಯುವುದು ಬಹಳ ಮುಖ್ಯ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಅನಿಶ್ಚಿತತೆ ನಡುವೆ ಜಿಗಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ದಾಖಲಿಸಿವೆ. ಜನವರಿ 3ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಗಳಿಕೆ ಕಂಡಿವೆ. 79,233 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.67ರಷ್ಟು ಗಳಿಸಿಕೊಂಡಿದೆ. 24,004 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.8ರಷ್ಟು ಹೆಚ್ಚಳವಾಗಿದೆ.

ವಾರದ ಲೆಕ್ಕಾಚಾರದಲ್ಲಿ ಗಳಿಕೆ ಕಂಡುಬಂದಿದ್ದರೂ ಮಾರುಕಟ್ಟೆಯಲ್ಲಿ ಅಷ್ಟು ಸಕಾರಾತ್ಮಕ ವಾತಾವರಣವಿಲ್ಲ. ಆರ್ಥಿಕ ಪ್ರಗತಿ ಕುಂಠಿತ, ವಿದೇಶಿ ಹೂಡಿಕೆದಾರರಿಂದ ಷೇರುಗಳ ಮಾರಾಟದ ಒತ್ತಡ, ಡೊನಾಲ್ಡ್ ಟ್ರಂಪ್ ಅಧ್ಯಕ್ಷಗಾದಿಗೇರಿದ ಮೇಲೆ ಅಮೆರಿಕದ ವ್ಯಾಪಾರ ನೀತಿಗಳ ಬಗ್ಗೆ ತಲೆದೋರುವ ಅನಿಶ್ಚಿತತೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರುತ್ತಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 2.45, ಬ್ಯಾಂಕ್ 0.63, ಫೈನಾನ್ಸ್ ಶೇ 0.22ರಷ್ಟು ಕುಸಿದಿವೆ. ನಿಫ್ಟಿ ಆಟೊ ಶೇ 3.93, ಅನಿಲ ಮತ್ತು ತೈಲ ಶೇ 3.4, ಎನರ್ಜಿ ಶೇ 2.44, ಎಫ್‌ಎಂಸಿಜಿ ಶೇ 2.43, ಫಾರ್ಮಾ ಶೇ 1.11, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.73, ಮಾಧ್ಯಮ ಶೇ 0.43, ಲೋಹ ಶೇ 0.11 ಮತ್ತು ನಿಫ್ಟಿ ಐ.ಟಿ ಶೇ 0.01ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ವಿಪ್ರೊ ಶೇ 4.74, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 4.35, ಐಸಿಐಸಿಐ ಬ್ಯಾಂಕ್ ಶೇ 3.19, ಡಾ.ರೆಡ್ಡೀಸ್ ಶೇ 2.77, ಅದಾನಿ ಪೋರ್ಟ್ಸ್ ಶೇ 2.74, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.7, ಟೆಕ್ ಮಹೀಂದ್ರ ಶೇ 1.33, ಟಿಸಿಎಸ್ ಶೇ 1.27, ಎಸ್‌ಬಿಐ ಶೇ 0.76, ಸನ್ ಫಾರ್ಮಾ ಶೇ 0.71, ಟಾಟಾ ಸ್ಟೀಲ್ ಶೇ 0.47 ಮತ್ತು ಏರ್‌ಟೆಲ್ ಶೇ 0.31ರಷ್ಟು ಕುಸಿದಿವೆ.

ಒಎನ್‌ಜಿಸಿ ಶೇ 9.25, ಐಷರ್ ಮೋಟರ್ಸ್ ಶೇ 8.86, ಮಾರುತಿ ಸುಜುಕಿ ಶೇ 8.81, ಬಜಾಜ್ ಫಿನ್‌ಸರ್ವ್ ಶೇ 7.38, ಬಜಾಜ್ ಫೈನಾನ್ಸ್ ಶೇ 7.26, ಅದಾನಿ ಎಂಟರ್‌ಪ್ರೈಸಸ್ ಶೇ 6.45, ಟಾಟಾ ಮೋಟರ್ಸ್ ಶೇ 5.31, ಇಂಡಸ್ ಇಂಡ್ ಬ್ಯಾಂಕ್ ಶೇ 4.67, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 4.6, ಮಹಿಂದ್ರ ಆ್ಯಂಡ್ ಮಹೀಂದ್ರ ಶೇ 4.5, ಶ್ರೀರಾಮ್ ಫೈನಾನ್ಸ್ ಶೇ 4.42, ಟೈಟನ್ ಶೇ 4.36ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರದಿಂದ ಕಂಪನಿಗಳ 3ನೇ ತ್ರೈಮಾಸಿಕ ಫಲಿತಾಂಶ ಹೊರಬೀಳಲಿದೆ. ಟಿಸಿಎಸ್, ಟಾಟಾ ಎಲೆಕ್ಸಿ, ಯಶ್ ಹೈ ವೋಲ್ಟೇಜ್ , ಜಿಎಂ ಬ್ರಿವರಿಸ್, ಕೃಷ್ಣ ವೆಂಚರ್ಸ್, ಎಮರಾಲ್ಡ್ ಫೈನಾನ್ಸ್ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಉದ್ಯೋಗಾವಕಾಶ
Domestic Helpers / Housekeeping
ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿತುನ್: 9112959375.

General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ, ಬ್ರಿಟಾನಿಯಾ, TVSಕಂಪನಿಗಳಿಗೆ SSLC, PUC, Degree, Diploma, ITIನವರು 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036791033

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9900859248

ಪ್ರವಾಸ
Travel
21.01.2025 ಕುಂಭಮೇಳ ಪ್ರಯುಕ್ತ ರಿಯಯಿತಿ`ದರದಲ್ಲಿ 6ದಿನ ವಿಮಾನದಲ್ಲಿ`ಕಾಶಿ`ಗಯಾ` ಅಯೋಧ್ಯಾ ಅಲಹಾಬದ್ (ಕೆಲವೇ ಸೀಟುಗಳಿವೆ) 06/03/2025, 10/14ದಿನಗಳು ರೈಲು/ವಿಮಾನದಲ್ಲಿ`ದೆಹಲಿ ಮಥುರ`ಆಗ್ರ` ಅಲಹಾಬದ್ ಕಾಶಿ,ಗಯಾ,ಅಯೋಧ್ಯೆ ಹರಿದ್ವರ, ಇತ್ಯಾದಿ ಜನವರಿ ಫೆಬ್ರುವರಿಯಲ್ಲಿ ಅಂಡಮಾನ್`Royal Package "ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್" -9739847429/ 9845560219

ಸೋಮನಾಥ್ ದ್ವಾರಕಾ ಮಾತ್ರಗಯಾ,ಉಜ್ಜಯಿನಿ ಓಂಕಾರೇಶ್ವರ್ 07.02.2025 14.02.2025 ರಿಂದ 10 ದಿನಗಳು. ಅಯೋಧ್ಯ ಪ್ರಯಾಗ್ ರಾಜ್ ಕಾಶಿ,ಗಯಾ, ಬೈದ್ಯನಾಥಧಾಮ್ 06.03.2025 ರಿಂದ 7 ದಿನಗಳು. ಅಹಮದಾಬಾದ್ ಬುಜ್ ಕಚ್‌ಆಫ್‌ರನ್ ಸೋಮನಾಥ್ ದ್ವಾರಕಾ,ಮೊಢೇರ 10 ದಿನಗಳು. ಜೈಪುರ್ ಬಿಕನೇರ್,ಜೈಸಲ್‌ಮೇರ್ ಜೋದ್ ಪುರ್ ಮೌಂಟ್‌ಅಬು ಉದಯಪುರ್,ಪುಷ್ಕರ್ 10 ದಿನಗಳು. ಗ್ವಾಲಿಯರ್ ಖಜರಾಹೋ ಮಾರ್ಬಲ್‌ರಾಕ್ಸ್ ಜಬಲ್‌ಪುರ್ ಉಜ್ಜಯಿನಿ,ಓಂಕಾರೇಶ್ವರ್ ಇಂದೋರ್ 10ದಿನಗಳು. 27.03.2025 10.04.2025 18.04.2025 ರಿಂದ ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

20.01.2025 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. 06.03.2025 ಕಾಶಿ,ಅಯೋಧ್ಯ ಬುದ್ಧಗಯಾ,ಅಲಹಾಬಾದ್. 02.04.2025 ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಗುಲ್ಮಾರ್ಗ್. 23.04.2025 ಚಾರ್‌ಧಾಮ್ ಸಮೇತ ಪ್ರವಾಸ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 9448508708 9686708171

24.1.2025 ಗುರುವಾಯುರು, ಮುನ್ನಾರ್, ಕೊಚ್ಚಿ. ಅಲಪೀ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ರರಂಸಾ 5.2.2025 ಅಯೋದ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560| +91 9901641752 | 080-45557163/164
*Conditions apply

ಎಚ್‌–1ಬಿ ವೀಸಾ: ಭಾರತದ ಕಂಪನಿಗಳಿಗೆ ಅಗ್ರ ಪಾಲು

ನವದೆಹಲಿ (ಪಿಟಿಐ): ಅಮೆರಿಕ ಸರ್ಕಾರವು ಕಳೆದ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ನೀಡಿರುವ ಎಚ್‌–1ಬಿ ವೀಸಾಗಳ ಪೈಕಿ ಐದನೇ ಒಂದರಷ್ಟು ವೀಸಾಗಳು ಭಾರತದ ಮಾಹಿತಿ ತಂತ್ರಜ್ಞಾನ ಕಂಪನಿಗಳ ಪಾಲಾಗಿವೆ.

ಅಮೆರಿಕದ ಪೌರತ್ವ, ವಲಸೆ ಸೇವೆ ವಿಭಾಗದ (ಯುಎಸ್‌ಸಿಐಎಸ್) ಅಂಕಿಅಂಶಗಳ ವಿಶ್ಲೇಷಣೆಯಿಂದ ಈ ಮಾಹಿತಿ ತಿಳಿದುಬಂದಿದೆ. ಎಚ್‌–1ಬಿ ವೀಸಾ ವಲಸೆಯೇತರ ವೀಸಾ ಆಗಿದೆ. ಅಮೆರಿಕದ ಕಂಪನಿಗಳು ವಿದೇಶಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲು ಇದು ಅವಕಾಶ ಕಲ್ಪಿಸುತ್ತದೆ.

ಈ ಅವಧಿಯಲ್ಲಿ ಒಟ್ಟು 1.3 ಲಕ್ಷ ವೀಸಾ ವಿತರಿಸಲಾಗಿದ್ದು, ಈ ಪೈಕಿ 24,766 ವೀಸಾಗಳನ್ನು ಭಾರತದ ಐ.ಟಿ ಕಂಪನಿಗಳು ಪಡೆದುಕೊಂಡಿವೆ. ಇನ್ಫೊಸಿಸ್‌ನ 8,140 ಉದ್ಯೋಗಿಗಳಿಗೆ ಈ ವೀಸಾ ಸಿಕ್ಕಿದ್ದು, ಮುಂಚೂಣಿಯಲ್ಲಿದೆ. ಟಿಸಿಎಸ್ (5,274) ಹಾಗೂ ಎಚ್‌ಸಿಎಲ್ ಅಮೆರಿಕ (2,953) ಆ ನಂತರದ ಸ್ಥಾನದಲ್ಲಿವೆ.

ಅಮೆಜಾನ್ ಡಾಟ್ ಕಾಮ್ ಸರ್ವಿಸಸ್ ಎಲ್‌ಎಲ್‌ಸಿನ 9,265 ಉದ್ಯೋಗಿಗಳಿಗೆ ಈ ವೀಸಾ ಸಿಕ್ಕಿದೆ. ನ್ಯೂಜೆರ್ಸಿಯಲ್ಲಿ ಮುಖ್ಯ ಕಚೇರಿ ಹೊಂದಿರುವ ಕಾಗ್ನಿಜೆಂಟ್‌ನ 6,321 ಉದ್ಯೋಗಿಗಳು ಎಚ್‌–1ಬಿ ವೀಸಾ ಪಡೆದಿದ್ದಾರೆ.

ತಂತ್ರಜ್ಞಾನ ವಲಯದಲ್ಲಿ ಈ ವೀಸಾದ ಪ್ರಯೋಜನ ಪಡೆಯುವಲ್ಲಿ ಭಾರತದ ಕಂಪನಿಗಳು ಮುಂಚೂಣಿಯಲ್ಲಿವೆ. ವಿಪ್ರೊದ 1,634 ಹಾಗೂ ಟೆಕ್ ಮಹೀಂದ್ರದ 1,199 ಉದ್ಯೋಗಿಗಳಿಗೆ ಈ ವೀಸಾ ಸಿಕ್ಕಿದೆ.

ಉದ್ಯೋಗಕ್ಕಾಗಿ ವಿದೇಶಿ ಮಹಿಳೆಯರ ತಂತ್ರ

'ಸುಳ್ಳು ವಿವಾಹ': ಸಿಂಗಪುರ ಕಳವಳ

ಸಿಂಗಪುರ: ಸಿಂಗಪುರದಲ್ಲಿ ವಾಸಿಸಲು ಹಾಗೂ ಉದ್ಯೋಗ ಪಡೆಯುವುದಕ್ಕಾಗಿ ವಿದೇಶಿ ಮಹಿಳೆಯರು ಇಲ್ಲಿನ ಪುರುಷರೊಂದಿಗೆ ಮಾಡಿಕೊಳ್ಳುತ್ತಿರುವ 'ಸುಳ್ಳು ವಿವಾಹ'/'ಮೋಸದ ಮದುವೆ' ಅಥವಾ 'ಅನುಕೂಲಕರ ಮದುವೆ' ಬಗ್ಗೆ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಬಹುತೇಕ ಸಂದರ್ಭಗಳಲ್ಲಿ ಒಂದು ಗುಂಪು ಈ ರೀತಿಯ 'ಮದುವೆ'ಗಳನ್ನು ನೆರವೇರಿಸುವಲ್ಲಿ ಸಕ್ರಿಯವಾಗಿರುವುದು ಕಂಡುಬಂದಿದೆ. ಇಂತಹ ಮದುವೆಗಳು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತಿವೆ ಎಂದು ಸಿಂಗಪುರದ ವಲಸೆ ಮತ್ತು ತಪಾಸಣೆಗಳ ಪ್ರಾಧಿಕಾರ (ಐಸಿಎ) ಆತಂಕ ವ್ಯಕ್ತಪಡಿಸಿದೆ.

'2023ರ ಜನವರಿಯಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಇಂತಹ ನಾಲ್ಕು ಮದುವೆಗಳು ವರದಿಯಾಗಿದ್ದವು. 2024ರ ಇದೇ ಅವಧಿಯಲ್ಲಿ ಇಂತಹ ಮದುವೆಗಳ ಸಂಖ್ಯೆ 32ಕ್ಕೆ ಏರಿಕೆಯಾಗಿದೆ' ಎಂದು ಐಸಿಎ ಹೇಳಿದೆ.

ತಮ್ಮೊಂದಿಗೆ 'ಸುಳ್ಳು ಮದುವೆ' ಮಾಡಿಕೊಳ್ಳುವ ಸಿಂಗಪುರದ ಪುರುಷರಿಗೆ ವಿದೇಶಿ ಮಹಿಳೆಯರು ಸಾಕಷ್ಟು ಹಣ ನೀಡುತ್ತಾರೆ. ಇಂತಹ ಪ್ರಕರಣಗಳ ಕುರಿತು ತನಿಖೆ ನಡೆಸಿದ ನಂತರ, ಕೆಲವರನ್ನು ಬಂಧಿಸಲಾಗಿದೆ ಎಂಬ ಐಸಿಎ ಹೇಳಿಕೆ ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ.

'ಸಿಂಗಪುರದಲ್ಲಿ ವಿವಿಧ ಜನಾಂಗದ ಜನರು ವಾಸಿಸುತ್ತಿದ್ದು, ಇಂತಹ ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚುತ್ತಿರುವುದು ವಿವಿಧ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಇದು ಆತಂಕಕಾರಿ' ಎಂದು ಐಸಿಎ ಗುಪ್ತಚರ ವಿಭಾಗದ ಹಿರಿಯ ಅಧಿಕಾರಿ ಮಾರ್ಕ್ ಚಾಯ್ ಹೇಳುತ್ತಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹515
12 ಕ್ಕೆ	₹70
ಮೈಸೂರು	
100ಕ್ಕೆ	₹518

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹400-635
ದ್ವಿತಳಿ (ಬಿ.ವಿ)	₹305-751

ವಿದೇಶಿ ವಿದ್ಯಾರ್ಥಿಗಳಿಗೆ 'ವಿಶೇಷ ವರ್ಗ' ವೀಸಾ

ನವದೆಹಲಿ(ಪಿಟಿಐ): ದೇಶದಲ್ಲಿ ಉನ್ನತ ಶಿಕ್ಷಣ ಕೈಗೊಳ್ಳಲು ಬಯಸುವ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗಾಗಿ ಕೇಂದ್ರ ಸರ್ಕಾರ ಎರಡು ವಿಶೇಷ ವರ್ಗದ ವೀಸಾ ಆರಂಭಿಸಿದೆ.

'ಇ–ವಿದ್ಯಾರ್ಥಿ ವೀಸಾ' ಹಾಗೂ 'ಇ–ವಿದ್ಯಾರ್ಥಿ–ಎಕ್ಸ್' ಎಂಬ ವೀಸಾಗಳನ್ನು ಕೇಂದ್ರ ಗೃಹ ಸಚಿವಾಲಯ ಪರಿಚಯಿಸಿದ್ದು, ಈ ವೀಸಾಗಳನ್ನು ಪಡೆಯಲು ಅಭ್ಯರ್ಥಿಗಳು 'ಸ್ಟಡಿ ಇನ್ ಇಂಡಿಯಾ' (ಎಸ್‌ಐಐ) ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಸ್‌ಐಐ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ಅರ್ಹ ವಿದೇಶಿ ವಿದ್ಯಾರ್ಥಿಗಳು 'ಇ–ವಿದ್ಯಾರ್ಥಿ ವೀಸಾ' ಸೌಲಭ್ಯ ಪಡೆಯಬಹುದು. 'ಇ–ವಿದ್ಯಾರ್ಥಿ ವೀಸಾ' ಹೊಂದಿರುವವರ ಅವಲಂಬಿತರಿಗೆ 'ಇ–ವಿದ್ಯಾರ್ಥಿ–ಎಕ್ಸ್' ವೀಸಾ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿದ್ಯಾರ್ಥಿಗಳು ವೀಸಾಕ್ಕಾಗಿ https://indianvisaonline.gov.in/ ಪೋರ್ಟಲ್‌ನಲ್ಲಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಆದರೆ, ಅಭ್ಯರ್ಥಿಗಳ ಅರ್ಜಿಗಳ ದೃಢೀಕರಣವು 'ಎಸ್‌ಐಐ ಐ.ಡಿ' ಮೂಲಕವೇ ನಡೆಯಲಿದೆ. ಹೀಗಾಗಿ, ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವವರು ಎಸ್‌ಐಐ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯ ಎಂದು ತಿಳಿಸಿದ್ದಾರೆ.

ಸಾಹಸ... ಭಾರತೀಯ ಸೇನೆಯ ಪೂರ್ವ ಕಮಾಂಡ್‌ನಿಂದ ಅಸ್ಸಾಂನ ದಿಬ್ರೂಗಢದಲ್ಲಿ ಭಾನುವಾರ ನಡೆದ ಮಾಜಿ ಸೈನಿಕರ ರ‍್ಯಾಲಿಯಲ್ಲಿ ಯೋಧರು ಸಾಹಸ ಪ್ರದರ್ಶಿಸಿದರು –ಪಿಟಿಐ ಚಿತ್ರ

ಬಜೆಟ್ ಪೂರ್ವಭಾವಿ ಸಭೆ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್‌ನಲ್ಲಿ ಮಂಡಿಸಲಿರುವ ಬಜೆಟ್‌ನ ಪೂರ್ವಭಾವಿ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಲಿದ್ದಾರೆ.

ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಸಿ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಿದ್ದಾರೆ.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಪ್ರತಿದಿನ ಬೆಳಿಗ್ಗೆ 11 ಗಂಟೆ ಮತ್ತು ಸಂಜೆ 4 ಗಂಟೆಗೆ ತಲಾ ಒಂದೊಂದು ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ. ಮಂಗಳವಾರ ಸಮಾಜ ಕಲ್ಯಾಣ, ಆರೋಗ್ಯ, ಬುಧವಾರ ಆಹಾರ, ಉನ್ನತ ಶಿಕ್ಷಣ, ಗುರುವಾರ ವೈದ್ಯಕೀಯ ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಿಗದಿಯಾಗಿದೆ.

ಹಿಂದಿನ ಎರಡು ವರ್ಷಗಳ ಬಜೆಟ್ ಕಂಡಿಕೆಗಳು, ಕೈಗೊಂಡ ಕ್ರಮ, ಆರ್ಥಿಕ ಮತ್ತು ಭೌತಿಕ ಪ್ರಗತಿ ಮತ್ತು ಇಲಾಖೆಯಿಂದ ಕೈಗೊಳ್ಳಬಹುದಾದ ಹಾಗೂ ಕೈಗೊಂಡಿರುವ, ಹೊಸ ಯೋಜನೆಗಳ ಕುರಿತು ಪ್ರಾತ್ಯಕ್ಷಿಕೆ ಸಿದ್ಧಪಡಿಸಿ ಪೂರ್ಣ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವಂತೆ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯಮಂತ್ರಿ ಸಚಿವಾಲಯದಿಂದ ಈಗಾಗಲೇ ಸೂಚನೆ ನೀಡಲಾಗಿದೆ. ಜೊತೆಗೆ, ಮುಂದಿನ ಆರ್ಥಿಕ ವರ್ಷದ ಬಜೆಟ್ ಸಿದ್ಧತೆಗೆ ಆದ್ಯತಾ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯೂ ಆರಂಭಗೊಂಡಿದೆ.

ಯೂನ್ ಸೆರೆಗೆ ಅಡ್ಡಿ

ಸೋಲ್ (ಎಎಫ್‌ಪಿ/ರಾಯಿಟರ್ಸ್): ವಾಗ್ದಂಡನೆಗೆ ಗುರಿಯಾಗಿರುವ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರ ಬಂಧನಕ್ಕೆ ಅವರ ಭದ್ರತಾ ಮುಖ್ಯಸ್ಥರು ಭಾನುವಾರವೂ ಸಹಕರಿಸಲಿಲ್ಲ.

ಕಳೆದ ತಿಂಗಳು ಮಿಲಿಟರಿ ಆಡಳಿತ ಜಾರಿಗೊಳಿಸಿದ ಯೂನ್ ಅವರನ್ನು ಈಗಾಗಲೇ ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಲಾಗಿದೆ. ಅವರ ಬಂಧನಕ್ಕೆ ಹೊರಡಿಸಿರುವ ವಾರಂಟ್ ಸೋಮವಾರ ಮಧ್ಯರಾತ್ರಿ ಕೊನೆಗೊಳ್ಳಲಿರುವ ಕಾರಣ, ಇದು ದೇಶದಲ್ಲಿ ರಾಜಕೀಯ ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆಯಿದೆ.

ಬಂಧನದ ವಾರಂಟ್ ಕಾನೂನುಬಾಹಿರವಾಗಿ ಎಂದು ಪ್ರತಿಪಾದಿಸಿದ್ದ ಯೂನ್ ಅವರ ವಕೀಲರ ವಾದವನ್ನು ಸೋಲ್ ನ್ಯಾಯಾಲಯ ತಿರಸ್ಕರಿಸಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಸೋಲ್‌ನತ್ತ ಬ್ಲಿಂಕೆನ್: ದಕ್ಷಿಣ ಕೊರಿಯಾದಲ್ಲಿ ರಾಜಕೀಯ ಬಿಕಟ್ಟಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಸೋಲ್‌ನತ್ತ ಪ್ರಯಾಣ ಬೆಳೆಸಿದ್ದಾರೆ. ಅವರು ದಕ್ಷಿಣ ಕೊರಿಯಾದ ಹಿರಿಯ ಅಧಿಕಾರಿಗಳ ಜತೆ ಮಾತುಕತೆ ನಡೆಸಿ ಬಿಕ್ಕಟ್ಟು ಪರಿಹಾರಕ್ಕೆ ಯತ್ನಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹಿಮಪಾತದ ನಡುವೆ ಪ್ರತಿಭಟನೆ: ಅಧ್ಯಕ್ಷ ಯೂನ್ ಪರ ಮತ್ತು ವಿರುದ್ಧ ಬೆಂಬಲಿಗರು ಹಿಮಪಾತದ ನಡುವೆಯೂ ಭಾನುವಾರ ಪ್ರತಿಭಟನಾ ರ‍್ಯಾಲಿಗಳನ್ನು ನಡೆಸಿದರು.

ಕರ್ನಾಟಕದಲ್ಲಿ ಅಂತರ್ಜಲ ಬಳಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅಂತರ್ಜಲದ ಬಳಕೆಯು ಗಂಭೀರ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ ಎಂದು ಕೇಂದ್ರ ಅಂತರ್ಜಲ ಮಂಡಳಿಯ ವರದಿಯೊಂದು ಹೇಳಿದೆ. 2023ಕ್ಕೆ ಹೋಲಿಸಿದರೆ 2024ರಲ್ಲಿ ಅಂತರ್ಜಲದ ಬಳಕೆ ಪ್ರಮಾಣವು ಶೇಕಡ 2.22ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ ಜಿಲ್ಲೆಗಳಲ್ಲಿ ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ವಿವರಿಸಲಾಗಿದೆ.

ರಾಜ್ಯದ 237 ತಾಲ್ಲೂಕು-

ಗಳಲ್ಲಿ ಅಂತರ್ಜಲದ ಬಳಕೆಯ ಬಗ್ಗೆ ಪರಿಶೀಲನೆ ನಡೆಸಲಾಗಿದ್ದು, 45 ತಾಲ್ಲೂಕುಗಳಲ್ಲಿ ಬಳಕೆಯು ಅತಿಯಾಗಿದೆ, 144 ತಾಲ್ಲೂಕುಗಳಲ್ಲಿ ಅಂತರ್ಜಲ ಬಳಕೆಯು ಸುರಕ್ಷಿತ ಮಟ್ಟದಲ್ಲಿ ಇದೆ.

ರಾಷ್ಟ್ರ ಮಟ್ಟದಲ್ಲಿ 6,746 ಘಟಕಗಳ (ಬ್ಲಾಕ್, ಮಂಡಲ ಅಥವಾ ತಾಲ್ಲೂಕು) ಪೈಕಿ 751 ಘಟಕಗಳಲ್ಲಿ ಅಂತರ್ಜಲ ಬಳಕೆಯು ಅತಿಯಾದ ಮಟ್ಟದಲ್ಲಿ ಇದೆ. ಅಂದರೆ ಈ ಘಟಕಗಳಲ್ಲಿ ಅಂತರ್ಜಲ ವನ್ನು ಬಳಕೆಗೆ ಪಡೆದುಕೊಳ್ಳುತ್ತಿರುವ ಪ್ರಮಾಣವು ಅಂತರ್ಜಲ ಮರುಪೂರಣ ಪ್ರಮಾಣಕ್ಕಿಂತ ಹೆಚ್ಚಿದೆ ಎಂದು ವರದಿ ಹೇಳಿದೆ.

ರಾಜಸ್ಥಾನ, ಹರಿಯಾಣ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಅಂತರ್ಜಲದಲ್ಲಿ ಫ್ಲೋರೈಡ್ ಪ್ರಮಾಣವು ಮಿತಿ ಮೀರಿದೆ ಎಂದು ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ. ದೇಶದ 440 ಜಿಲ್ಲೆಗಳ ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣವು ಹೆಚ್ಚಿದೆ. ಸಂಗ್ರಹಿಸಲಾದ ಶೇಕಡ 20ರಷ್ಟು ಮಾದರಿಗಳಲ್ಲಿ ನೈಟ್ರೇಟ್ ಪ್ರಮಾಣವು ಮಿತಿಯನ್ನು ಮೀರಿದೆ ಎಂದು ವರದಿ ಹೇಳಿದೆ.

ಪ್ರಿಯಾಂಕಾ ಗಾಂಧಿ ವಾದ್ರಾ ಕೆನ್ನೆಯಂತೆ ರಸ್ತೆ ಅಭಿವೃದ್ಧಿಪಡಿಸುವುದಾಗಿ ಹೇಳಿದ ಬಿಜೆಪಿ ಅಭ್ಯರ್ಥಿ

ಅಪ್ಪನನ್ನೇ ಬದಲಿಸಿದ ಆತಿಶಿ: ಬಿಧೂಡಿ

ಪ್ರಜಾವಾಣಿ ವಾರ್ತೆ

ರಮೇಶ್ ಬಿಧೂಡಿ

ನವದೆಹಲಿ: ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಕೆನ್ನೆ ಬಳಿಕ ಆಡಿದ್ದ ಮಾತುಗಳಿಗೆ ವಿವಾದ ಎಬ್ಬಿಸಿದ ನಂತರ ಬಿಜೆಪಿ ಮುಖಂಡ, ಕಾಲ್ಕಾಜಿ ಕ್ಷೇತ್ರದ ಅಭ್ಯರ್ಥಿ ರಮೇಶ್ ಬಿಧೂಡಿ ಅವರು ಇನ್ನೊಂದು ವಿವಾದ ಸೃಷ್ಟಿಸಿದ್ದಾರೆ. ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ತಮ್ಮ 'ತಂದೆಯನ್ನೇ ಬದಲಾಯಿಸಿದ್ದಾರೆ' ಎಂದು ಬಿಧೂಡಿ ಹೇಳಿದ್ದಾರೆ.

ಈ ಮಾತಿಗೆ ಎಎಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಬಿಧೂಡಿ ಆಡಿರುವ ಮಾತುಗಳಿಗೆ ರಾಜಧಾನಿಯ ಮಹಿಳೆಯರು ಪ್ರತೀಕಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಿದೆ.

'ಆತಿಶಿ ಅವರು ತಮ್ಮ ತಂದೆಯನ್ನು ಬದಲಾಯಿಸಿಕೊಂಡಿದ್ದಾರೆ. ಮೊದಲು ಅವರು ಮಾರ್ಲೆನಾ ಆಗಿದ್ದರು. ಈಗ ಸಿಂಗ್ ಆಗಿದ್ದಾರೆ. ಅವರು ತಂದೆಯನ್ನು ಬದಲಾಯಿಸಿದ್ದಾರೆ. ಇದು ಅವರ ವ್ಯಕ್ತಿತ್ವ' ಎಂದು ದೆಹಲಿಯಲ್ಲಿ ರ್ಯಾಲಿಯೊಂದರಲ್ಲಿ ಬಿಧೂಡಿ ಹೇಳಿದ್ದಾರೆ. ಈ ರ್ಯಾಲಿಯಲ್ಲಿ ನಂತರ ಪ್ರಧಾನಿ ನರೇಂದ್ರ ಮೋದಿ ಅವರೂ ಮಾತನಾಡಿದರು.

ದೆಹಲಿಯ ಮುಖ್ಯಮಂತ್ರಿ ಆತಿಶಿ ಅವರಿಗೆ, ತಂದೆ-ತಾಯಿ 'ಆತಿಶಿ ಮಾರ್ಲೆನಾ' ಎಂಬ ಹೆಸರು ಇಟ್ಟಿದ್ದರು. ಮಾರ್ಕ್ಸ್ ಮತ್ತು ಲೆನಿನ್ ಹೆಸರನ್ನು ಒಗ್ಗೂಡಿಸಿ 'ಮಾರ್ಲೆನಾ' ಎಂಬ ಹೆಸರನ್ನು ಇವರಿಗೆ ನೀಡಲಾಗಿತ್ತು. ಆದರೆ ವಿರೋಧಿಗಳು, 'ಆತಿಶಿ ಕ್ರೈಸ್ತ ಧರ್ಮಕ್ಕೆ ಸೇರಿದವರು' ಎಂದು ಅಪಪ್ರಚಾರ ನಡೆಸಿದ ಕಾರಣಕ್ಕೆ 'ಮಾರ್ಲೆನಾ' ಪದವನ್ನು ಹೆಸರಿನಿಂದ ಕೈಬಿಟ್ಟಿದ್ದರು. ತಮ್ಮನ್ನು ಆತಿಶಿ ಎಂದಷ್ಟೇ ಕರೆದುಕೊಳ್ಳುತ್ತಿದ್ದರು. ಕೆಲವು ಕಾಲ ಅವರು ತಮ್ಮನ್ನು 'ಆತಿಶಿ ಸಿಂಗ್' ಎಂದೂ ಕರೆದುಕೊಂಡಿದ್ದರು.

ಬಿಧೂಡಿ ಅವರ ಮಾತುಗಳನ್ನು 'ಎಕ್ಸ್' ಮೂಲಕ ಹಂಚಿಕೊಂಡಿರುವ ಅರವಿಂದ ಕೇಜ್ರಿವಾಲ್, 'ಬಿಜೆಪಿ ನಾಯಕರು ಲಜ್ಜೆಗೆಟ್ಟಿದ್ದಾರೆ ಎಲ್ಲ ಮಿತಿಗಳನ್ನೂ ಮೀರಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಿಯಾಂಕಾ ಕೆನ್ನೆಯಂತೆ ರಸ್ತೆ ಅಭಿವೃದ್ಧಿ: 'ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಬಂದ ನಂತರ, ಕ್ಷೇತ್ರದ ರಸ್ತೆಗಳನ್ನು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನಯವಾದ ಕೆನ್ನೆಗಳ ರೀತಿ ಅಭಿವೃದ್ಧಿಪಡಿಸುವೆ' ಎಂದು ಬಿಧೂಡಿ ಹೇಳಿದ್ದಾರೆ ಎನ್ನಲಾಗಿದ್ದು, ಇದು ವಿವಾದಕ್ಕೆ ಕಾರಣವಾಗಿತ್ತು.

ತಮ್ಮ ಹೇಳಿಕೆಯನ್ನು ಭಾನುವಾರ ಸಮರ್ಥಿಸಿಕೊಂಡಿದ್ದ ಬಿಧೂಡಿ, ನಂತರ, ವಿಷಾದ ವ್ಯಕ್ತಪಡಿಸಿದ್ದಾರೆ. ಬಿಧೂಡಿ ಹೇಳಿಕೆಯನ್ನು ಕಾಂಗ್ರೆಸ್ ಹಾಗೂ ಎಎಪಿ ಖಂಡಿಸಿವೆ.

30 ವರ್ಷಗಳ ಹಿಂದೆ, ನಟಿ ಹಾಗೂ ಸಂಸದೆ ಹೇಮಾಮಾಲಿನಿ ಕುರಿತು ಲಾಲು ಪ್ರಸಾದ್ ಅವರು ನೀಡಿದ್ದ ಇಂಥದ್ದೇ ಹೇಳಿಕೆಯನ್ನು ಉಲ್ಲೇಖಿಸಿದ್ದ ಬಿಧೂಡಿ, ಮೊದಲು ಲಾಲು ಪ್ರಸಾದ್ ಕ್ಷಮೆ ಯಾಚಿಸಲಿ ಎಂದಿದ್ದರು.

ನಂತರ, 'ನಿರ್ದಿಷ್ಟ ಸಂದರ್ಭವೊಂದರಲ್ಲಿ ನಾನು ನೀಡಿದ್ದ ಹೇಳಿಕೆ ಕುರಿತು ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ... ಯಾರಿಗಾದರೂ ನೋವಾಗಿದ್ದಲ್ಲಿ ನಾನು ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಧೂಡಿ ಏನು ಹೇಳಿದ್ದರು?: ಮುಖ್ಯಮಂತ್ರಿ ಆತಿಶಿ ವಿರುದ್ಧ ಕಾಲ್ಕಾಜಿ ಕ್ಷೇತ್ರದಲ್ಲಿ ಬಿಧೂಡಿ ಅವರೇ ಅಭ್ಯರ್ಥಿ ಎಂಬುದಾಗಿ ಶನಿವಾರ ಘೋಷಿಸಿದ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದ್ದರು.

'ಹೇಮಾಮಾಲಿನಿ ಅವರ ಕೆನ್ನೆಗಳಂತೆ ಬಿಹಾರದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಾಗಿ ಲಾಲು ಪ್ರಸಾದ್ ಹೇಳಿದ್ದರು. ಆದರೆ, ಆ ರೀತಿ ಅವರು ಮಾಡಲಿಲ್ಲ. ಅವರು ಸುಳ್ಳು ಹೇಳಿದ್ದರು' ಎಂದು ಬಿಧೂಡಿ ಹೇಳಿದ್ದರು.

'ಓಖ್ಲಾ ಮತ್ತು ಸಂಗಮ್ ವಿಹಾರ ಕ್ಷೇತ್ರದಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಿರುವ ರೀತಿಯಲ್ಲಿಯೇ ಕಾಲ್ಕಾಜಿಯ ಎಲ್ಲ ರಸ್ತೆಗಳನ್ನು ಪ್ರಿಯಾಂಕಾ ಗಾಂಧಿ ಅವರ ನಯವಾದ ಕೆನ್ನೆಗಳಂತೆ ಅಭಿವೃದ್ಧಿಪಡಿಸಲಾಗುವುದು ಎಂಬ ಭರವಸೆಯನ್ನು ನಾನು ನೀಡುತ್ತೇನೆ' ಎಂದು ಬಿಧೂಡಿ ಅವರು ಹೇಳಿದ್ದರು ಎನ್ನಲಾದ ವಿಡಿಯೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹಾಗೂ ಕಾಲ್ಕಾಜಿ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಅಲ್ಕಾ ಲಾಂಬಾ ಅವರು ಬಿಧೂಡಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಸಂಸತ್‌ನ ಘನತೆ ಎತ್ತಿ ಹಿಡಿಯದ, ಮತ್ತೊಂದೆಡೆ ಮಹಿಳೆಯರನ್ನು ಗೌರವಿಸದ ಇಂತಹ ವ್ಯಕ್ತಿ ತಮ್ಮ ಪ್ರತಿನಿಧಿಯಾಗುವುದನ್ನು ಕಾಲ್ಕಾಜಿ ಕ್ಷೇತ್ರದ ಜನರು ಬಯಸುತ್ತಾರೆಯೇ?' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಾಯಕರ ಪ್ರತಿಕ್ರಿಯೆಗಳು

ಮಹಿಳೆಯರನ್ನು ಗೌರವಿಸದ ಸಂಸ್ಕೃತಿ ಬಿಜೆಪಿಯಲ್ಲಿ ಆಳವಾಗಿ ಬೇರೂರಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಬಿಧೂಡಿ ಬಳಸಿರುವ ನಿಂದನೀಯ ಭಾಷೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅಥವಾ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಇಲ್ಲವೇ ಪಕ್ಷದ ಮಹಿಳಾ ಮುಖಂಡರು ಕ್ಷಮೆ ಕೋರಬೇಕು
ಅಜಯ್ ಮಾಕನ್, ಕಾಂಗ್ರೆಸ್ ನಾಯಕ

ರಮೇಶ್ ಬಿಧೂಡಿ ಬಹಿರಂಗವಾಗಿ ಕ್ಷಮೆ ಕೋರಬೇಕು. ಈ ವಿಚಾರ ಕುರಿತಂತೆ ಬಿಜೆಪಿಯ ಹಿರಿಯ ನಾಯಕರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು
ಅಲ್ಕಾ ಲಾಂಬಾ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ
(ಪ್ರಿಯಾಂಕಾ ಕುರಿತು ರಮೇಶ್ ಬಿಧೂಡಿ ಆಡಿದ ಮಾತುಗಳಿಗೆ ಪ್ರತಿಕ್ರಿಯೆ)

ತಮ್ಮ ಪಕ್ಷದ ನಾಯಕಿ ಪ್ರಿಯಾಂಕಾ ಗಾಂಧಿ ವಿರುದ್ಧ ಅವಮಾನಕರ ಹೇಳಿಕೆ ನೀಡಿರುವ ರಮೇಶ್ ಬಿಧೂಡಿ ವಿರುದ್ಧ ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ ಒಂದೇ ಒಂದು ಚಿಕ್ಕ ಹೇಳುವ ಧೈರ್ಯ ತೋರಿಲ್ಲ. ಸಂದೀಪ್ ದೀಕ್ಷಿತ್ ಹಾಗೂ ಬಿಜೆಪಿ ನಡುವಿನ ಸಂಬಂಧ ಎಷ್ಟೊಂದು ಗಟ್ಟಿ ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ
ಸೌರಭ್ ಭಾರದ್ವಾಜ್, ದೆಹಲಿ ಸಚಿವ

'ಸಂಘರ್ಷ: 10 ವರ್ಷ ಪೋಲು'

ದೆಹಲಿಯ ಎಎಪಿ ಸರ್ಕಾರದ ವಿರುದ್ಧ ಮೋದಿ ವಾಗ್ದಾಳಿ

ನವದೆಹಲಿ (ಪಿಟಿಐ): 'ಎಎಪಿ ಸರ್ಕಾರ ರಾಜಧಾನಿಯಲ್ಲಿ ಕೇಂದ್ರದ ಜೊತೆಗೆ ಸಂಘರ್ಷ ಮಾಡುತ್ತಲೇ ಒಂದು ದಶಕ ಪೋಲು ಮಾಡಿತು. ಇಲ್ಲಿ ಅಭಿವೃದ್ಧಿ ಯೋಜನೆಗಳ ಸಾಕಾರಕ್ಕಾಗಿ ಬಿಜೆಪಿಗೆ ಒಂದು ಅವಕಾಶ ಕಲ್ಪಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಕೋರಿದರು.

'ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಯಾವುದೇ ಜನಕಲ್ಯಾಣ ಯೋಜನೆ ಸ್ಥಗಿತಗೊಳಿಸುವುದಿಲ್ಲ. ಆದರೆ, ಅದರ ಅನುಷ್ಠಾನದಲ್ಲಿ ಆಗುತ್ತಿರುವ ಭ್ರಷ್ಟಾಚಾರ ನಿರ್ಮೂಲನೆಗೊಳಿಸಲಿದೆ' ಎಂದರು.

ರೋಹಿಣಿ ಬಡಾವಣೆಯಲ್ಲಿ ಚುನಾವಣಾ ರ್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಎಎಪಿ ಸರ್ಕಾರ ದೆಹಲಿಯ ಪಾಲಿಗೆ 'ವಿಪತ್ತು'. ದೆಹಲಿಯು ಈ 'ವಿಪತ್ತಿ'ನಿಂದ ಪಾರಾದ ನಂತರವೇ ಅಭಿವೃದ್ಧಿಯ ಡಬಲ್ ಎಂಜಿನ್ ಇಲ್ಲಿ ಕಾರ್ಯಾರಂಭ ಮಾಡಲಿದೆ' ಎಂದರು.

'ನೀವು ಮೆಟ್ರೊ ರೈಲು ನಿಲ್ದಾಣದಿಂದ ಹೊರಗೆ ಬಂದರೆ ರಸ್ತೆಗಳಲ್ಲಿ ಗುಂಡಿಗಳು ಕಾಣುತ್ತವೆ, ಕೊಳಚೆ ನೀರು ರಸ್ತೆಗೆ ಹರಿಯುತ್ತದೆ. ಕೆಲ ಬಡಾವಣೆಗಳಿಗೆ ಹೋಗಲು ಆಟೊ, ಕ್ಯಾಬ್ ಚಾಲಕರು ನಿರಾಕರಿಸುತ್ತಾರೆ. ದೆಹಲಿ ಕಳೆದ 10 ವರ್ಷಗಳಲ್ಲಿ ಈ ವಿಪತ್ತಿಗೆ ಸಾಕ್ಷಿಯಾಗುವಂತೆ ಜನರಿಗೆ ಅರಿವಾಗಿದ್ದು, 'ಇದನ್ನು ಬದಲಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದೆಹಲಿ–ಮೀರಟ್ ಆರ್‌ಆರ್‌ಟಿಎಸ್ ಕಾರಿಡಾರ್‌ನ ಭಾಗವಾಗಿರುವ ಸಾಹಿಬಾಬಾದ್‌ನಿಂದ ನ್ಯೂ ಅಶೋಕ್ ನಗರದವರೆಗಿನ 13 ಕಿ.ಮೀ ಉದ್ದದ ರೈಲು ಮಾರ್ಗವನ್ನು ಭಾನುವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ನಮೋ ಭಾರತ್ ರೈಲಿನಲ್ಲಿ ಪ್ರಯಾಣಿಕರೊಂದಿಗೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

'ಕೇಂದ್ರದ ಸಹಭಾಗಿತ್ವದಲ್ಲಿ ಅಭಿವೃದ್ಧಿ'

ಅರವಿಂದ ಕೇಜ್ರಿವಾಲ್

'ಪ್ರಧಾನಿ ಮೋದಿ ಭಾನುವಾರ ಉದ್ಘಾಟಿಸಿದ ಎರಡು ಯೋಜನೆಗಳಿಗೆ ಕೇಂದ್ರ ಮತ್ತು ಎಎಪಿ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಜಾರಿಗೊಳಿಸಲ್ಪಟ್ಟಿವೆ' ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಇಲ್ಲಿ ಪ್ರತಿಪಾದಿಸಿದರು.

13 ಕಿ.ಮೀ ಉದ್ದದ ದೆಹಲಿ–ಮೀರಟ್ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ (ಆರ್‌ಆರ್‌ಟಿಎಸ್) ಕಾರಿಡಾರ್ ಮತ್ತು ದೆಹಲಿ ಮೆಟ್ರೊ 4ನೇ ಹಂತದ ಜನಕ್‌ಪುರಿ ಪಶ್ಚಿಮ ಮತ್ತು ಕೃಷ್ಣಾ ಪಾರ್ಕ್ ಎಕ್ಸ್‌ಟೆನ್ಶನ್ ಸಂಪರ್ಕ ಸೇವೆಯನ್ನು ಪ್ರಧಾನಿ ಉದ್ಘಾಟಿಸಿದ್ದರು. 'ಎಎಪಿ ಸರ್ಕಾರ ಕೇವಲ ಸಂಘರ್ಷದಲ್ಲಿ ತೊಡಗಿದೆ ಎಂದು ಆರೋಪಿಸುವವರಿಗೆ ಈ ಯೋಜನೆಗಳೇ ಉತ್ತರ' ಎಂದು ಸುದ್ದಿಗೋಷ್ಠಿಯಲ್ಲಿ ಕೇಜ್ರಿವಾಲ್ ಹೇಳಿದರು.

ಲಾಲು ಆಹ್ವಾನ ತಿರಸ್ಕರಿಸಿದ ನಿತೀಶ್

ಪಟ್ನಾ(ಪಿಟಿಐ): 'ವಿರೋಧ ಪಕ್ಷಗಳೊಂದಿಗೆ ತಪ್ಪಾಗಿ ನಾನು ಮೈತ್ರಿ ಮಾಡಿಕೊಂಡಿದ್ದೆ. ವಿಪಕ್ಷಗಳ ಒಕ್ಕೂಟ ಅಧಿಕಾರದಲ್ಲಿದ್ದಾಗ ಏನೂ ಮಾಡಲಿಲ್ಲ' ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಭಾನುವಾರ ಹೇಳಿದ್ದಾರೆ.

'ತಮ್ಮ ಮಾಜಿ ಮಿತ್ರ ಪಕ್ಷ ಜೆಡಿಯುಗೆ ಬಾಗಿಲು ತೆರೆದಿದೆ' ಎನ್ನುವ ಮೂಲಕ 'ಇಂಡಿಯಾ' ಗುಂಪಿಗೆ ಮತ್ತೆ ಸೇರ್ಪಡೆಯಾಗುವಂತೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ನೀಡಿದ್ದ ಆಹ್ವಾನವನ್ನು ನಿತೀಶ್ ಕುಮಾರ್ ತಿರಸ್ಕರಿಸಿದ್ದಾರೆ.

ಮುಜಫ್ಫರಪುರದಲ್ಲಿ ಹಮ್ಮಿಕೊಂಡಿರುವ 'ಪ್ರಗತಿ ಯಾತ್ರಾ'ದಲ್ಲಿ ಭಾಗಿಯಾಗಿದ್ದ ನಿತೀಶ್ ಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, 'ನಮಗಿಂತಲೂ ಮೊದಲು ಅಧಿಕಾರದಲ್ಲಿದ್ದವರು ಏನಾದರೂ ಮಾಡಿದ್ದಾರೆಯೇ? ಸೂರ್ಯಾಸ್ತದ ಬಳಿಕ ಜನರು ಮನೆಯಿಂದ ಹೊರಗೆ ಕಾಲಿಡಲು ಹೆದರುತ್ತಿದ್ದರು' ಎಂದರು.

'ಎರಡು ಬಾರಿ ತಪ್ಪಾಗಿ ಅವರೊಂದಿಗೆ ನಾನು ಕೈಜೋಡಿಸಿದೆ' ಎಂದೂ ಹೇಳಿದರು.

ಇದೇ ವರ್ಷ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ನಿತೀಶ್ ಕುಮಾರ್ ಅವರೇ ಎನ್‌ಡಿಎ ಮುಖ್ಯಮಂತ್ರಿ ಅಭ್ಯರ್ಥಿ ಎಂಬುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಇತ್ತೀಚೆಗೆ ಹೇಳಿದ್ದರು.

ಇದರ ಬೆನ್ನಲ್ಲೇ, ಲಾಲು ಪ್ರಸಾದ್ ಅವರು, ನಿತೀಶ್ ಕುಮಾರ್ ಬರುವುದಾದರೆ 'ಇಂಡಿಯಾ' ಗುಂಪಿನ ಬಾಗಿಲು ತೆರೆದಿರುತ್ತದೆ ಎಂಬ ಹೇಳಿಕೆ ನೀಡಿದ್ದರು.

ಲಾಲು ಪ್ರಸಾದ್ ಅವರ ಈ ಹೇಳಿಕೆಗೆ ಮಹತ್ವ ನೀಡುವ ಅಗತ್ಯ ಇಲ್ಲ ಎಂದು ಪುತ್ರ ತೇಜಸ್ವಿ ಯಾದವ್ ಹೇಳಿದ್ದರು.

ಮಹಾಕುಂಭ: ಮುಸ್ಲಿಂ ನಾಯಕ ಬರೇಲ್ವಿಯಿಂದ ಸಿ.ಎಂ. ಯೋಗಿಗೆ ಪತ್ರ

ಮತಾಂತರ, ನಿಷೇಧದ ಸಾಧ್ಯತೆ: ಆತಂಕ

ಲಖನೌ (ಪಿಟಿಐ): 'ಮಹಾಕುಂಭದ ಸಂದರ್ಭದಲ್ಲಿ ಮುಸ್ಲಿಂ ಧರ್ಮದವರ ಸಾಮೂಹಿಕ ಮತಾಂತರ ನಡೆಯುವ ಸಾಧ್ಯತೆಯಿದ್ದು, ಅದನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕು' ಎಂದು ಅಖಿಲ ಭಾರತ ಮುಸ್ಲಿಂ ಜಮಾತ್‌ನ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಜ್ವಿ ಬರೇಲ್ವಿ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಪತ್ರ ಬರೆದಿದ್ದಾರೆ.

ಸಮುದಾಯದ ಇತರ ಮುಖಂಡರು, 'ಭಾರಿ ಜನಸ್ತೋಮ ಸೇರುವ ಮಹಾಕುಂಭದಂತಹ ಮಹಾಮೇಳದಿಂದ ಮುಸ್ಲಿಂ ಸಮುದಾಯದವರನ್ನು ಹೊರಗಿಡುವುದು ಸರಿಯಲ್ಲ' ಎಂದು ಹೇಳಿದ್ದಾರೆ.

ಪ್ರತಿ 12 ವರ್ಷಗಳಿಗೊಮ್ಮೆ ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಮಹಾಕುಂಭಕ್ಕೆ ಇದೇ 13ರಿಂದ ಚಾಲನೆ ದೊರೆಯಲಿದ್ದು, ಫೆಬ್ರುವರಿ 26ರವರೆಗೆ ಜರುಗಲಿದೆ.

ಕುಂಭಮೇಳ ನಡೆಯಲಿರುವ ಪ್ರಯಾಗ್‌ರಾಜ್‌ಗೆ ಭೇಟಿ ನೀಡಿರುವ ಜನರು ತ್ರಿವೇಣಿ ಸಂಗಮದ ಬಳಿ ಒಂಟೆ ಸವಾರಿ ನಡೆಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಮಹಾಕುಂಭಕ್ಕೆ ಹಿಂದೂ ಅಂಗಡಿಗಳಿಂದಲೇ ಸರಕುಗಳನ್ನು ಖರೀದಿಸುವಂತೆ ಅಖಿಲ ಭಾರತೀಯ ಅಖಾಡ ಪರಿಷತ್ತು ಕಳೆದ ವರ್ಷ ಕರೆ ನೀಡಿತ್ತು.

'ಮಹಾಕುಂಭದ ವೇಳೆ ನೂರಾರು ಮುಸ್ಲಿಂ ಧರ್ಮದವರನ್ನು ಮತಾಂತರ ಮಾಡುವ ಯೋಜನೆಗಳಿವೆ ಎಂದು ವಿಶ್ವಾಸಾರ್ಹ ಮೂಲಗಳು ನನಗೆ ತಿಳಿಸಿವೆ. ಹೀಗಾಗಿ ಈ ಮಹಾಮೇಳಕ್ಕೆ ತೆರಳದಂತೆ ಇತ್ತೀಚೆಗೆ ಮುಸ್ಲಿಂರಿಗೆ ಸಲಹೆ ನೀಡಿದ್ದೆ' ಎಂದು ಬರೇಲ್ವಿ ಪ್ರತಿಕ್ರಿಯಿಸಿದ್ದಾರೆ. 'ಈ ಸಂಬಂಧ ಮಾಹಿತಿಯನ್ನು ಮುಖ್ಯಮಂತ್ರಿ ಅವರಿಗೆ ಪತ್ರ ಮೂಲಕ ತಿಳಿಸಿದ್ದೇನೆ. ಇನ್ನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ' ಎಂದು ಅವರು ಹೇಳಿದ್ದಾರೆ.

ಭಾರತ ಜಾತ್ಯತೀತ ರಾಷ್ಟ್ರ. ಮುಸ್ಲಿಮರು ಅವಿಭಾಜ್ಯ ಅಂಗ. ಮಹಾಕುಂಭದಿಂದ ಮುಸ್ಲಿಮರನ್ನು ನಿಷೇಧಿಸುವುದು ಎಂದರೆ ಸಂವಿಧಾನದ ಹಕ್ಕುಗಳನ್ನು ಕಸಿದಂತೆ
ಮೌಲಾನಾ ಕಾಬ್ ರಶೀದಿ
ಜಮಿಯತ್ ಉಲಮಾ ಇ ಹಿಂದ್‌ನ (ಯು.ಪಿ) ಕಾನೂನು ಸಲಹೆಗಾರ

ತನ್ನ ಧರ್ಮದ ಮೇಲಿನ ನಂಬಿಕೆ ಬಲವಾಗಿದ್ದರೆ, ಅವರನ್ನು ಯಾರೊಬ್ಬರೂ ಮತಾಂತರಿಸಲು ಆಗದು
ಮೌಲಾನಾ ಯಾಸೂಬ್ ಅಬ್ಬಾಸ್
ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಶಿಯಾ ವೈಯಕ್ತಿಕ ಕಾನೂನು ಮಂಡಳಿ

ಕರಾವಳಿ ಪಡೆಯ ಹೆಲಿಕಾಪ್ಟರ್ ಪತನ: ಮೂವರು ಸಾವು

ಪ್ರಜಾವಾಣಿ ವಾರ್ತೆ

ಪೋರ್‌ಬಂದರ್: ಗುಜರಾತ್‌ನ ಪೋರ್ ಬಂದರ್ ನಗರದ ಹೊರವಲಯದಲ್ಲಿ ಭಾರತೀಯ ಕರಾವಳಿ ಪಡೆಯ(ಐಸಿಜಿ) ಹೆಲಿಕಾಪ್ಟರ್‌ವೊಂದು ಪತನಗೊಂಡು ಬೆಂಕಿ ಹೊತ್ತಿಕೊಂಡ ಪರಿಣಾಮ ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ.

'ಅತ್ಯಾಧುನಿಕ ಲಘು ಹೆಲಿಕಾಪ್ಟರ್ (ಎಎಲ್‌ಎಚ್) ಕರಾವಳಿ ಪಡೆಯ ವಿಮಾನ ನಿಲ್ದಾಣದ ರನ್‌ವೇಯಲ್ಲಿ ಮಧ್ಯಾಹ್ನ 12.10ಕ್ಕೆ ಇಳಿಯಲು ಯತ್ನಿಸಿದಾಗ ಅವಘಡ ಸಂಭವಿಸಿದೆ' ಎಂದು ಪೋರ್‌ಬಂದರ್‌ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭಗೀರಥ್ ಸಿನ್ಹಾ ಜಡೇಜಾ ಅವರು ತಿಳಿಸಿದ್ದಾರೆ.

'ಹೆಲಿಕಾಪ್ಟರ್ ಪತನಗೊಂಡ ತಕ್ಷಣ ಬೆಂಕಿ ಹೊತ್ತಿಕೊಂಡಿತು. ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯ ಸಿಬ್ಬಂದಿ ಸಹಾಯದಿಂದ ಬೆಂಕಿ ನಂದಿಸಲಾಗಿದ್ದು, ಹೆಲಿಕಾಪ್ಟರ್ ಒಳಗಿದ್ದ ಇಬ್ಬರು ಪೈಲಟ್ ಮತ್ತು ಒಬ್ಬ ಸಿಬ್ಬಂದಿಯನ್ನು ಹೊರಗೆ ಸಾಗಿಸಿ ಆಸ್ಪತ್ರೆಗೆ ದಾಖಲಿಸಲಾಯಿತು' ಎಂದು ಹೇಳಿದ್ದಾರೆ.

ಹೆಲಿಕಾಪ್ಟರ್ ಪತನಗೊಂಡ ಸ್ಥಳದಲ್ಲಿ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು – ಪಿಟಿಐ ಚಿತ್ರ

'ಆಸ್ಪತ್ರೆಗೆ ದಾಖಲಿಸುವ ಮೊದಲೇ ಇಬ್ಬರು ಮೃತಪಟ್ಟಿದ್ದರು. ಇನ್ನೊಬ್ಬ ಸಿಬ್ಬಂದಿ ಆಸ್ಪತ್ರೆಯಲ್ಲಿ ಮೃತಪಟ್ಟರು' ಎಂದು ಕಮಲ್ ಭಾಗ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರಾಜೇಶ್ ಕನ್ಮಿಯಾ ಅವರು ಮಾಹಿತಿ ನೀಡಿದ್ದಾರೆ.

ಮೃತರನ್ನು ಕಮಾಂಡೆಂಟ್(ಜೆ.ಜಿ) ಸೌರಭ್, ಡೆಪ್ಯುಟಿ ಕಮಾಂಡೆಂಟ್ ಎಸ್.ಕೆ ಯಾದವ್ ಮತ್ತು ಪ್ರಧಾನ ನಾವಿಕ ಮನೋಜ್ ಎಂದು ಗುರುತಿಸಲಾಗಿದೆ.

ಪೊಲೀಸರಿಂದ ದೌರ್ಜನ್ಯ: ಮಾನವ ಹಕ್ಕು ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ನಿಂದಿಸಿದ ಆರೋಪದಲ್ಲಿ ಪೊಲೀಸರು ತಮ್ಮನ್ನು ಕಾನೂನು ಬಾಹಿರವಾಗಿ ಬಂಧಿಸಿ, ದೌರ್ಜನ್ಯ ಎಸಗಿದ್ದಾರೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿರುವ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರು, ₹1 ಕೋಟಿ ಪರಿಹಾರ ಕೋರಿದ್ದಾರೆ.

13 ಪುಟಗಳ ದೂರನ್ನು ಇ-ಮೇಲ್ ಮೂಲಕ ಆಯೋಗಕ್ಕೆ ತಲುಪಿಸಿರುವ ರವಿ ಅವರು, 'ನನ್ನ ಮೇಲಿನ ದೌರ್ಜನ್ಯ ತಡೆಯುವಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ.ಪರಮೇಶ್ವರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಫಲರಾಗಿದ್ದಾರೆ' ಎಂದು ಆರೋಪಿಸಿದ್ದಾರೆ.

'ನನ್ನ ವಿರುದ್ಧದ ಆರೋಪದಲ್ಲಿ ಹುರುಳಿಲ್ಲ ಎಂದು ಸಭಾಪತಿ ಅವರು ಹೇಳಿದ್ದರೂ ಪೊಲೀಸರು ಅಕ್ರಮವಾಗಿ ಸುವರ್ಣ ವಿಧಾನಸೌಧ ಪ್ರವೇಶಿಸಿ, ಬಂಧಿಸಿ ಪ್ರಾಣಿಯಂತೆ ಹೊತ್ತೊಯ್ದರು. ಜನಪ್ರತಿನಿಧಿಯ ಹಕ್ಕುಗಳನ್ನು ಈ ಮೂಲಕ ಉಲ್ಲಂಘಿಸಿದರು' ಎಂದು ವಿವರಿಸಿದ್ದಾರೆ.

'ಪೊಲೀಸರಂತೂ ನನ್ನನ್ನು ಜೀಪಿನಲ್ಲಿ ಕೂರಿಸಿಕೊಂಡು ರಾತ್ರಿಯಿಡೀ 500–600 ಕಿ.ಮೀ. ಅನಗತ್ಯವಾಗಿ ಸುತ್ತಾಡಿಸಿದರು. ನನ್ನ ಬೆಂಗಾವಲಿನವರು ಮತ್ತು ಮಾಧ್ಯಮದವರು ಬರದಂತೆ ಹೆದ್ದಾರಿ–ರಸ್ತೆಗಳಲ್ಲಿ ತಡೆ ನಿರ್ಮಿಸಿದರು. ಕಲ್ಲು ಕ್ವಾರಿ, ಅರಣ್ಯ ಪ್ರದೇಶ, ಕಬ್ಬಿನ ಗದ್ದೆಯಲ್ಲಿ ಕೂರಿಸಿದ್ದರು' ಎಂದರು.

'ವಶಕ್ಕೆ ಪಡೆದಿದ್ದಾಗ ಪೊಲೀಸರು ನನಗೆ ಊಟ–ನೀರು ಕೊಡಲಿಲ್ಲ, ಶೌಚಕ್ಕೂ ಹೋಗಲು ಅವಕಾಶ ನೀಡಲಿಲ್ಲ. ನನಗಾಗಿದ್ದ ಗಾಯಕ್ಕೆ ಔಷಧಿಯನ್ನೂ ನೀಡಲಿಲ್ಲ. ಇದು ನನ್ನನ್ನು ಎನ್‌ಕೌಂಟರ್‌ನಲ್ಲಿ ಕೊಲ್ಲಲು ಮಾಡಿದ ಸಂಚು' ಎಂದು ಆರೋಪಿಸಿದ್ದಾರೆ.

'ಈ ಸಂಚಿನಲ್ಲಿ ಪೊಲೀಸ್ ಮಹಾ ನಿರ್ದೇಶಕ, ಪೊಲೀಸ್ ಆಯುಕ್ತ, ಎಸ್‌ಪಿ ಮತ್ತು ಅಧೀನ ಅಧಿಕಾರಿಗಳು ನೇರವಾಗಿ ಭಾಗಿಯಾಗಿದ್ದಾರೆ. ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ನನಗಾಗಿರುವ ಅನ್ಯಾಯಕ್ಕೆ ₹1 ಕೋಟಿ ಪರಿಹಾರ ಕೊಡಬೇಕು. ಅದನ್ನು ತಪ್ಪಿತಸ್ಥರಿಂದಲೇ ವಸೂಲಿ ಮಾಡಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ನನ್ನ ವಿರುದ್ಧ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಸಂಚು ರೂಪಿಸಿದ್ದರು. ಇದಕ್ಕೆ ಪೊಲೀಸ್ ಇಲಾಖೆಯನ್ನು ದುರ್ಬಳಕೆ ಮಾಡಿಕೊಂಡರು
ಸಿ.ಟಿ.ರವಿ ವಿಧಾನಪರಿಷತ್ ಬಿಜೆಪಿ ಸದಸ್ಯ

ಜಾತಿ ಮನೆಯೊಳಗೆ, ಹೊರಗೆ ಒಗ್ಗಟ್ಟಿರಲಿ: ಶ್ರೀಗಳ ಪ್ರತಿಪಾದನೆ

'ಮತಾಂತರ ತಡೆಯದಿದ್ದರೆ ಮಠಗಳ ಮೇಲೆ ಹಸಿರು ಧ್ವಜ'

ಪ್ರಜಾವಾಣಿ ವಾರ್ತೆ

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ

ಹೊಸಪೇಟೆ (ವಿಜಯನಗರ): 'ಹಿಂದೂಗಳಲ್ಲಿ ಜಾತಿಗಳಿರಲಿ, ಅವು ಮನೆಯೊಳಗೆಯೇ ಇರಬೇಕು, ಹೊರಗೆ ಬಂದಾಗ ನಾವೆಲ್ಲ ಒಂದು ಎಂಬ ಭಾವನೆ ಮೂಡಿರಬೇಕು. ಅಂತಹ ಭಾವನೆ ಸೃಷ್ಟಿಸಲು ನಾವು ವಿಫಲರಾಗಿರುವುದರಿಂದಲೇ ಮತಾಂತರ ಜಾಸ್ತಿಯಾಗುತ್ತಿದೆ' ಎಂದು ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು.

ಭಾನುವಾರ ಇಲ್ಲಿ ನಡೆದ ಸಾಮಾಜಿಕ ಸಾಮರಸ್ಯ ವೇದಿಕೆಯ ಕರ್ನಾಟಕ ಉತ್ತರಪ್ರಾಂತ ಕಾರ್ಯಕರ್ತರ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಜಾತಿ ತಾರತಮ್ಯ, ಮತಾಂತರ ಬಗ್ಗೆ ಎಷ್ಟೇ ಹೇಳಿದರೂ ಮಠಗಳಿಗೆ ಅರ್ಥವಾಗುತ್ತಿಲ್ಲ, ಇಂತಹ ನಿರ್ಲಕ್ಷ್ಯ ಮುಂದುವರಿದರೆ ಹಸಿರು ಬಾವುಟ ಹಾರುವುದು ಮೊದಲು ಮಠಗಳ ಮೇಲೆಯೇ ಎಂಬುದನ್ನು ಮರೆಯಬಾರದು' ಎಂದು ಎಚ್ಚರಿಸಿದರು.

'ಮತಾಂತರ ಸಮಾಜಕ್ಕೆ ದೊಡ್ಡ ಪಿಡುಗಾಗಿದೆ. ಅಸ್ಪೃಶ್ಯರು, ತೀರ ಹಿಂದುಳಿದವರು, ದಲಿತರು ಮತಾಂತರ ಆಗುತ್ತಿದ್ದಾರೆಂದು ಹೇಳುವ ಸ್ಥಿತಿ ಈಗ ಇಲ್ಲ. ಸಮಾಜದ ಮುಖ್ಯ ವಾಹಿನಿಯಲ್ಲಿರುವ, ಮೇಲ್ಜಾತಿ ಎನಿಸಿಕೊಂಡವರು ಸಹ ಈಗ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಏಕೆ ಹೀಗಾಗುತ್ತಿದೆ? ಇದಕ್ಕೆ ಕಾರಣವೇನು? ಯಾರ ಮೇಲೆ ಇದರ ಹೊಣೆ ಹಾಕಬೇಕು ಎಂಬುದೇ ಅರ್ಥವಾಗುತ್ತಿಲ್ಲ. ಈಗಲೂ ಅಲ್ಲಲ್ಲಿ ಜಾತ್ರೆಗಳಲ್ಲಿ ಗಲಾಟೆಯಾಗುತ್ತವೆ. ದೇವಸ್ಥಾನ ಪ್ರವೇಶಕ್ಕೆ ಮುಕ್ತ ಅವಕಾಶಗಳಿಲ್ಲ. ಸಾಮಾಜಿಕ ಬಹಿಷ್ಕಾರಗಳು ನಡೆಯುತ್ತಿವೆ. ಮೇಲು-ಕೀಳು ಕಾಣಲಾಗುತ್ತಿದೆ. ನಮಗೆ ಅರಿವು ಇಲ್ಲದಂತೆ ಇವೆಲ್ಲ ತಾರತಮ್ಯ ಆಗಿರಬಹುದು. ಇನ್ನಾದರೂ ಇದನ್ನೆಲ್ಲ ಸರಿಪಡಿಸಿ ವೇಗವಾಗಿ ಹೆಜ್ಜೆ ಇಡಬೇಕಿದೆ' ಎಂದು ಸ್ವಾಮೀಜಿ ಹೇಳಿದರು.

'ಸಾಮರಸ್ಯ ನಡಿಗೆಯನ್ನು ನಾನು ನಡೆಸುತ್ತಲೇ ಇದ್ದೇನೆ, ಎಷ್ಟೇ ಟೀಕೆ ಬಂದರೂ ನಾನು ಅದನ್ನು ನಿಲ್ಲಿಸುವುದಿಲ್ಲ. ನನಗೆ ಈ ವಿಚಾರದಲ್ಲಿ ಉಡುಪಿ ಪೇಜಾವರ ಮಠಾಧೀಶರಾಗಿದ್ದ ವಿಶ್ವೇಶ ತೀರ್ಥ ಶ್ರೀಗಳೇ ಪ್ರೇರಣೆ. ರಾಷ್ಟ್ರೀಯತೆ, ಧರ್ಮ, ಮಠ, ಪೀಠ ವಿಚಾರ ಬಂದಾಗ ರಾಷ್ಟ್ರೀಯತೆಯೇ ನನಗೆ ಮುಖ್ಯವಾಗುತ್ತದೆ' ಎಂಬುದನ್ನು ಅವರು ಪುನರುಚ್ಚರಿಸಿದರು.

'ಹಿಂದೂಗಳಲ್ಲಿ ಜಾತಿಗಳ ನಡುವೆ ಅಂತರ ಕಾಯ್ದುಕೊಳ್ಳುವ ಪರಿಪಾಠ ಬಂದುದರಿಂದಲೇ ಒಂದೊಂದು ಮತ ಹುಟ್ಟಿಕೊಳ್ಳುವಂತಾಯಿತು. ಸ್ವಲ್ಪ ಸುಧಾರಿಸಿಕೊಂಡು ಹೋಗುವ ಪ್ರವೃತ್ತಿ ಇರುತ್ತಿದ್ದರೆ ಈಗ ಒಂದು ಮತವಷ್ಟೇ ಇರುತ್ತಿತ್ತು. ಈಗಾಗಲೇ ಹಿಂದೂಗಳ ಮೇಲೆ ದಾಳಿ ಆಗಿದೆ, ಮತ್ತೊಮ್ಮೆ ಇಂತಹದೇ ದಾಳಿ ನಡೆಯುವುದು ನಿಶ್ಚಿತ ಎಂಬಂತಹ ಸ್ಥಿತಿ ಇದೆ. ಹೀಗಿದ್ದರೂ ಹಿಂದೂಗಳಿಗೆ ಬುದ್ಧಿ ಬರುತ್ತಿಲ್ಲ ಎಂಬುದೇ ವಿಷಾದಕರ' ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಹ ಕಾರ್ಯವಾಹ ಟಿ.ಪ್ರಸನ್ನ ದಿಕ್ಸೂಚಿ ಭಾಷಣ ಮಾಡಿದರು.

ಮುಖ್ಯಮಂತ್ರಿ ಆಪ್ತ ಸಚಿವರು ಶೀಘ್ರ ದೆಹಲಿಗೆ ಪ್ರಯಾಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ (ಜ.2) ನಡೆದ 'ಔತಣಕೂಟ'ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲ ಸಚಿವರು, ಶಾಸಕರು ಭಾಗಿಯಾಗಿ ಚರ್ಚಿಸಿದ ಬೆನ್ನಲ್ಲೆ, ಸಭೆಯಲ್ಲಿದ್ದ ಕೆಲ ಸಚಿವರು ಪಕ್ಷದ ವರಿಷ್ಠರನ್ನು ಪ್ರತ್ಯೇಕವಾಗಿ ಭೇಟಿ ಮಾಡಲು ಮುಂದಾಗಿದ್ದಾರೆ.

'ಗುರುವಾರ 'ಔತಣಕೂಟ'ದಲ್ಲಿ ಸಂಪುಟ ಪುನಾರಚನೆ, ಸಿ.ಎಂ ಸ್ಥಾನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿ ಯಾವುದೇ ರಾಜಕೀಯ ವಿಚಾರ ಚರ್ಚಿಸಿಲ್ಲ' ಎಂದು ಮುಖ್ಯಮಂತ್ರಿ, ಸಚಿವರು, ಶಾಸಕರು ಈಗಾಗಲೇ ಹೇಳಿದ್ದಾರೆ. ಆದರೆ, ತುರ್ತಾಗಿ ನಿಗದಿಯಾಗಿದ್ದ ಈ ಸಭೆಯಲ್ಲಿ ಕೆಲವು ವಿಚಾರಗಳು ಚರ್ಚೆಯಾಗಿವೆ. ಅಲ್ಲದೆ, ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯ ಮಂಡಿಸಲು ದೆಹಲಿಗೆ ತೆರಳುವ ಬಗ್ಗೆಯೂ ಕೆಲವು ಸಚಿವರು ಸಮಾಲೋಚನೆ ನಡೆಸಿದ್ದಾರೆ ಎನ್ನಲಾಗಿದೆ.

ವರಿಷ್ಠರನ್ನು ಭೇಟಿ ಮಾಡಿ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ, ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಬೇಡಿಕೆ ಕುರಿತು ನಿಲುವು ತಿಳಿಸಲು ಕೆಲ ಸಚಿವರು ಮುಂದಾಗಿದ್ದಾರೆ. ಸಾಧ್ಯವಾದರೆ ಮುಂದಿನ ವಾರವೇ ದೆಹಲಿಗೆ ತೆರಳಲು ಸಚಿವ ಕೆ.ಎನ್.ರಾಜಣ್ಣ, ಸತೀಶ ಜಾರಕಿಹೊಳಿ ಮತ್ತು ಸಚಿವ ಎಚ್.ಸಿ.ಮಹದೇವಪ್ಪ ಚರ್ಚೆ ನಡೆಸಿದ್ದಾರೆ ಎಂದೂ ಗೊತ್ತಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿ ಇರುವಾಗಲೇ ಮುಖ್ಯಮಂತ್ರಿ ಆಪ್ತ ಬಳಗದಲ್ಲಿರುವ ಸಚಿವರು, ಶಾಸಕರು ಸಭೆ ನಡೆಸಿರುವುದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿತ್ತು. ಹಿಂದೆಯೇ ಹೈಕಮಾಂಡ್ ಭೇಟಿಗೆ ಸಚಿವರು ಮುಂದಾಗಿರುವುದು ಚರ್ಚೆ ಹುಟ್ಟುಹಾಕಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಳಿ ಉಪ ಮುಖ್ಯಮಂತ್ರಿ ಹುದ್ದೆಯ ಜೊತೆಗೆ ಜಲಸಂಪನ್ಮೂಲ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಗಳಿವೆ. ಒಬ್ಬರಿಗೆ ಒಂದೇ ಹುದ್ದೆ ಎನ್ನುವುದು ಪಕ್ಷದ ನೀತಿ. ಹೀಗಾಗಿ, ಈ ವಿಷಯವೂ ಸೇರಿದಂತೆ ಹಲವು ವಿಚಾರಗಳ ಕುರಿತು ವರಿಷ್ಠರಿಗೆ ತಮ್ಮ ನಿಲುವು ವ್ಯಕ್ತಪಡಿಸಲು ಸಚಿವರು ತೀರ್ಮಾನಿಸಿದ್ದಾರೆ ಎಂದೂ ಹೇಳಲಾಗಿದೆ.

ಬೇಡಿಕೆಗಳೇನು?

- ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು
- ಒಂದೊಮ್ಮೆ ಬದಲಾಯಿಸುವುದಾದರೆ ಸಿದ್ದರಾಮಯ್ಯ ಅವರೂ ಒಪ್ಪುವ, ಸರ್ವಸಮ್ಮತ ವ್ಯಕ್ತಿಗೆ ಆ ಸ್ಥಾನ ನೀಡಬೇಕು.
- ಜಾತಿವಾರು ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕು
- ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಮುಕ್ತಗೊಳಿಸಬೇಕು

ಹಸ್ತಪ್ರತಿ 'ರಹಸ್ಯ' ಭೇದಿಸಿದರೆ ₹ 8.57 ಕೋಟಿ

ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): 'ಶತಮಾನದಿಂದ 'ಕಗ್ಗಂಟಾಗಿ' ಉಳಿದಿರುವ ಸಿಂಧೂ ಕಣಿವೆ ನಾಗರಿಕತೆಯ ಹಸ್ತಪ್ರತಿ ರಹಸ್ಯ ಭೇದಿಸಿದವರಿಗೆ 1 ಮಿಲಿಯನ್ ಡಾಲರ್ (ಅಂದಾಜು ₹8.57 ಕೋಟಿ) ಬಹುಮಾನ ನೀಡಲಾಗುವುದು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರಕಟಿಸಿದರು.

ಸಿಂಧೂ ನಾಗರಿಕತೆಯ ಅನ್ವೇಷಣೆಯ ಶತಮಾನೋತ್ಸವ ಕುರಿತ 3 ದಿನದ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿದ ಅವರು, 'ಈಗಲೂ ಆ ಹಸ್ತಪ್ರತಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ಈ ನಿಟ್ಟಿನಲ್ಲಿ ಸಂಶೋಧಕರ ಪ್ರಯತ್ನಗಳಿಗೆ ಉತ್ತೇಜನ ನೀಡಲಿದ್ದು, ಹಸ್ತಪ್ರತಿಯ ರಹಸ್ಯ ಭೇದಿಸುವ ವ್ಯಕ್ತಿ ಅಥವಾ ಸಂಸ್ಥೆಗೆ ಈ ಬಹುಮಾನ ನೀಡಲಾಗುವುದು ಎಂದು ಹೇಳಿದರು.

ದೇವಸ್ಥಾನಗಳನ್ನು ಸರ್ಕಾರಿ ಹಿಡಿತದಿಂದ ಮುಕ್ತಗೊಳಿಸುವ ಉದ್ದೇಶ

ಆಂಧ್ರ: ಅಭಿಯಾನಕ್ಕೆ ವಿಎಚ್‌ಪಿ ಚಾಲನೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಿಂದೂ ದೇವಸ್ಥಾನಗಳನ್ನು ಸರ್ಕಾರದ ಹಿಡಿತದಿಂದ ಮುಕ್ತವಾಗಿಸಬೇಕು ಎಂಬ ಉದ್ದೇಶದ ರಾಷ್ಟ್ರವ್ಯಾಪಿ ಅಭಿಯಾನವನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಗನ್ನವರಂನಲ್ಲಿ ಭಾನುವಾರ ಆರಂಭಿಸಿದೆ. ಈ ಅಭಿಯಾನಕ್ಕೆ 'ಹೈಂದವ ಶಂಖಾರವಂ' ಎಂಬ ಹೆಸರು ಇಡಲಾಗಿದೆ.

ದೇಶದ ವಿವಿಧೆಡೆಗಳಿಂದ ಬರುವ ವಿಎಚ್‌ಪಿ ಕಾರ್ಯಕರ್ತರು, ಮಠಾಧೀಶರು, ವಿಎಚ್‌ಪಿ ರಾಷ್ಟ್ರೀಯ ಪ್ರತಿನಿಧಿಗಳು, ಬಿಜೆಪಿ ಮುಖಂಡರು ಮತ್ತು ಆಧ್ಯಾತ್ಮಿಕ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

'ಹಿಂದೂ ಸಮಾಜವನ್ನು ವಿಭಜಿಸುವ ಕಾರ್ಯತಂತ್ರದ ಭಾಗವಾಗಿ ಈಸ್ಟ್ ಇಂಡಿಯಾ ಕಂಪನಿಯು 1817ರಲ್ಲಿ ದೇವಸ್ಥಾನಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ಅದಾದ ನಂತರದಲ್ಲಿ ಸರ್ಕಾರಗಳು ದೇವಸ್ಥಾನಗಳ ಮೇಲೆ ಅಧಿಕಾರ ಹೊಂದಿವೆ. ದೇಶದಾದ್ಯಂತ ದೇವಸ್ಥಾನಗಳಿಗೆ ಸೇರಿದ ಲಕ್ಷಾಂತರ ಎಕರೆ ಜಮೀನು ಅತಿಕ್ರಮಣಕ್ಕೆ ಒಳಗಾಗಿದೆ. ಬೇರೆ ಸಂಸ್ಥೆಗಳಿಗೆ ಅನ್ವಯವಾಗದ ನಿಯಮಗಳನ್ನು ದೇವಸ್ಥಾನಗಳ ಮೇಲೆ ಹೇರಲಾಗುತ್ತಿದೆ. ಕೆಲವೆಡೆ ನಿರ್ವಹಣೆಯ ಹೊಣೆಯನ್ನು ಹಿಂದೂಗಳಲ್ಲದವರಿಗೆ ನೀಡಲಾಗಿದೆ. ಇಂತಹ ವ್ಯಕ್ತಿಗಳಿಂದ ದೇವಸ್ಥಾನಗಳ ಪಾವಿತ್ರ್ಯವನ್ನು ಕಾಯುವ ಹಾಗೂ ಹಿಂದೂ ಧರ್ಮವನ್ನು ರಕ್ಷಿಸುವ ನಿರೀಕ್ಷೆ ಇಟ್ಟುಕೊಳ್ಳುವುದು ಹೇಗೆ' ಎಂದು ವಿಎಚ್‌ಪಿ ರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಪ್ರಶ್ನಿಸಿದರು.

ವಿಎಚ್‌ಪಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಜನಸ್ತೋಮ

ದೇವಸ್ಥಾನಗಳಲ್ಲಿನ ಸಾಂಪ್ರದಾಯಿಕ ಆಚರಣೆಗಳಿಗೆ ಕೆಲವರು ಅಡ್ಡಿ ಉಂಟುಮಾಡಿದ್ದಾರೆ, ಆಡಳಿತ ಮಂಡಳಿ ಹೆಸರಿನಲ್ಲಿ ದೇವಸ್ಥಾನಗಳನ್ನು ರಾಜಕೀಯ ಪುನರ್ವಸತಿಯ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ, ದೇವಸ್ಥಾನಗಳನ್ನು ಪವಿತ್ರ ಕೇಂದ್ರಗಳನ್ನಾಗಿ ಕಾಪಾಡುವ ಬದಲು ಅವುಗಳನ್ನು ವರಮಾನದ ಮೂಲಗಳನ್ನಾಗಿ ಮಾಡಿಕೊಳ್ಳಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ದೇವಸ್ಥಾನಗಳು ಹಿಂದೊಮ್ಮೆ 15 ಲಕ್ಷ ಎಕರೆ ಜಮೀನು ಹೊಂದಿದ್ದವು, ಈಗ 4.5 ಲಕ್ಷ ಎಕರೆ ಮಾತ್ರ ಉಳಿದುಕೊಂಡಿದೆ ಎಂದು ತೆಲುಗು ಭಾಷಿಕ ರಾಜ್ಯಗಳಲ್ಲಿ ಪ್ರಸಿದ್ಧರಾಗಿರುವ ತ್ರಿದಂಡಿ ಚಿನ್ನ ಜೀಯರ್ ಸ್ವಾಮಿ ಹೇಳಿದರು.

ಪಿಎಫ್‌ಐ ನಂಟಿದ್ದ ವ್ಯಕ್ತಿಯ ಬಂಧಿಸಿದ ಎನ್‌ಐಎ

ನವದೆಹಲಿ (ಪಿಟಿಐ): ಭಾರತದಲ್ಲಿ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಲು ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಕ್ಕೆ (ಪಿಎಫ್‌ಐ) ದುಬೈನಿಂದ ಹಣಕಾಸು ಒದಗಿಸಲು ನೆರವಾದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ.

ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಮೊಹಮ್ಮದ್ ಸಜ್ಜದ್ ಆಲಂ ಎಂಬುವವರನ್ನು ಎನ್‌ಐಎ ತಂಡ ಶನಿವಾರ ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ. ಈತ ದುಬೈನಿಂದ ದೆಹಲಿಗೆ ಬಂದಿಳಿದ ಕೂಡಲೇ ಅಧಿಕಾರಿಗಳು ಬಂಧಿಸಿದ್ದಾರೆ ಎಂದು ಎನ್‌ಐಎ ಭಾನುವಾರ ಪ್ರಕಟಣೆ ಯಲ್ಲಿ ತಿಳಿಸಿದೆ.

ಪಿಎಫ್‌ಐನ ತರಬೇತಿ ಪಡೆದ ಕಾರ್ಯಕರ್ತನಾದ ಆಲಂ ವಿರುದ್ಧ ಎನ್‌ಐಎ ವಿಶೇಷ ನ್ಯಾಯಾಲಯ ಬಂಧನದ ವಾರಂಟ್ ಹೊರಡಿಸಿತ್ತು. ಅಲ್ಲದೆ ಈತನ ವಿರುದ್ಧ ಲುಕ್‌ಔಟ್ ನೋಟಿಸ್ ಸಹ ಜಾರಿಯಾಗಿತ್ತು ಎಂದು ಎನ್‌ಐಎ ಹೇಳಿದೆ.

ಆರೋಪಿಯು ದುಬೈನಿಂದ ಬಿಹಾರದ ಪಿಎಫ್‌ಐ ಕಾರ್ಯಕರ್ತರಿಗೆ ಯುಎಇ, ಕರ್ನಾಟಕ ಮತ್ತು ಕೇರಳ ಮೂಲದ ಗುಂಪುಗಳಿಂದ ಹಣ ಅಕ್ರಮವಾಗಿ ರವಾನಿಸುವಲ್ಲಿ ತೊಡಗಿಸಿಕೊಂಡಿದ್ದ ಎಂದು ಪ್ರಕಟಣೆ ಮಾಹಿತಿ ನೀಡಿದೆ.

ಹೀಗೆ ದೊರೆತ ಹಣವನ್ನು ನಿಷೇಧಿತ ಸಂಘಟನೆ ಮೂಲಕ ಕಾನೂನುಬಾಹಿರ ಚಟುವಟಿಕೆ ಮತ್ತು ಅಪರಾಧ ಕೃತ್ಯಗಳನ್ನು ನಡೆಸಲು ಬಳಸಲಾಗುತ್ತಿತ್ತು ಎಂದು ಎನ್‌ಐಎ ಹೇಳಿದೆ.

ಆಸ್ಟ್ರೇಲಿಯಾಕ್ಕೆ ಬಾರ್ಡರ್–ಗಾವಸ್ಕರ್ ಟ್ರೋಫಿ: ಟೀಮ್ ಇಂಡಿಯಾ ಡಬ್ಲ್ಯುಟಿಸಿ ಫೈನಲ್ ಕನಸು ಭಗ್ನ

ಭಾರತ ತಂಡದ ದಶಕದ ಪಾರಮ್ಯ ಅಂತ್ಯ

• ಮಧು ಜವಳಿ

ಸಿಡ್ನಿ: 'ಭಾರತ ತಂಡದ ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರೀತ್ ಬೂಮ್ರಾ ಅವರ ಪಾತ್ರ ಮೂರನೇ ಎರಡರಷ್ಟು' ಎಂದು ಈಚೆಗೆ ಆಸ್ಟ್ರೇಲಿಯಾದ ಮಾಜಿ ವೇಗಿ ಸ್ಟುವರ್ಟ್ ಕ್ಲಾರ್ಕ್ ಸಂದರ್ಶನದಲ್ಲಿ ಹೇಳಿದ್ದರು.

ಭಾನುವಾರ ಇಲ್ಲಿ ಬೂಮ್ರಾ ಗಾಯದಿಂದಾಗಿ ಆಟದಿಂದ ಹೊರಗುಳಿದಾಗ ಭಾರತ ತಂಡಕ್ಕೆ ಆದ ಕಷ್ಟವು ಸ್ಟುವರ್ಟ್ ಹೇಳಿಕೆಯನ್ನು ಪುಷ್ಟೀಕರಿಸಿದವು. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಬಾರ್ಡರ್-ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕೊನೆಯ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು 181 ರನ್‌ಗಳಿಗೆ ನಿಯಂತ್ರಿಸುವಲ್ಲಿ ವೇಗಿಗಳಾದ ಮೊಹಮ್ಮದ್ ಸಿರಾಜ್ ಮತ್ತು ಪ್ರಸಿದ್ಧ ಕೃಷ್ಣ ಮಹತ್ವದ ಪಾತ್ರ ವಹಿಸಿದ್ದರು. ಆದರೆ ನಿರ್ಣಾಯಕವಾಗಿದ್ದ ಎರಡನೇ ಇನಿಂಗ್ಸ್‌ನಲ್ಲಿ ವೇಗಿಗಳ ಸಂಪೂರ್ಣ ಸಾಮರ್ಥ್ಯ ಹೊರಹೊಮ್ಮಲಿಲ್ಲ. ಪ್ರಸಿದ್ಧ (65ಕ್ಕೆ3) ಮಾತ್ರ ಒಂದಿಷ್ಟು ಪ್ರಯತ್ನ ಮಾಡಿದರು.

ಆದರೆ ಆತಿಥೇಯರು ಕೆಲವು ಕಠಿಣ ಸನ್ನಿವೇಶ ಎದುರಿಸಿದ ನಂತರವೂ ಪಂದ್ಯದಲ್ಲಿ 6 ವಿಕೆಟ್‌ಗಳ ಜಯ ಸಾಧಿಸಿದರು. ಪ್ಯಾಟ್ ಕಮಿನ್ಸ್ ಬಳಗವು 3-1ರಿಂದ ಸರಣಿ ಜಯಿಸಿತು. ಮೂರನೇ ದಿನದಾಟದಲ್ಲಿ ಮೆಕ್‌ಗ್ರಾ ಫೌಂಡೇಷನ್ ನಡೆಸಿದ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದ ಅಂಗವಾಗಿ ನಸುಗೆಂಪು ವರ್ಣಕ್ಕೆ ತಿರುಗಿದ್ದ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ತಂಡವು ಟ್ರೋಫಿಗೆ ಮುತ್ತಿಕ್ಕಿತು. ಒಂಬತ್ತು ವರ್ಷಗಳ ನಂತರ ಈ ಪ್ರಶಸ್ತಿಯನ್ನು ಆಸ್ಟ್ರೇಲಿಯಾ ಮುಡಿಗೇರಿಸಿಕೊಂಡಿತು.

ಇದರೊಂದಿಗೆ ಭಾರತ ತಂಡಕ್ಕೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪ್ರವೇಶಿಸುವ ಹಾದಿಯು ಸಂಪೂರ್ಣವಾಗಿ ಮುಚ್ಚಿತು. ಇದೇ ಮೊದಲ ಬಾರಿ ಅರ್ಹತೆ ಗಿಟ್ಟಿಸಿರುವ ದಕ್ಷಿಣ ಆಫ್ರಿಕಾ ಮತ್ತು ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಭಾರತ ತಂಡವು ಎರಡು ಬಾರಿ ರನ್ನರ್ಸ್ ಅಪ್ ಆಗಿತ್ತು.

ಎರಡನೇ ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು 6 ವಿಕೆಟ್‌ಗಳಿಗೆ 141 ರನ್ ಗಳಿಸಿತ್ತು ಭಾನುವಾರ ಬೆಳಿಗ್ಗೆ ಈ ಮೊತ್ತಕ್ಕೆ 16 ರನ್ ಮಾತ್ರ ಸೇರಿಸಲು ಸಾಧ್ಯವಾಯಿತು. 157 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡ ಭಾರತ, 161 ರನ್‌ಗಳ ಗುರಿಯೊಡ್ಡಿತು.

ಆತಿಥೇಯ ವೇಗಿ ಸ್ಕಾಟ್ ಬೋಲ್ಯಾಂಡ್ (45ಕ್ಕೆ6) ಮತ್ತು ಪ್ಯಾಟ್ ಕಮಿನ್ಸ್ (44ಕ್ಕೆ3) ಅವರು ತಲಾ ಎರಡು ವಿಕೆಟ್ ಪಡೆದರು. ಸ್ಕಾಟ್ ಪಂದ್ಯದಲ್ಲಿ ಒಟ್ಟು 10 ವಿಕೆಟ್ ಗಳಿಸಿದರು. ಪಿಚ್‌ನಲ್ಲಿ ಸ್ವಿಂಗ್ ಮತ್ತು ಬೌನ್ಸ್‌ಗೆ ಅನುಕೂಲ ಕವಾಗುವಂತಿದ್ದ ಪ್ಯಾಚ್‌ಗಳಲ್ಲಿ ಚೆಂಡನ್ನು ಹಾಕುವ ನಿಖರತೆಯಿಂದ ಸ್ಕಾಟ್ ಯಶಸ್ವಿಯಾದರು.

ಆದರೆ ಇದೇ ತಂತ್ರವನ್ನು ಅನುಕರಿಸುವಲ್ಲಿ ಭಾರತದ ಬೌಲರ್‌ಗಳು ಸಫಲರಾಗಲಿಲ್ಲ. ಇದರಿಂದಾಗಿ ನೀಡಿದ್ದ ಗುರಿಯನ್ನು ರಕ್ಷಿಸಿಕೊಳ್ಳುವಲ್ಲಿ ಎಡವಿದರು. ಬೂಮ್ರಾ ಅವರು ಬ್ಯಾಟಿಂಗ್ ಮಾಡಲು ಬಂದಿದ್ದರಿಂದ ಬೌಲಿಂಗ್ ಕೂಡ ಮಾಡುವ ಭರವಸೆ ಮೂಡಿಸಿದ್ದರು. ವಿರಾಟ್ ಕೊಹ್ಲಿ ಮುಂದಾಳತ್ವದಲ್ಲಿ ಭಾರತ ತಂಡವು ಫೀಲ್ಡಿಂಗ್‌ಗೆ ಮೈದಾನಕ್ಕಿಳಿದಾಗ ಬೂಮ್ರಾ ಗೈರುಹಾಜರಿ ಸ್ಪಷ್ಟವಾಯಿತು.

ಇದರ ಲಾಭವನ್ನು ಆತಿಥೇಯ ತಂಡದ ಆರಂಭಿಕ ಜೋಡಿ ತೆಗೆದುಕೊಂಡಿತು. ಸ್ಯಾಮ್ ಕಾನ್‌ಸ್ಟಸ್ (22 ರನ್) ಮತ್ತು ಉಸ್ಮಾನ್ ಖ್ವಾಜಾ (41 ರನ್) ಅವರು ಮೊದಲ 3 ಓವರ್‌ಗಳಲ್ಲಿಯೇ ಸಿರಾಜ್ ಮತ್ತು ಪ್ರಸಿದ್ಧ ಅವರ ಎಸೆತಗಳನ್ನು ದಂಡಿಸಿದರು. ಸೂಕ್ತ ಲೈನ್ ಮತ್ತು ಲೆಂಗ್ತ್ ನಿರ್ವಹಿಸಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.

ಈ ನಡುವೆಯೇ ಕನ್ನಡಿಗ ಪ್ರಸಿದ್ಧ ಅವರು ಸ್ಯಾಮ್, ಮಾರ್ನಸ್ ಲಾಬುಷೇನ್ ಮತ್ತು ಸ್ಟೀವ್ ಸ್ಮಿತ್ ಅವರ ವಿಕೆಟ್ ಕಬಳಿಸಿದರು. ಸ್ಮಿತ್ ಅವರು ಟೆಸ್ಟ್‌ನಲ್ಲಿ 10 ಸಾವಿರ ರನ್ ಮೈಲುಗಲ್ಲು ತಲುಪಲು ಇನ್ನೊಂದು ರನ್ ಬೇಕಿದ್ದಾಗಲೇ ಪ್ರಸಿದ್ಧ ಎಸೆತದಲ್ಲಿ ಯಶಸ್ವಿಗೆ ಕ್ಯಾಚ್ ಆದರು. ಈ ಸಂದರ್ಭದಲ್ಲಿ ಭಾರತದ ಪಾಳೆಯದಲ್ಲಿ ಹೋರಾಟದ ಭಾವ ಚಿಗುರಿತು. ಸಿರಾಜ್ ಕೂಡ ಉಸ್ಮಾನ್ ವಿಕೆಟ್ ಗಳಿಸಿದರು.

ಆದರೆ ವೆಬ್‌ಸ್ಟರ್ (ಅಜೇಯ 39) ಮತ್ತು ಟ್ರಾವಿಸ್ ಹೆಡ್ (ಅಜೇಯ 34) ಅವರು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. ತಂಡವು 4 ವಿಕೆಟ್‌ಗಳಿಗೆ 162 ರನ್ ಗಳಿಸಿತು. ಚಹಾ ವಿರಾಮಕ್ಕೆ ಇನ್ನೂ ಒಂದು ಗಂಟೆ ಬಾಕಿ ಇರುವಾಗಲೇ ಆತಿಥೇಯ ಬಳಗ ಜಯಭೇರಿ ಬಾರಿಸಿತು.

ಬಾರ್ಡರ್–ಗಾವಸ್ಕರ್ ಟ್ರೋಫಿಯೊಂದಿಗೆ ಆಸ್ಟ್ರೇಲಿಯಾ ಕ್ರಿಕೆಟ್ ತಂಡ –ಎಎಫ್‌ಪಿ ಚಿತ್ರ

ಮೂರು ವಿಕೆಟ್ ಪಡೆದ ವೇಗಿ ಪ್ರಸಿದ್ಧ ಕೃಷ್ಣ ಚಿತ್ರ: ಎಎಫ್‌ಪಿ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಅಂಕ	%
1	ದಕ್ಷಿಣ ಆಫ್ರಿಕಾ	11	7	3	1	88	66.67
2	ಆಸ್ಟ್ರೇಲಿಯಾ	17	11	4	2	130	63.73
3	ಭಾರತ	19	9	8	2	114	50.00
4	ನ್ಯೂಜಿಲೆಂಡ್	14	7	7	0	81	48.21
5	ಶ್ರೀಲಂಕಾ	11	5	6	0	60	45.45

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 185 (72.2 ಓವರ್‌ಗಳಲ್ಲಿ). ಆಸ್ಟ್ರೇಲಿಯಾ 181 (51 ಓವರ್‌ಗಳಲ್ಲಿ).

ಎರಡನೇ ಇನಿಂಗ್ಸ್: ಭಾರತ 157 (39.5 ಓವರ್‌ಗಳಲ್ಲಿ) (ಶನಿವಾರ 32 ಓವರ್‌ಗಳಲ್ಲಿ 6ಕ್ಕೆ 141)

ಜಡೇಜ ಸಿ ಕ್ಯಾರಿ ಬಿ ಕಮಿನ್ಸ್ 13 (45ಎ, 4x2)
ವಾಷಿಂಗ್ಟನ್ ಬಿ ಕಮಿನ್ಸ್ 12 (43ಎ, 4x1)
ಸಿರಾಜ್ ಸಿ ಖ್ವಾಜಾ ಬಿ ಬೋಲ್ಯಾಂಡ್ 4 (11ಎ)
ಬೂಮ್ರಾ ಬಿ ಬೋಲ್ಯಾಂಡ್ 0 (3ಎ)
ಪ್ರಸಿದ್ಧ ಕೃಷ್ಣ ಔಟಾಗದೇ 1 (1ಎ)
ಇತರೆ: 8 (ಬೈ 4, ಲೆಗ್‌ಬೈ 4)
ವಿಕೆಟ್ ಪತನ: 7-147 (ರವೀಂದ್ರ ಜಡೇಜ, 34.4), 8-156 (ವಾಷಿಂಗ್ಟನ್ ಸುಂದರ್, 38.4), 9-156 (ಮೊಹಮ್ಮದ್ ಸಿರಾಜ್, 39.3), 10-157 (ಜಸ್‌ಪ್ರೀತ್ ಬೂಮ್ರಾ, 39.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4-0-36-0, ಪ್ಯಾಟ್ ಕಮಿನ್ಸ್ 15-4-44-3, ಸ್ಕಾಟ್ ಬೋಲ್ಯಾಂಡ್ 16.5-5-45-6, ಬ್ಯೂ ವೆಬ್‌ಸ್ಟರ್ 4-1-24-1

ಆಸ್ಟ್ರೇಲಿಯಾ 4 ವಿಕೆಟ್‌ಗೆ 162 (27 ಓವರ್‌ಗಳಲ್ಲಿ)

ಸ್ಯಾಮ್ ಸಿ ವಾಷಿಂಗ್ಟನ್ ಬಿ ಪ್ರಸಿದ್ಧ 22 (17ಎ, 4x3)
ಖ್ವಾಜಾ ಸಿ ಪಂತ್ ಬಿ ಸಿರಾಜ್ 41 (45ಎ, 4x4)
ಲಾಬುಷೇನ್ ಸಿ ಜೈಸ್ವಾಲ್ ಬಿ ಪ್ರಸಿದ್ಧ 6 (20ಎ, 4x1)
ಸ್ಮಿತ್ ಸಿ ಜೈಸ್ವಾಲ್ ಬಿ ಪ್ರಸಿದ್ಧ 4 (9ಎ)
ಟ್ರಾವಿಸ್ ಹೆಡ್ ಔಟಾಗದೇ 34 (38ಎ, 4x4)
ಬ್ಯೂ ವೆಬ್‌ಸ್ಟರ್ ಔಟಾಗದೇ 39 (34ಎ, 4x6)
ಇತರೆ: 16 (ಬೈ 5, ಲೆಗ್‌ಬೈ 2, ನೋಬಾಲ್ 1, ವೈಡ್ 8)
ವಿಕೆಟ್ ಪತನ: 1-39 (ಸ್ಯಾಮ್ ಕಾನ್‌ಸ್ಟೆಸ್ 3.5), 2-52 (ಮಾರ್ನಸ್ ಲಾಬುಷೇನ್, 7.6), 3-58 (ಸ್ಟೀವನ್ ಸ್ಮಿತ್, 9.6), 4-104 (ಉಸ್ಮಾನ್ ಖ್ವಾಜಾ, 18.1)
ಬೌಲಿಂಗ್: ಮೊಹಮ್ಮದ್ ಸಿರಾಜ್ 12-1-69-1, ಪ್ರಸಿದ್ಧ ಕೃಷ್ಣ 12-0-65-3, ನಿತೀಶ್ ಕುಮಾರ್ ರೆಡ್ಡಿ 2-0-10-0, ವಾಷಿಂಗ್ಟನ್ ಸುಂದರ್ 1-0-11-0
ಪಂದ್ಯದ ಆಟಗಾರ: ಪಂದ್ಯದ ಆಟಗಾರ: ಸ್ಕಾಟ್ ಬೋಲ್ಯಾಂಡ್
ಸರಣಿಯ ಆಟಗಾರ: ಜಸ್‌ಪ್ರೀತ್ ಬೂಮ್ರಾ (ಒಟ್ಟು 32 ವಿಕೆಟ್)

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 6 ವಿಕೆಟ್ ಜಯ, 3–1 ಸರಣಿ ಗೆಲುವು

ಸಿಗದ ಆಹ್ವಾನ: ಗಾವಸ್ಕರ್ ಅಸಮಾಧಾನ

ಸಿಡ್ನಿ (ಪಿಟಿಐ): ಬಾರ್ಡರ್-ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿ ಜಯಿಸಿದ ಆಸ್ಟ್ರೇಲಿಯಾ ತಂಡಕ್ಕೆ ಪ್ರಶಸ್ತಿ ನೀಡಲು ತಮ್ಮನ್ನು ಆಹ್ವಾನಿಸದ ಆಯೋಜಕರ ವಿರುದ್ಧ ಭಾರತದ ದಿಗ್ಗಜ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆಸ್ಟ್ರೇಲಿಯಾ ತಂಡವು 3-1ರಿಂದ ಭಾರತದ ಎದುರು ಸರಣಿ ಜಯಿಸಿತು. ಆಸ್ಟ್ರೇಲಿಯಾ ಕ್ರಿಕೆಟ್ ದಂತಕಥೆ ಅ್ಯಲನ್ ಬಾರ್ಡರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಗಾವಸ್ಕರ್ ಅವರು ಕ್ರೀಡಾಂಗಣದಲ್ಲಿಯೇ ಹಾಜರಿದ್ದರು. ಆದರೂ ಅವರಿಗೆ ಆಹ್ವಾನ ನೀಡಿರಲಿಲ್ಲ.

'ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲು ಆಹ್ವಾನಿಸಿದ್ದರೆ ಬಹಳ ಸಂತೋಷದಿಂದ ಅಲ್ಲಿರುತ್ತಿದ್ದೆ. ಏಕೆಂದರೆ ಇದು ಬಾರ್ಡರ್-ಗಾವಸ್ಕರ್ ಟ್ರೋಫಿ ಮತ್ತು ಆಸ್ಟ್ರೇಲಿಯಾ-ಭಾರತದ್ದು' ಎಂದು ಕೋಡ್ ಸ್ಪೋರ್ಟ್ಸ್‌ನಲ್ಲಿ ಹೇಳಿದ್ದಾರೆ.

'ಆಸ್ಟ್ರೇಲಿಯಾ ಜಯಿಸಿದ್ದು ನನಗೇನೂ ಬೇಸರವಿಲ್ಲ. ಅವರಿಗೆ ಪ್ರಶಸ್ತಿ ನೀಡಲು ಭಾಗಿಯಾಗಲು ನನಗೇನೂ ಹಿಂಜರಿಕೆ ಇರಲಿಲ್ಲ. ಅವರು ತಮ್ಮ ಎದುರಾಳಿಗಿಂತ ಉತ್ತಮ ಕ್ರಿಕೆಟ್ ಆಡಿದರು. ಅದಕ್ಕಾಗಿ ಗೆದ್ದರು. ನಾನೊಬ್ಬ ಭಾರತೀಯನಾಗಿ ನನ್ನ ಉತ್ತಮ ಸ್ನೇಹಿತ ಅ್ಯಲನ್ ಬಾರ್ಡರ್ ಜೊತೆಗೂಡಿ ಪ್ರಶಸ್ತಿ ಪ್ರದಾನ ಮಾಡಲು ಹೆಮ್ಮೆಪಡುತ್ತಿದ್ದೆ' ಎಂದೂ ಗಾವಸ್ಕರ್ ಹೇಳಿದರು.

ಒಂದೊಮ್ಮೆ ಭಾರತ ತಂಡವು ಸಿಡ್ನಿ ಟೆಸ್ಟ್‌ನಲ್ಲಿ ಜಯಿಸಿದ್ದರೆ, ಸರಣಿ 2-2ರಿಂದ ಸಮವಾಗುತ್ತಿತ್ತು. ಆಗ ಭಾರತ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ ಅವರಿಗೆ ಟ್ರೋಫಿ ನೀಡಲು ಗಾವಸ್ಕರ್ ಇರುತ್ತಿದ್ದರು. ಗಾವಸ್ಕರ್ ಅವರಿಗೆ ತಿಳಿದಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೂಪರ್ ಸ್ಟಾರ್ ಸಂಸ್ಕೃತಿ ನಿಲ್ಲಲಿ: ಪಠಾಣ್

ಸಿಡ್ನಿ (ಪಿಟಿಐ): ಭಾರತ ಕ್ರಿಕೆಟ್ ತಂಡದಲ್ಲಿ ಸೂಪರ್ ಸ್ಟಾರ್ ಸಂಸ್ಕೃತಿ ಅಂತ್ಯಗೊಳಿಸಬೇಕು. ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ತಮ್ಮ ವೈಫಲ್ಯಕ್ಕೆ ಕಾರಣವಾಗುತ್ತಿರುವ ತಪ್ಪುಗಳನ್ನು ತಿದ್ದಿಕೊಳ್ಳಲು ಕಠಿಣ ಶ್ರಮಪಡುತ್ತಿಲ್ಲ. ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿಯೂ ಆಡುತ್ತಿಲ್ಲ. ಆದರೂ ಅವರನ್ನು ಮುಂದುವರಿಸುವುದರ ಔಚಿತ್ಯವೇನು ಎಂದು ವೀಕ್ಷಕ ವಿವರಣೆಗಾರ ಇರ್ಫಾನ್ ಪಠಾಣ್ ಪ್ರಶ್ನಿಸಿದ್ದಾರೆ.

ವಿರಾಟ್ ಕೊಹ್ಲಿ ಅವರು ಬಾರ್ಡರ್–ಗಾವಸ್ಕರ್ ಟ್ರೋಫಿಯಲ್ಲಿ ಆಫ್‌ಸ್ಟಂಪ್ ಹೊರಗಿನ ಎಸೆತಗಳನ್ನು ತಡವಿ ಔಟಾಗಿದ್ದಾರೆ. ಇದೇ ತಪ್ಪನ್ನು ಪ್ರತಿ ಯೊಂದು ಇನಿಂಗ್ಸ್‌ನಲ್ಲಿಯೂ ಪುನರಾವರ್ತಿಸುತ್ತಿರುವುದು ಬಹಳಷ್ಟು ಚರ್ಚೆಗೆ ಕಾರಣವಾಗಿದೆ. ಸರಣಿಯ ಒಂಬತ್ತು ಇನಿಂಗ್ಸ್‌ಗಳಿಂದ ಅವರು 190 ರನ್ ಗಳಿಸಿದ್ದಾರೆ.

ಭಾನುವಾರ ಟೆಸ್ಟ್ ಪಂದ್ಯದ ನಂತರ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಆಲ್‌ರೌಂಡರ್ ಇರ್ಫಾನ್, 'ಸೂಪರ್ ಸ್ಟಾರ್ ಸಂಸ್ಕೃತಿಯನ್ನು ಅಂತ್ಯಗೊಳಿಸಬೇಕಿದೆ. ತಮ್ಮನ್ನು ತಾವು ಉತ್ತಮ ಪಡಿಸಿಕೊಂಡು, ತಂಡವನ್ನೂ ಬಲಿಷ್ಠಗೊಳಿ ಸಬೇಕು. ಈ ಸರಣಿಗೂ ಮುನ್ನವೂ ಪಂದ್ಯಗಳು ಇದ್ದವು. ಅವುಗಳಲ್ಲಿ ಆಡಲು ಅವರಿಗೆ ಅವಕಾಶಗಳಿದ್ದವು' ಎಂದು ಇರ್ಫಾನ್ ಹೇಳಿದರು.

'ಸಚಿನ್ ತೆಂಡೂಲ್ಕರ್ ಅವರಂತಹ ದಿಗ್ಗಜ ಆಟಗಾರನೇ ತಮಗೆ ಅಗತ್ಯವಿಲ್ಲದಿದ್ದರೂ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡಿದರು. ಅವರಿಗೆ ರನ್ ಗಳಿಸುವ ಆಸೆ ಇರಲಿಲ್ಲ. ಆದರೆ 4–5 ದಿನ ಪಿಚ್‌ನಲ್ಲಿ ಕಾಲ ಕಳೆಯುವ ತಮ್ಮ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಲು ಅವರು ಆ ರೀತಿ ಮಾಡಿದ್ದರು. ವಿರಾಟ್ ಕೊಹ್ಲಿ ಅವರು ದೇಶಿ ಕ್ರಿಕೆಟ್ ಆಡಿ ಎಷ್ಟು ವರ್ಷಗಳಾದವು? ಬಹುಶಃ ಒಂದು ದಶಕಕ್ಕಿಂತಲೂ ಹೆಚ್ಚು' ಎಂದೂ ಇರ್ಫಾನ್ ಹೇಳಿದರು.

ವಿರಾಟ್ 2012ರಲ್ಲಿ ದೆಹಲಿ ಪರ ರಣಜಿ ಟ್ರೋಫಿಯಲ್ಲಿ ಆಡಿದ್ದರು.

'2024ರಲ್ಲಿ ಭಾರತ ತಂಡವು ಆಡಿದ ಪಂದ್ಯಗಳ ಮೊದಲ ಇನಿಂಗ್ಸ್‌ಗಳಲ್ಲಿ ಕೊಹ್ಲಿಯ ಸರಾಸರಿ 15 ಇದೆ. ಕಳೆದ ಐದುವರ್ಷಗಳ ಅವರ ಸಸರಾಸರಿ 30 ಕೂಡ ಇಲ್ಲ. ಇಷ್ಟಾಗಿಯೂ ಭಾರತ ತಂಡದಲ್ಲಿರಲು ಅವರು ಅರ್ಹರೇ? ಅದರ ಬದಲಿಗೆ ಯುವ ಆಟಗಾರರಿಗೆ ಅವಕಾಶಗಳನ್ನು ಕೊಡಿ. ಹೊಸದಾಗಿ ಆಡುವ ಆಟಗಾರರೇ 25 ರಿಂದ 30ರ ಸರಾಸರಿಯಲ್ಲಿ ರನ್ ಗಳಿಸುತ್ತಾರೆ. ತಂಡ ಮೊದಲು ವ್ಯಕ್ತಿಗಳಲ್ಲ' ಎಂದು ಇರ್ಫಾನ್ ಖಾರವಾಗಿ ನುಡಿದರು.

ವೆಸ್ಟ್‌ಬ್ರಿಡ್ಜ್ ಆನಂದ್ ಚೆಸ್ ಅಕಾಡೆಮಿ, ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ದೊಮ್ಮರಾಜು ಮತ್ತು ವಿಶ್ವನಾಥನ್ ಆನಂದ್ ಮಾತುಕತೆ ನಡೆಸಿದರು –ಪ್ರಜಾವಾಣಿ ಚಿತ್ರ:ಪುಷ್ಕರ್ ವಿ.

2025 ಸವಾಲಿನ ವರ್ಷ: ಗುಕೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿ ಕಿರಿಯ ವಯಸ್ಸಿಗೆ ವಿಶ್ವ ಚೆಸ್ ಚಾಂಪಿಯನ್ ಆದ ನಂತರ ಅತ್ಯುನ್ನತ ಕ್ರೀಡಾ ಪುರಸ್ಕಾರ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆಯಾಗಿರುವ ಡಿ. ಗುಕೇಶ್ 2025ರ ಸವಾಲನ್ನು ಎದುರಿಸಲು ಸಜ್ಜಾಗಿದ್ದಾರೆ.

ಈ ನಿಟ್ಟಿನಲ್ಲಿ ಇದೇ 17ರಿಂದ ನೆದರ್ಲೆಂಡ್ಸ್‌ನ ವಿಜ್ಕ್ ಆನ್ ಝೀನಲ್ಲಿ ನಡೆಯುವ ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ಅವರು ಕಣಕ್ಕೆ ಇಳಿಯಲು ಸಿದ್ಧತೆ ನಡೆಸುತ್ತಿದ್ದಾರೆ.

ವೆಸ್ಟ್‌ಬ್ರಿಜ್ ಆನಂದ್ ಚೆಸ್ ಅಕಾಡೆಮಿಯು (ಡಬ್ಲ್ಯುಎಸಿಎ) ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿದ ಅವರು ಆಯ್ದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ನಿಜ, 2025 ನನಗೆ ಸವಾಲಿನ ವರ್ಷ. ಬಹಳಷ್ಟು ಹೊಸ ಮತ್ತು ಆಸಕ್ತಿದಾಯಕ ಟೂರ್ನಿಗಳು ನನ್ನ ಮುಂದಿವೆ. ವಿಶ್ವ ಚಾಂಪಿಯನ್‌ಷಿಪ್ ಈಗ ಮುಗಿದುಹೋದ ಅಧ್ಯಾಯ. ಅದರ ಯಶಸ್ಸಿಗೆ ಮತ್ತು ನಂತರ ದೊರೆತ ಸ್ವಾಗತ ಮತ್ತು ಅಭಿನಂದನೆಗಳಿಂದ ಸಂತಸಗೊಂಡಿದ್ದೇನೆ' ಎಂದು 18 ವರ್ಷ ವಯಸ್ಸಿನ ಗುಕೇಶ್ ಹೇಳಿದರು.

'ಈಗ ಮುಂದಿನ ಹೊಸ ಗುರಿಯತ್ತ ಚಿತ್ತ ಹರಿಸಿದ್ದೇನೆ. ಹೊಸ ಟೂರ್ನಿಗಳನ್ನು ಗೆಲ್ಲುವತ್ತ ಮತ್ತು ಆಟದಲ್ಲಿ ಸುಧಾರಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸುತ್ತಿದ್ದೇನೆ. ಸಾಕಷ್ಟು ಕಲಿಕೆಯೊಂದಿಗೆ ಉತ್ತಮ ಫಲಿತಾಂಶ ಎದುರು ನೋಡುತ್ತಿದ್ದೇನೆ' ಎಂದರು.

'ವಿಶ್ವ ಚಾಂಪಿಯನ್ ಆದ ಬಳಿಕ ನಿರೀಕ್ಷೆಗಳು ಹೆಚ್ಚುವುದು ಸಹಜ. ನಾನು ಕೂಡ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದೇನೆ. ಹಾಗಾಗಿ, ಇತರರ ನಿರೀಕ್ಷೆಗಳಿಗಿಂತ ನನ್ನ ನಿರೀಕ್ಷೆ ಪೂರೈಸುವುದು ಪ್ರಥಮ ಆದ್ಯತೆ ಎಂದು ನಾನು ಭಾವಿಸುತ್ತೇನೆ' ಎಂದು ಹೇಳಿದರು.

ಸಬಲೆಂಕಾಗೆ ಬ್ರಿಸ್ಬೇನ್ ಕಿರೀಟ

ಟ್ರೋಫಿಯೊಂದಿಗೆ ಬೆಲಾರಸ್‌ನ ಅರಿನಾ ಸಬಲೆಂಕಾ –ಎಎಫ್‌ಪಿ ಚಿತ್ರ

ಬ್ರಿಸ್ಬೇನ್ (ಎಎಫ್‌ಪಿ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಭಾನುವಾರ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ಸತತ ಎರಡನೇ ಬಾರಿ ಫೈನಲ್ ಪ್ರವೇಶಿಸಿದ್ದ ಬೆಲಾರಸ್‌ನ 26 ವರ್ಷದ ಆಟಗಾರ್ತಿ 4-6, 6-3, 6-2 ರಿಂದ ರಷ್ಯಾದ ಕ್ವಾಲಿಫೈಯರ್ ಆಟಗಾರ್ತಿ ಪೊಲಿನಾ ಕುದೆರ್ ಮೆಟೊವಾ ಅವರನ್ನು ಮಣಿಸಿದರು. ಆಸ್ಟ್ರೇಲಿಯಾ ಓಪನ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಸಬಲೆಂಕಾ, ಈ ಮೂಲಕ ಮುಂದಿನ ವಾರ ಆರಂಭವಾಗುವ ಟೂರ್ನಿಗೆ ಭರ್ಜರಿ ಸಿದ್ಧತೆ ನಡೆಸಿದರು.

ಕಳೆದ ವರ್ಷ ಪ್ರಶಸ್ತಿ ಸುತ್ತಿನಲ್ಲಿ ಕಜಕಸ್ತಾನದ ಎಲೆನಾ ರಿಬಾಕಿನಾ ಅವರಿಗೆ ಸೋತಿದ್ದ ಸಬಲೆಂಕಾ, ಈ ಬಾರಿಯೂ ಮೊದಲ ಸೆಟ್ ಕಳೆದುಕೊಂಡು ಒತ್ತಡಕ್ಕೆ ಒಳಗಾದರು. ಆದರೆ, ನಂತರ ಲಯಕ್ಕೆ ಮರಳಿದ ಅವರು ಸತತ ಎರಡು ಸೆಟ್‌ಗಳನ್ನು ವಶಮಾಡಿಕೊಂಡರು. ಈ ಹೋರಾಟ 1 ಗಂಟೆ 47 ನಿಮಿಷ ನಡೆಯಿತು. ಅಮೆರಿಕ ಓಪನ್ ಸೇರಿದಂತೆ ಮೂರು ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಸಬಲೆಂಕಾಗೆ ಇದು ವೃತ್ತಿಜೀವನದ 18ನೇ ಪ್ರಶಸ್ತಿಯಾಗಿದೆ.

ಲೆಹೆಸ್ಕಾಗೆ ಪ್ರಶಸ್ತಿ: ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಝೆಕ್ ಗಣರಾಜ್ಯದ ಶ್ರೇಯಾಂಕ ರಹಿತ ಆಟಗಾರ ಇಝಿ ಲೆಹೆಸ್ಕಾ ಗೆದ್ದುಕೊಂಡರು. ಫೈನಲ್ ಹಣಾ ಹಣಿಯಲ್ಲಿ ಲೆಹೆಸ್ಕಾ 4–1 ಮುನ್ನಡೆಯಲ್ಲಿದ್ದಾಗ ಎದುರಾಳಿಯಾಗಿದ್ದ ಅಮೆರಿಕದ ಅಜಾನುಬಾಹು ಆಟಗಾರ ರೀಲಿ ಒಪೆಲ್ಕಾ ಅವರು ಮಣಿಕಟ್ಟಿನ ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. 21 ವರ್ಷ ವಯಸ್ಸಿನ ಲೆಹೆಸ್ಕಾ ಅವರಿಗೆ ಇದು ಎರಡನೇ ಎಟಿಪಿ ಪ್ರಶಸ್ತಿಯಾಗಿದೆ.

ಟೆನಿಸ್: ಮುಖ್ಯ ಸುತ್ತಿಗೆ ನಗಾಲ್



ಸುಮಿತ್

ಆಕ್ಲೆಂಡ್ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಭಾನುವಾರ ತಮಗಿಂತ ಉನ್ನತ ರ‍್ಯಾಂಕ್ ಆಟಗಾರ, ಫ್ರಾನ್ಸ್‌ನ ಆ್ಯಡ್ರಿಯನ್ ಮನಾರಿಯೊ ವಿರುದ್ಧ ನೇರ ಸೆಟ್‌ಗಳ ಜಯ ಸಾಧಿಸಿ, ಎಎಸ್‌ಬಿ ಕ್ಲಾಸಿಕ್ ಟೆನಿಸ್ ಟೂರ್ನಿಯಲ್ಲಿ ಮುಖ್ಯಸುತ್ತು ಪ್ರವೇಶಿಸಿದರು.

ವಿಶ್ವ ಕ್ರಮಾಂಕದಲ್ಲಿ 98ನೇ ಸ್ಥಾನದಲ್ಲಿರುವ 26 ವರ್ಷ ವಯಸ್ಸಿನ ನಗಾಲ್, ಕ್ವಾಲಿಫೈಯರ್‌ನ ಅಂತಿಮ ಸುತ್ತಿನಲ್ಲಿ 7-6(5), 6-3ರಿಂದ 66ನೇ ರ‍್ಯಾಂಕ್‌ನ ಮನ್ನಾರಿಯೊ ಅವರನ್ನು ಹಿಮ್ಮೆಟ್ಟಿಸಿದರು.

ಕಳೆದ ಹಲವು ಟೂರ್ನಿಗಳಲ್ಲಿ ನೀರಸ ಪ್ರದರ್ಶನ ನೀಡಿರುವ ನಗಾಲ್, ಇಲ್ಲಿ ಮುಖ್ಯ ಸುತ್ತು ಪ್ರವೇಶಿಸುವ ಮೂಲಕ ಆಸ್ಟ್ರೇಲಿಯಾ ಓಪನ್‌ಗೆ ಉತ್ತಮ ಸಿದ್ಧತೆ ನಡೆಸುತ್ತಿದ್ದಾರೆ. ಋತುವಿನ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯು ಮೆಲ್ಬರ್ನ್‌ನಲ್ಲಿ ಇದೇ 12ರಂದು ಆರಂಭವಾಗಲಿದೆ.

ಕಳೆದ ವರ್ಷ ಇದೇ ಸಮಯದಲ್ಲಿ 17ನೇ ಕ್ರಮಾಂಕದಲ್ಲಿದ್ದ ಮನಾರಿಯೊ ವಿರುದ್ಧ ಗೆಲುವು ಸಾಧಿಸಿರುವುದು ನಗಾಲ್ ಅವರ ಆತ್ಮವಿಶ್ವಾಸ ವೃದ್ಧಿಸಿದೆ.

ಚೆಸ್: ಕರ್ನಾಟಕದ ಪಳನಿ ಶುಭಾರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕದ ಆಟಗಾರ ಜಿ. ಪಳನಿ ಇಲ್ಲಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಭಾನುವಾರ ಆರಂಭಗೊಂಡ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮೊದಲ ದಿನದಂದು ಶುಭಾರಂಭ ಮಾಡಿದರು.

ಮುಕ್ತ ವಿಭಾಗದ ಮೊದಲ ಸುತ್ತಿನಲ್ಲಿ ಟೂರ್ನಿಯ 2ನೇ ಶ್ರೇಯಾಂಕಿತ ಜಿ. ಪಳನಿ, ಮುಜಿಬ್ ರೆಹಮಾನ್ ವಿರುದ್ಧ ಗೆಲುವು ಸಾಧಿಸಿದರು. ಆದರೆ, ಅಗ್ರ ಶ್ರೇಯಾಂಕದ ಆಟಗಾರ ತಮಿಳುನಾಡಿನ ಸ್ಪೆನ್ಸರ್ ಅಲೆಗ್ಸಾಂಡರ್ ಗಿಲ್ಬರ್ಟ್, ಮಿತೇಶ್‌ಬಾಯ್ ಪಟೇಲ್ ಎದುರು ಮಣಿದರು.

3ನೇ ಶ್ರೇಯಾಂಕದ, ಮಹಾರಾಷ್ಟ್ರದ ದೇವೇಂದ್ರ ಶ್ರೀಹರಿ ವೈದ್ಯ, ನಜಿನಿನ್ ರಫಿ ವಿರುದ್ಧ ಜಯ ಗಳಿಸಿದರು.

ಟೂರ್ನಿಯಲ್ಲಿ ವಿವಿಧ ರಾಜ್ಯಗಳ 180 ಆಟಗಾರರು ಪಾಲ್ಗೊಂಡಿದ್ದಾರೆ. 18 ವರ್ಷದ ಒಳಗಿನ ಬಾಲಕ–ಬಾಲಕಿಯರು ಹಾಗೂ ಮುಕ್ತ ವಿಭಾಗದಲ್ಲಿ ಸ್ಪರ್ಧೆ ನಡೆದಿದೆ.

59ನೇ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಸ್ಪರ್ಧೆ

ಅಶೋಕ್, ತೇಜಸ್ವಿನಿ ಚಾಂಪಿಯನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಅಶೋಕ್ ಬಿಂದ್ ಮತ್ತು ಕೊಡಗಿನ ತೇಜಸ್ವಿನಿ ಅವರು 59ನೇ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಪ್ರಶಸ್ತಿಯನ್ನು ಗೆದ್ದರು.

ಕರ್ನಾಟಕ ಅಥ್ಲೆಟಿಕ್ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿನ ವಿದ್ಯಾನಗರದ ಜಯಪ್ರಕಾಶ್ ನಾರಾಯಣ್ ರಾಷ್ಟ್ರೀಯ ಯುವ ಕೇಂದ್ರದಲ್ಲಿ ಭಾನುವಾರ ನಡೆದ ಕೂಟದಲ್ಲಿ ಅಶೋಕ್ ಅವರು 10 ಕಿಲೋ ಮೀಟರ್ ದೂರದ ಗುರಿಯನ್ನು 30 ನಿಮಿಷ 46.1 ಸೆಕೆಂಡ್‌ನಲ್ಲಿ ತಲುಪಿದರು. ಮಂಡ್ಯದ ವೆಂಕಟೇಶ ಕೆ.ಕೆ. (30 ನಿ.58.1ಸೆ) ಮತ್ತು ಧಾರವಾಡದ ಮಡಿವಾಳಪ್ಪ ಎಸ್. ಹುಂಬಿ (31 ನಿ. 05ಸೆ) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿದರು.

ತೇಜಸ್ವಿನಿ ಅವರು 38 ನಿಮಿಷ 02.4 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಧಾರವಾಡದ ಶಾಹೀನ್ (38 ನಿ.40.5ಸೆ) ಮತ್ತು ಮೈಸೂರಿನ ಚಿಕ್ಕಮ್ಮ ಎಂ.ಕೆ. (41 ನಿ.11.7ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು.

ಬೆಂಗಳೂರಿನ ಅಶೋಕ್ ಬಿಂದ್

ಕೊಡಗಿನ ತೇಜಸ್ವಿನಿ

ಫಲಿತಾಂಶ: ಪುರುಷರು (10 ಕಿ.ಮೀ): ಅಶೋಕ್ ಬಿಂದ್ (ಬೆಂಗಳೂರು ನಗರ, ಕಾಲ:30 ನಿ.46.1ಸೆ)–1, ವೆಂಕಟೇಶ ಕೆ.ಕೆ. (ಮಂಡ್ಯ)–2; ಮಡಿವಾಳಪ್ಪ ಎಸ್. ಹುಂಬಿ (ಧಾರವಾಡ)–3, ಸಂದೀಪ್ ಟಿ.ಎಸ್. (ತುಮಕೂರು)–4, ಪ್ರತಾಪ ಚಂದ್ರಪ್ಪ ಛಲವಾದಿ (ಧಾರವಾಡ)–5, ವೈಭವ್ ಮಾರುತಿ ಪಾಟೀಲ (ತುಮಕೂರು)–6.

ಬಾಲಕರು: 20 ವರ್ಷದೊಳಗಿನವರು (8 ಕಿ.ಮೀ.): ಭೀಮಾಶಂಕರ್ (ಯಾದಗಿರಿ, ಕಾಲ:26 ನಿ.01.1 ಸೆ)–1, ಚೇತನ್ ಸಿದ್ದರಾಯ ಮುಂಜೆ (ಕೊಡಗು)– 2, ಕರಣ್ ಜೆ.ಆರ್. (ತುಮಕೂರು)– 3, ವಿನಾಯಕ ರಾಥೋಡ್ (ಧಾರವಾಡ)–4, ದೇವರಾಜ್ ಕಲ್ಲಪ್ಪ ದೊಡ್ಡಮನಿ (ಧಾರವಾಡ)–5, ಅಂಶಿತ್ ಬಿ.ಜೆ. (ಕೊಡಗು)–6. 18 ವರ್ಷದೊಳಗಿನವರು (6 ಕಿ.ಮೀ): ನಿಖಿಲ್ ಸಿ. (ಬೆಂಗಳೂರು ನಗರ, ಕಾಲ: 20 ನಿ. 20.8ಸೆ)–1, ರಘುವೀರ ಎಲ್. (ದಕ್ಷಿಣ ಕನ್ನಡ)–2; ಸಮರ್ಥ ದೀಪಕ್ (ಕೊಡಗು)–3, ಲಕ್ಷ್ಮಣ ಸಿದ್ದಪ್ಪ ಹಿರಳಿ (ಕೊಡಗು)–4, ಪ್ರತೀಕ್ ಪ್ರತೀಕ್ ದೇಗಾಂವಿ (ಕೊಡಗು)–5, ಚಂದ್ರಶೇಖರ ಬಸವರಾಜ (ಕೊಪ್ಪಳ)–6. 16 ವರ್ಷದೊಳಗಿನವರು (2 ಕಿ.ಮೀ): ಪ್ರವೀಣ್ ಅರ್ಜುನ್ ಅರಗೆ (ಕೊಡಗು, ಕಾಲ: 7ನಿ. 08.1ಸೆ)–1, ಚನ್ನಬಸವ ಬಿ. (ಕೊಡಗು)–2; ಪವನ್ ವಾಲಿಕರ್ (ಹಾವೇರಿ)–3, ನವೀನ್ ಕುಮಾರ್ (ಕೊಪ್ಪಳ)–4, ವೆಂಕಟೇಶ್ (ರಾಯಚೂರು)–5, ರಕ್ಷತ್ ಆರ್ (ಉಡುಪಿ)–6.

ಮಹಿಳೆಯರು (10 ಕಿ.ಮೀ): ತೇಜಸ್ವಿನಿ (ಕೊಡಗು, ಕಾಲ: 38 ನಿ.02.4ಸೆ)–1, ಶಾಹೀನ್ ಡಿ (ಧಾರವಾಡ)–2, ಚಿಕ್ಕಮ್ಮ ಎಂ.ಕೆ (ಮೈಸೂರು)–3, ಯುವರಾಣಿ (ರಾಯಚೂರು)–4, ನಕೋಶ ಮಂಗಣಕರ (ಬೆಳಗಾವಿ)–5, ಎಚ್.ಎಂ.ಹರ್ಷಿತಾ (ಮೈಸೂರು)–6.

ಬಾಲಕಿಯರು: 20 ವರ್ಷದೊಳಗಿನವರು (8 ಕಿ.ಮೀ.): ವೈಷ್ಣವಿ ರಾವಲ್ (ಬೆಳಗಾವಿ, ಕಾಲ: 22ನಿ.37.4ಸೆ)–1, ನೀತು ಕುಮಾರಿ (ಬೆಂಗಳೂರು)–2, ಸೀಮಾ ಮಹಾಂತೇಶ (ಬೆಳಗಾವಿ)–3, ಎಚ್.ವಿ. ದೀಕ್ಷಾ (ಶಿವಮೊಗ್ಗ)–4, ಪ್ರಣಮ್ಯಾ ಎನ್. (ದಕ್ಷಿಣ ಕನ್ನಡ)–5, ಸೌಜನ್ಯಾ ಪೂಜೇರಿ (ಧಾರವಾಡ)–6. 18 ವರ್ಷದೊಳಗಿನವರು (4 ಕಿ.ಮೀ): ನಂದಿನಿ ಜಿ. (ಉಡುಪಿ, ಕಾಲ: 16 ನಿ.24.12ಸೆ)–1, ಧನ್ಯಶ್ರೀ ಪಾಟೀಲ (ಬೆಳಗಾವಿ)–2, ಸಂಜನಾ ಬಸವರಾಜ ಇಂಗಳಗಿ (ಗದಗ)–3, ಇಂಪನಾ ಕೆ.ಆರ್. (ಬೆಂಗಳೂರು ನಗರ)–4, ಸಾನಿಯಾ ಮೌಲಾಲಿ ಸಾಬ್ (ಧಾರವಾಡ)–5, ಸಂತೋಷಿ ಸುರೇಶ ರೇಡೆಕರ್ (ಕೊಡಗು)–6. 16 ವರ್ಷದೊಳಗಿನವರು (2 ಕಿ.ಮೀ): ಅಕ್ಷರಾ ಮಜುಕರ್ (ಬೆಳಗಾವಿ, ಕಾಲ: 8 ನಿಮಿಷ 24.6ಸೆ)–1, ರಂಜಿತಾ (ಮಂಡ್ಯ)–2, ತಾಜ್ನವಿ ಡಿ.ಡಿ. (ಕೊಡಗು)–3, ಪ್ರಿಯಾಂಕಾ ಮಾರುತಿ ಭಜಂತ್ರಿ (ದಕ್ಷಿಣ ಕನ್ನಡ)–4, ಭವಿಷ್ಯಾ ಡಿ.ಕೆ. (ಕೊಡಗು)–5, ಅಂಕಿತಾ ಯಾದವ (ಬಾಗಲಕೋಟೆ)–6.

ಮಯಂಕ್ ಶತಕ: ಕ್ವಾರ್ಟರ್‌ಗೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಯಂಕ್ ಅಗರವಾಲ್ ಅಮೋಘ ಶತಕದ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಜಯಿಸಿತು. ಇದರೊಂದಿಗೆ ನೇರವಾಗಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಕರ್ನಾಟಕ ತಂಡದ ನಾಯಕ ಮಯಂಕ್ (ಔಟಾಗದೆ 116; 119ಎ, 4X9, 6X4) ಟೂರ್ನಿಯಲ್ಲಿ ನಾಲ್ಕನೇ ಶತಕ ದಾಖಲಿಸಿದರು. ಅಲ್ಲದೇ ಅವರು ಒಟ್ಟು ಏಳು ಪಂದ್ಯಗಳಿಂದ 613 ರನ್ ಗಳಿಸಿದರು. ಕರ್ನಾಟಕ 9 ವಿಕೆಟ್‌ಗಳಿಂದ ನಾಗಾಲ್ಯಾಂಡ್ ಎದುರು ಜಯಿಸಿತು.

ಅಹಮದಾಬಾದಿನ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಗಾಲ್ಯಾಂಡ್ ತಂಡದ ನಾಯಕ ರಾಂಗ್ಸೆನ್ ಜೊನಾಥನ್ (51; 73ಎ, 4X4, 6X1) ಮತ್ತು ಚೇತನ್ ಬಿಷ್ಟ್ (ಔಟಾಗದೆ 77; 73ಎ, 4X6, 6X2) ಅವರಿಬ್ಬರೂ ಅರ್ಧಶತಕ ಗಳಿಸಿದರು. ಇದರಿಂದಾಗಿ ತಂಡವು 48.3 ಓವರ್‌ಗಳಲ್ಲಿ 206 ರನ್ ಗಳಿಸಿತು. ಕರ್ನಾಟಕದ ಸ್ಪಿನ್ನರ್ ಶ್ರೇಯಸ್ ಗೋಪಾಲ್ (24ಕ್ಕೆ4) ಮತ್ತು ಅಭಿಲಾಷ್ ಶೆಟ್ಟಿ (42ಕ್ಕೆ2) ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್

ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ ತಂಡದ ಆರಂಭಿಕ ಬ್ಯಾಟರ್ ನಿಕಿನ್ ಜೋಸ್ (1 ರನ್) ನಾಲ್ಕನೇ ಓವರ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆದರೆ ಉತ್ತಮ ಫಾರ್ಮ್‌ನಲ್ಲಿರುವ ಮಯಂಕ್ ಮತ್ತು ಕೆ.ವಿ. ಅನೀಶ್ (ಔಟಾಗದೆ 82; 95ಎ, 4X10) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 198 ರನ್ ಸೇರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಇನ್ನಿತರ ಗುಂಪುಗಳಿಂದ ಗುಜರಾತ್, ಮಹಾರಾಷ್ಟ್ರ, ವಿದರ್ಭ ಮತ್ತು ಬರೋಡಾ ತಂಡಗಳೂ ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

ಸಂಕ್ಷಿಪ್ತ ಸ್ಕೋರು: ನಾಗಾಲ್ಯಾಂಡ್: 48.3 ಓವರ್‌ಗಳಲ್ಲಿ 206 (ಹೆಮ್ ಚೆಟ್ರಿ 24, ರಾಂಗ್ಸೆನ್ ಜೊನಾಥನ್ 51, ಚೇತನ್ ಬಿಷ್ಟ್ ಔಟಾಗದೆ 77, ಅಭಿಲಾಷ್ ಶೆಟ್ಟಿ 42ಕ್ಕೆ2, ಶ್ರೇಯಸ್ ಗೋಪಾಲ್ 24ಕ್ಕೆ4) ಕರ್ನಾಟಕ: 37.5 ಓವರ್‌ಗಳಲ್ಲಿ 1 ವಿಕೆಟ್‌ಗೆ 207 (ಮಯಂಕ್ ಅಗರವಾಲ್ ಔಟಾಗದೆ 116, ಕೆ.ವಿ. ಅನೀಶ್ ಔಟಾಗದೆ 82, ಇಮ್ಲಿವತಿ ಲೆಮ್ಟೂರ್ 38ಕ್ಕೆ1)

ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ.

ALVA'S CENTRAL SCHOOL
(CBSE Aff.No.830919) &
ENGLISH MEDIUM SCHOOL
(State Syllabus) Puthige, Moodubidire – 574227
ALVA'S Education Foundation
REGISTRATION OPEN FOR 2025-26
CBSE 5th 6th 7th 8th 9th 10th
State Syllabus 6th 7th 8th 9th 10th
Effective IIT and NEET Foundation Coaching for interested selected students from 6th to 10th Std.
For more details contact
7760272525 | 7026529757 | 6366377824 | 9071705131
www.alvascentralschool.com | www.alvasschools.com